ಸಮಾಜ ಕಲ್ಯಾಣ ಇಲಾಖೆ

SOCIAL WELFARE DEPARTMENT

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ

Karnataka State Commission for Safai Karmacharis

# ವಾರ್ಷಿಕ ವರದಿ 2022 - 23

# ANNUAL REPORT 2022 - 23






ಯಂತ್ರವನ್ನು ಬಳಸಿರಿ

ಮನುಷ್ಯರನ್ನು ಮ್ಯಾನ್ ಹೋಲ್‌ಗೆ ಇಳಿಸುವುದು ಅಪರಾಧ



# ಪರಿವಿಡಿ


| ಕ್ರ. ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಅಧ್ಯಕ್ಷರ ನುಡಿ | 1-4 |
| 2 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕರ್ತವ್ಯ ಮತ್ತು ಜವಾಬ್ದಾರಿಗಳು | 5-7 |
| 3 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧಿಕಾರಿ ಸಿಬ್ಬಂದಿಗಳ ವಿವರ | 8 |
| 4 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ 2022-23ನೇ ಸಾಲಿನ ಕ್ರಿಯಾಯೋಜನೆ ಹಾಗೂ ಖರ್ಚಾಗಿರುವ ಅನುದಾನ ಮತ್ತು ಉಳಿಕೆ ಅನುದಾನದ ವಿವರ. | 9 |
| 5 | 2022-23ನೇ ಸಾಲಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸ್ವೀಕೃತವಾಗಿರುವ ಮನವಿಗಳು ಹಾಗೂ ಅವುಗಳ ಮೇಲೆ ಕೈಗೊಂಡ ಕ್ರಮ. | 10 |
| 6 | ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸ್ಯಾನಿಟರಿ ಲೆಟ್ರಿನ್‌ಗಳಾಗಿ ಪರಿವರ್ತಿಸಿರುವ ಬಗ್ಗೆ ಮಾಹಿತಿ | 11 |
| 7 | ರಾಜ್ಯದಲ್ಲಿ ಗುರುತಿಸಲ್ಪಟ್ಟ ಸಫಾಯಿ ಕರ್ಮಚಾರಿಗಳ ಜಿಲ್ಲಾವಾರು ಜನಸಂಖ್ಯಾ ವಿವರ. | 12 |
| 8 | 2019-20 ರಿಂದ 2023-24 ರವರೆಗೆ ಎಂ.ಎಸ್ ಕಾಯ್ದೆ ಮತ್ತು ನಿಯಮ 2013ರನ್ನು ಉಲ್ಲಂಘನೆ ಮಾಡಿದ ಪ್ರಕರಣಗಳ ವಿವರ | 13 |
| 9 | 1993 ರಿಂದ 2021-23ರವರೆಗೆ ರಾಜ್ಯದಲ್ಲಿ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಮೃತಪಟ್ಟವರ ವರ್ಷವಾರು ಮಾಹಿತಿ. | 14 |
| 10 | ಎಂ.ಎಸ್ ಕಾಯ್ದೆ ಹಾಗೂ ನಿಯಮ-2013ನ್ನು ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳು. | 15-18 |
| 11 | ಆಯೋಗದ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮತ್ತು ಸರ್ಕಾರದ ಮಟ್ಟದಲ್ಲಿ ಪೌರ ಕಾರ್ಮಿಕರ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಸ್ಯೆಗಳ ಕುರಿತು ವಿವಿಧ ದಿನಾಂಕಗಳಲ್ಲಿ ನಡೆದ ಸಭೆಗಳಲ್ಲಿ ಕೈಗೊಂಡ ತೀರ್ಮಾನ. | |
| ಎ | ದಿ:18.04.2022ರಂದು ಕೊಪ್ಪಳದಲ್ಲಿ ನಡೆದ ಸಭೆ. | 19 |
| ಬಿ | ದಿ:26.04.2022ರಂದು ಹಾಸನದಲ್ಲಿ ನಡೆದ ಸಭೆ. | 20-21 |
| ಸಿ | ದಿ:27.04.2022ರಂದು ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ. | 22 |
| ಡಿ | ದಿ:17.05.2022ರಂದು ಕೋಲಾರ ಜಿಲ್ಲೆ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ನಡೆದ ಸಭೆ. | 23 |
| ಇ | ದಿ:18.05.2022ರಂದು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆ. | 24 |
| ಎಫ್ | ದಿ:25.05.2022 ಮತ್ತು 26.05.2022ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆ | 25 |
| ಜಿ | ದಿ:01.06.2022ರಂದು ಬಿಬಿಎಂಪಿ ಪೂರ್ವವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದುಕೊರತೆಗಳ ಬಗ್ಗೆ ನೇರ ಸಂವಾದ ಮತ್ತು ಅಧಿಕಾರಿಗಳೊಡನೆ ನಡೆದ ಸಭೆ. | 26 |
| ಎಚ್ | ದಿ:09.06.2022ರಂದು ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಸೆಕ್ಷನ್ 26 ಅನ್ವಯ ರಚಿಸಿರುವ ರಾಜ್ಯ ಮೇಲ್ವಿಚಾರಣಾ ಸಮಿತಿಯ 5ನೇ ಸಭೆ. | 27-28 |

| | | |
|---|---|---|
| ಐ | ದಿ:14.06.2022 ಮತ್ತು 15.06.2022ರಂದು ತುಮಕೂರು ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಸಭೆ. | 29-30 |
| ಜೆ | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆದ ಪೌರ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ನಡೆದ ಸಭೆ | 31 |
| ಕೆ | ದಿ:16.07.2022ರಂದು ಟಿ.ನರಸೀಪುರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ನಡೆದ ಸಭೆ | 32 |
| ಎಲ್ | ದಿ:26.07.2022ರಂದು ಗದಗ ಜಿಲ್ಲೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ | 33 |
| ಎಮ್ | ದಿ:08.08.2022ರಂದು ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಲು ನಡೆದ ಸಭೆ | 34-35 |
| ಎನ್ | ದಿ:25.08.2022ರಂದು ಬೆಳಗಾವಿ ಜಿಲ್ಲೆಯಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಸಭೆ. | 36-37 |
| ಒ | ದಿ:30.09.2022ರಂದು ನಡೆದ ಪ್ರಗತಿ ಪರಿಶೀಲನಾ ಸಭೆ. | 38 |
| ಪಿ | ದಿ:01.10.2022ರಂದು ಯಾದಗಿರಿ ಜಿಲ್ಲೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ. | 39-41 |
| ಕ್ಯೂ | ದಿ:15.12.2022ರಂದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಕುರಿತು ನಡೆದ ಸಭೆ. | 42-43 |
| ಆರ್ | ದಿ:31-01-2023ರಂದು ಪಾಂಡವಪುರ ಪುರಸಭೆಗೆ ಸಂಬಂಧಿಸಿದಂತೆ ಸಭೆ. | 44-45 |
| ಎಸ್ | ದಿನಾಂಕ:06.02.2023ರಂದು ಮಂಡ್ಯ ಜಿಲ್ಲೆಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ನಿ) ಇಲ್ಲಿ ಮಾನ್ಯ ಶ್ರೀ ಎಂ.ಶಿವಣ್ಣ (ಕೋಟೆ) ಮಾನ್ಯ ಅಧ್ಯಕ್ಷರುರವರ ಅಧ್ಯಕ್ಷತೆಯಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದುಕೊರತೆ ಕುರಿತು ಸಭಾ ನಡವಳಿಗಳು | 46-47 |
| ಓ | ದಿ:13.03.2023ರಂದು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆ. | 48-61 |
| 12 | ದಿ:01.12.2020ರಿಂದ ಸರ್ಕಾರದ ವಿವಿಧ ಇಲಾಖೆಗಳಿಂದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಸಫಾಯಿ ಕರ್ಮಚಾರಿಗಳ ಶ್ರೇಯೋಭಿವೃದ್ಧಿಗಾಗಿ ಹೊರಡಿಸಿರುವ ಸರ್ಕಾರದ ಆದೇಶಗಳು/ಸುತ್ತೋಲೆಗಳು ಮತ್ತು ಅಧಿಸೂಚನೆಗಳ ವಿವರ | 62-65 |
| 13 | ರಾಜ್ಯದ ಪೌರಕಾರ್ಮಿಕರ ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅಭಿವೃದ್ಧಿಗಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಆಯೋಗದ ಶಿಫಾರಸ್ಸುಗಳು | 66-70 |
| 14 | ಒಡಿಸ್ಸಾ ರಾಜ್ಯಕ್ಕೆ ದಿನಾಂಕ:06.04.2022 ರಿಂದ 08.04.2022 ರವರೆಗೆ ಭೇಟಿ ನೀಡಿ ನಡೆಸಿದ ಅಧ್ಯಯನದ ವರದಿ | 71-75 |
| 15 | ಗುಜರಾತ್ ರಾಜ್ಯದ ಅಧ್ಯಯನ ಪ್ರವಾಸದ ಶಿಫಾರಸ್ಸುಗಳು | 76-78 |
| 16 | ಸಿಂಗಾಪುರ ಅಧ್ಯಯನ ವರದಿ ಮತ್ತು ಶಿಫಾರಸ್ಸುಗಳು | 79-81 |
| 17 | ಆಯೋಗದ ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರು ರಾಜ್ಯಾದ್ಯಂತ ಜಿಲ್ಲಾ ಪ್ರವಾಸ ಕೈಗೊಂಡಿರುವ ಛಾಯಾಚಿತ್ರಗಳ ವಿವರಗಳು. | 82-90 |
| | ನಾನು ಕಂಡ ಸಫಾಯಿ ಕರ್ಮಚಾರಿಗಳ ಬದುಕು (ಮಾನ್ಯ ಅಧ್ಯಕ್ಷರು) | 91-92 |

# “ಅಧ್ಯಕ್ಷರ ನುಡಿ”

ಕರ್ನಾಟಕ ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳು ಎದುರಿಸುತ್ತಿರುವ ಸಮಸ್ಯೆಗಳು/ ಕುಂದುಕೊರತೆಗಳನ್ನು ಗಣನೆಗೆ ತೆಗೆದುಕೊಂಡು, ಇವರಿಗೆ ಸಮಾಜದಲ್ಲಿ ನೀಡಿರುವ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ನಿರ್ಮೂಲನೆ ಮಾಡುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ರಚನಾತ್ಮಕ ಕಾರ್ಯಕ್ರಮಗಳಾಗಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ 2013ರನ್ವಯ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವನ್ನು ಸ್ಥಾಪಿಸಲಾಗಿದೆ.

ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸಫಾಯಿ ಕರ್ಮಚಾರಿಗಳು ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗತಕಾಲದಿಂದ ಆಗುತ್ತಿರುವ ಅನ್ಯಾಯವನ್ನು ನಿರ್ಮೂಲನೆ ಮಾಡಿ ಮಲಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧ ಮಾಡಲು ರೂಪಿಸಿರುವ ಕಾಯ್ದೆ–ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ದಿ:01.12.2020ರಂದು ನನ್ನನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿರುತ್ತಾರೆ. ಈ ಹಿಂದೆ ಕರ್ನಾಟಕ ರಾಜ್ಯದ ಆರ್ಥಿಕ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ತೋಟಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಕೃಷಿ ಖಾತೆಗಳನ್ನು ನಿಷ್ಠೆಯಿಂದ ನಿಭಾಯಿಸಿರುವ ನನಗೆ ಸರ್ಕಾರವು ಈ ಆಯೋಗದ ಅಧ್ಯಕ್ಷರ ಸ್ಥಾನವನ್ನು ನೀಡಿರುವುದಕ್ಕೆ ಗೊಂದಲವಿತ್ತು. ಈ ಸಂದರ್ಭದಲ್ಲಿ ಶ್ರೀಶ್ರೀಶ್ರೀ ಜಗದ್ಗುರು ಶಿವರಾತ್ರಿ ದೇಶೀ ಕೇಂದ್ರ ಮಹಾಸ್ವಾಮಿಗಳು, ಸುತ್ತೂರು ಮಠ, ಮೈಸೂರುರವರು ಈ ಆಯೋಗದ ಅಧ್ಯಕ್ಷರ ಸ್ಥಾನ ದೊರೆತಿರುವುದು ಬಹಳ ಸಂತಸದ ವಿಷಯವಾಗಿದೆ. ಅತಿ ಕಟ್ಟಕಡೆಯ ಜನರ ಸೇವೆಯನ್ನು ಮಾಡುವುದು ಪುಣ್ಯವೆಂದು ಭಾವಿಸಿ ಇವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗೆ ಶ್ರಮಿಸುವಂತೆ ನಿರ್ದೇಶಿಸಿದರು.

ಆಯೋಗದ ಕಾರ್ಯಚಟುವಟಿಕೆಗಳನ್ನು ಘನಸರ್ಕಾರವು ಗಮನಿಸಿ ಆಯೋಗದ ಅಧ್ಯಕ್ಷರಾದ ನನಗೆ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿರವರು ಸಚಿವ ಸಂಪುಟದರ್ಜೆಯನ್ನು ನೀಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಫಾಯಿ ಕರ್ಮಚಾರಿಗಳಿಗೆ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯನ್ವಯ ಕನಿಷ್ಠ ವೇತನ ಪಾವತಿ, ಇ.ಎಸ್.ಐ ಮತ್ತು ಪಿ.ಎಫ್ ಕಡಿತ, ಸ್ವಚ್ಛತೆ ಸುರಕ್ಷತಾ ಪರಿಕರಗಳ ಬಳಕೆ, ವೈದ್ಯಕೀಯ ಸೇವೆ, ಅವರ ಮಕ್ಕಳ ವಿದ್ಯಾಭ್ಯಾಸ, ಯು.ಜಿ.ಡಿ. ಸ್ವಚ್ಛಗೊಳಿಸುವಾಗ ಮಾನವ ಶಕ್ತಿ ಬಳಕೆ ಮಾಡದೇ ಯಂತ್ರಗಳನ್ನು ಉಪಯೋಗಿಸುವುದು ಹಾಗೂ ನಿಯಮ ಉಲ್ಲಂಘಿಸಿದ್ದಲ್ಲಿ ದಂಡ ವಿಧಿಸುವುದು, ಮೂಲಭೂತ ಸೌಕರ್ಯ ಒದಗಿಸುವುದು ಮುಂತಾದ ವಿಷಯಗಳ ಕುರಿತು ಆಯೋಗದಿಂದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸರ್ಕಾರೇತರ ಸಂಸ್ಥೆಗಳ ಹಾಗೂ ವಿವಿಧ ಇಲಾಖೆಗಳ

ಸಮನ್ವಯದೊಂದಿಗೆ ಜಿಲ್ಲಾಧಿಕಾರಿಗಳ ಮೂಲಕ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗುತ್ತಿರುತ್ತದೆ.

ಕೋವಿಡ್-19 ಸಮಯದಲ್ಲಿ ಎಲ್ಲಾ ಪೌರಕಾರ್ಮಿಕರು ತಮ್ಮ ಪ್ರಾಣವನ್ನು ಲೆಕ್ಕಿಸದೇ ಸಮಾಜದ ಆರೋಗ್ಯವನ್ನು ರಕ್ಷಿಸುವ ಸಲುವಾಗಿ ಪ್ರತಿನಿತ್ಯ ಕಾರ್ಯನಿರ್ವಹಿಸಿ ಕೊರೋನಾ ವಾರಿಯರ್ಸ್ ಆಗಿ ಕೊರೋನಾ ನಿರ್ಮೂಲನೆಗಾಗಿ ಶ್ರಮಿಸಿರುತ್ತಾರೆ. ಇಂತಹ ಆರೋಗ್ಯ ರಕ್ಷಕರನ್ನು ಕಾಪಾಡುವ ನಿಟ್ಟಿನಲ್ಲಿ ಹಲವು ಜಿಲ್ಲೆಗಳಿಗೆ ಖುದ್ದಾಗಿ ಭೇಟಿ ನೀಡಿ ಅವರಿಗೆ ನೀಡಬೇಕಾಗಿರುವ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ನೀಡಲು ನಿರ್ದೇಶಿಸಲಾಗಿರುತ್ತದೆ ಹಾಗೂ ಅವರು ಕೆಲಸ ಮಾಡುವ ಸ್ಥಳಗಳಿಗೆ ಭೇಟಿ ನೀಡಿ ಅವರ ಕುಂದುಕೊರತೆಗಳನ್ನು ಆಲಿಸಲಾಗಿದೆ.

ಎಂ.ಎಸ್ ಕಾಯ್ದೆ ಮತ್ತು ನಿಯಮ 2013ರ ಪ್ರಕಾರ, ಮಲಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಗೊಳಿಸಿದ್ದರೂ ಸಹ, ಹಲವು ಕಡೆ ಈ ಬಗ್ಗೆ ಅರಿವಿಲ್ಲದೆ ನಗರ ಸ್ಥಳೀಯ ಸಂಸ್ಥೆಯ ಕಾರ್ಮಿಕರಲ್ಲದೆ ಇತರೆ ಕೂಲಿ ಕಾರ್ಮಿಕರನ್ನು ಉಪಯೋಗಿಸಿ ಸ್ವಚ್ಛಗೊಳಿಸಿದಂತಹ ಗುತ್ತಿಗೆದಾರರು/ ಅಧಿಕಾರಿಗಳ ಮೇಲೆ ಕಾಯ್ದೆಯ ಪ್ರಕಾರ ದಂಡ ಮತ್ತು ಶಿಕ್ಷೆಯನ್ನು ಸಹ ವಿಧಿಸಲಾಗಿರುತ್ತದೆ ಹಾಗೂ ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ರೇಡಿಯೋ ಜಿಂಗಲ್ಸ್ ಮತ್ತು ಬಿ.ಎಂ.ಟಿ.ಸಿ ಬಸ್‌ಗಳ ಮೇಲೆ ಭಿತ್ತಿಚಿತ್ರದ ಮೂಲಕ ಸಹ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಬಸ್‌ನಿಲ್ದಾಣ, ಸರ್ಕಾರಿ ಆಸ್ಪತ್ರೆಗಳು, ಸರ್ಕಾರಿ ಸಂಸ್ಥೆಗಳ ಮುಂದೆ ಹಾಗೂ ಸಾರ್ವಜನಿಕರು ಸೇರುವ ಇನ್ನಿತರೆ ಸ್ಥಳಗಳಲ್ಲಿ ಕಾಯ್ದೆಯ ಬಗ್ಗೆ ಸಂಪೂರ್ಣವಾಗಿ ತಿಳಿಯಲು ಕಾಯ್ದೆಯ ಸೆಕ್ಷನ್‌ಗಳ ಮಾಹಿತಿಯನ್ನು ಒಳಗೊಂಡ ಸೈನ್‌ಬೋರ್ಡ್‌ಗಳನ್ನು ಸಹ ಅಳವಡಿಸಲಾಗಿರುತ್ತದೆ. ಎಂ.ಎಸ್ ಕಾಯ್ದೆ ಹಾಗೂ ನಿಯಮ-2013ರ ಬಗ್ಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣವಾಗಿ ಅರಿವು ಮೂಡಿಸುವ ಸಂಬಂಧ 30 ಜಿಲ್ಲೆಗಳಲ್ಲಿ ತರಬೇತಿಯನ್ನು ಸಹ ಹಮ್ಮಿಕೊಳ್ಳಲಾಗಿರುತ್ತದೆ.

ರಾಜ್ಯದಹಲವು ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಸರಿಯಾದ ಸುರಕ್ಷತಾ ಪರಿಕರಗಳನ್ನು ಧರಿಸದೇ ಇರುವುದನ್ನು ಖುದ್ದಾಗಿ ಗಮನಿಸಿ ಕಾರ್ಮಿಕರ ಬಳಿ ವಿಚಾರಣೆ ನಡೆಸಿದಾಗ, ಹಲವು ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳನ್ನು ವಿತರಿಸಲಾಗಿರುತ್ತದೆ. ಆದರೆ ಅವುಗಳನ್ನು ಧರಿಸಲು ತೊಂದರೆ ಇರುವ ಕಾರಣ ಧರಿಸಲು ಕಷ್ಟಕರವಾಗಿದೆ ಎಂದು ತಿಳಿಸಿರುತ್ತಾರೆ. ಆದಕಾರಣ, ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ರವರೊಂದಿಗೆ ಸಮಾಲೋಚನೆ ನಡೆಸಿ ನುರಿತ ವೈದ್ಯರು, ಅಭಿಯಂತರರು, ಸಾಮಾಜಿಕ ಕಾರ್ಯಕರ್ತರು, ಕಾನೂನು ತಜ್ಞರನ್ನೊಳಗೊಂಡಂತೆ ತಂಡವನ್ನು ರಚಿಸಿ, ಒಡಿಸ್ಸಾ ರಾಜ್ಯಕ್ಕೆ ತಂಡದೊಂದಿಗೆ ಭೇಟಿ ನೀಡಿ ಅಲ್ಲಿ ಅಳವಡಿಸಿಕೊಂಡಿರುವ ಬೆಸ್ಟ್ ಪ್ರಾಕ್ಟೀಸ್ ಮಾದರಿಯಲ್ಲಿ ಉತ್ತಮ ರೀತಿಯ ಪರಿಕರಗಳನ್ನು ಬಳಸುವ ಬಗ್ಗೆ ರಾಜ್ಯದಲ್ಲಿ ಸುರಕ್ಷತಾ

ಪರಿಕರಗಳನ್ನು ಉತ್ಪಾದನೆ ಮಾಡುವ ಸಂಸ್ಥೆಗಳಿಂದ ಪರಿಕರಗಳನ್ನು ಖರೀದಿಸಿ, ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ.

ಹಲವು ಜಿಲ್ಲೆಯ ಪೌರಕಾರ್ಮಿಕರ ಕಾಲೋನಿಗಳಿಗೆ ಭೇಟಿ ನೀಡಿ ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಬಗ್ಗೆ ಪರಿಶೀಲಿಸಲಾಗಿರುತ್ತದೆ. ಸರ್ಕಾರದ ವಿವಿಧ ಯೋಜನೆಗಳ ಮೂಲಕ ಮನೆ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಲಾಗಿರುತ್ತದೆ.

ಡಿಸೆಂಬರ್, 2020ರಿಂದ ಇಲ್ಲಿಯವರೆಗೆ 90 ಮ್ಯಾನ್‌ಹೋಲ್, ಸೆಪ್ಟಿಕ್ ಟ್ಯಾಂಕ್, ತೆರೆದ ಚರಂಡಿಗಳನ್ನು ಸ್ವಚ್ಛಗೊಳಿಸುವಾಗ ಕಾರ್ಮಿಕರು ಮೃತಪಟ್ಟ ಪ್ರಕರಣಗಳು ವರದಿಯಾಗಿರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ಎಂ.ಎಸ್ ಕಾಯ್ದೆ ಹಾಗೂ ನಿಯಮ-2013ರ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳು, ಗುತ್ತಿಗೆದಾರರ ಮೇಲೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಪೋಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿರುತ್ತದೆ. ಅಲ್ಲದೆ, ಮ್ಯಾನ್‌ಹೋಲ್ ಸ್ಕ್ಯಾವೆಂಜಿಂಗ್ ನಡೆಯುವ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳಿಗೆ ನಿರ್ದೇಶನ ನೀಡಿ, ಹಲವು ಪ್ರಕರಣಗಳಲ್ಲಿ ದಂಡ, ಶಿಕ್ಷೆಯನ್ನು ವಿಧಿಸಲು ಮತ್ತು ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅನ್ವಯ ಪರಿಹಾರ ಧನ ಮತ್ತು ಪುನರ್ವಸತಿ ಕಲ್ಪಿಸಲು ನಿರ್ದೇಶಿಸಲಾಗಿದ್ದು ಅದರಂತೆ ಕ್ರಮಕೈಗೊಂಡಿರುತ್ತಾರೆ.

ರಾಜ್ಯದ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಹಾಗೂ ಪೌರಕಾರ್ಮಿಕರ ಶೈಕ್ಷಣಿಕ, ಸಾಮಾಜಿಕ, ಅರ್ಥಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೊಳಿಸಲು ರಾಷ್ಟ್ರೀಯ ಕಾನೂನು ಶಾಲೆರವರ ಮೂಲಕ ನಡೆಸಿದ ಅಧ್ಯಯನ ವರದಿಯಲ್ಲಿರುವ ಶಿಫಾರಸ್ಸುಗಳನ್ನು ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕಳುಹಿಸಿದೆ.

ರಾಜ್ಯದಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸುವ ಸಲುವಾಗಿ ರಾಜ್ಯ ಸರ್ಕಾರವು 2013ರಿಂದ 2018 ರವರೆಗೆ 18 ಜಿಲ್ಲೆಗಳಲ್ಲಿ ಸಮೀಕ್ಷೆ ಕೈಗೊಂಡು 5,080 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿರುತ್ತದೆ. ಇನ್ನುಳಿದ 12 ಜಿಲ್ಲೆಗಳಲ್ಲಿ 2020ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ 2,419 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಹಾಗೂ ನವೆಂಬರ್ 2021ರಲ್ಲಿ ಪ್ರಾರಂಭಿಸಲಾಗಿದ್ದು ಫೆಬ್ರವರಿ 2023ಕ್ಕೆ ಅಂತ್ಯಗೊಳಿಸಲಾಗಿದೆ. ಒಟ್ಟು 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರ್ತಿಸಲಾಗಿದೆ.

ರಾಜ್ಯದ ಖಾಸಗಿ ವಲಯಗಳಾದ ಕಂಪನಿಗಳು, ಆಸ್ಪತ್ರೆಗಳು, ಮಾಲ್‌ಗಳು, ಹೋಟೆಲ್‌ಗಳು ಹಾಗೂ ಇನ್ನಿತರೆ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಪಟ್ಟಿ ಲಭ್ಯವಿಲ್ಲದೇ ಇರುವುದರಿಂದ ಇವರಿಗೆ ಸೌಲಭ್ಯಗಳನ್ನು ಕಲ್ಪಿಸುವುದು ಅಸಾಧ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ

ಕಾನೂನು ಶಾಲೆ, ಬೆಂಗಳೂರುರವರ ಮುಖಾಂತರ ಪ್ರಾಯೋಗಿಕವಾಗಿ ಮೈಸೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಲು ಕ್ರಮವಹಿಸಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ನಇ 536 ಎಂಎನ್‌ವೈ 2014 ದಿನಾಂಕ:01/02/2018ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೌರಕಾರ್ಮಿಕರ ನೇಮಕಾತಿ)(ವಿಶೇಷ) ನಿಯಮಗಳು 2017 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗಳು ಸೇವೆಗಳು(ಸಾಮಾನ್ಯ) ವೃಂದ ಮತ್ತು ನೇಮಕಾತಿ) ನಿಯಮಗಳು, 1971ರಲ್ಲಿ ಇರುವ "ಗರಿಷ್ಠ ವಯೋಮಿತಿ 45 ವರ್ಷಗಳನ್ನು ಗರಿಷ್ಠ ವಯೋಮಿತಿ 50 ವರ್ಷಗಳನ್ನು ಮೀರತಕ್ಕದ್ದಲ್ಲ"ಎಂದು ತಿದ್ದುಪಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿದೆ.

ರಾಜ್ಯದಲ್ಲಿ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಸಂಬಂಧ ಮುಖ್ಯಮಂತ್ರಿಗಳು ನನ್ನನ್ನು ಸೇರಿದಂತೆ ಇತರೆ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ,ಸಭೆ ನಡೆಸಿ 3 ತಿಂಗಳೊಳಗಾಗಿ ನೀಡಿರುವ ವರದಿಯ ಮೇರೆಗೆ ಒಟ್ಟು 54,512 ಪೌರಕಾರ್ಮಿಕರ ಪೈಕಿ 11133 ನೇರಪಾವತಿ ಕಾರ್ಮಿಕರನ್ನು ಖಾಯಂಗೊಳಿಸಿದ್ದು, ಬಾಕಿಇರುವ 22,852 ಪೌರಕಾರ್ಮಿಕರನ್ನು 2ನೇ ಹಂತದಲ್ಲಿ ಖಾಯಂಗೊಳಿಸಲು ಮಾನ್ಯ ಮುಖ್ಯಮಂತ್ರಿಗಳಿಂದ ಅನುಮೋದಿಸಲ್ಪಟ್ಟಿದೆ.

ಕಳೆದ ಎರಡು ವರ್ಷಗಳಲ್ಲಿ ಈ ಪುಸ್ತಕದಲ್ಲಿ ನಮೂದಿಸಿರುವ ಅಂಶಗಳನ್ನು ಕ್ರಮಕೈಗೊಳ್ಳಲು ಕಾರಣರಾಗಿರುವ ಆಯೋಗದ ಕಾರ್ಯದರ್ಶಿ, ಆಪ್ತ ಕಾರ್ಯದರ್ಶಿ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಹಾಗೂ ಈ ಎಲ್ಲಾ ಸಾಧನೆಗಳನ್ನು ಮಾಡಲು ಕಾರಣೀಭೂತರಾದ ಸಮಾಜ ಕಲ್ಯಾಣಇಲಾಖಾ ಸಚಿವರಾದ ಶ್ರೀಕೋಟಾ ಶ್ರೀನಿವಾಸ್ ಪೂಜಾರಿರವರಿಗೆ, ಪ್ರಧಾನ ಕಾರ್ಯದರ್ಶಿಗಳಾದ ಮೇಜರ್.ಮಣಿವಣ್ಣನ್.ಪಿ ರವರಿಗೆ ಹಾಗೂ ಇಲಾಖಾ ಪರಿಶಿಷ್ಟ ಜಾತಿ ಉಪಯೋಜನೆಯ ನೋಡೆಲ್ ಅಧಿಕಾರಿಗಳಾದ ಶ್ರೀ.ವೆಂಕಟಯ್ಯರವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಹಿ/–
**ಎಂ.ಶಿವಣ್ಣ (ಕೋಟೆ)**
ಅಧ್ಯಕ್ಷರು,
(ಸಂಪುಟ ದರ್ಜೆ ಸಚಿವರ ಸ್ಥಾನಮಾನ)
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ
ಆಯೋಗ, ಬೆಂಗಳೂರು

## ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಕರ್ತವ್ಯ ಮತ್ತು ಜವಾಬ್ದಾರಿಗಳು

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 50 ಶಾಸನ 2012 ದಿನಾಂಕ:04-01-2013ರನ್ವಯ ರಚನೆಯಾಗಿರುತ್ತದೆ. ಅದರಂತೆ ಆಯೋಗವು ದಿನಾಂಕ:01-02-2013 ರಿಂದ ಅಧಿಕೃತವಾಗಿ ನಂ.1/14, ದಕ್ಷಿಣ ವಿಂಗ್ ನೆಲಮಹಡಿ, ಸಿಲ್ವರ್ ಜೂಬ್ಲಿ ಬ್ಲಾಕ್, ಪಾರ್ಟ್ ಆಫ್ ಯೂನಿಟಿ ಬಿಲ್ಡಿಂಗ್ ಕಾಂಪ್ಲೆಕ್ಸ್, ಮಿಷನ್ ರೋಡ್, ಬೆಂಗಳೂರು-27 ಇಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಸಫಾಯಿ ಕರ್ಮಚಾರಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಹಾಗೂ ಸಾಮಾಜಿಕ ಭದ್ರತೆಗಾಗಿ ಆಯೋಗವು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ, 2013ರ ಕರ್ನಾಟಕ ಅಧಿನಿಯಮ ಸಂಖ್ಯೆ:2 ರನ್ವಯ ಪ್ರಕಾರ್ಯಗಳನ್ನು ನೆರವೇರಿಸುತ್ತಿದೆ.

ಕೇಂದ್ರ ಸರ್ಕಾರವು ಹೊರಡಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಕಾಯ್ದೆ ಮತ್ತು ನಿಯಮವನ್ನು ಪರಿಣಾಮಕಾರಿಯಾಗಿ ರಾಜ್ಯದಲ್ಲಿ ಅನುಷ್ಠಾನದ ಮೇಲ್ವಿಚಾರಣೆ ಮಾಡುವ ಸಂಬಂಧ ಯುಕ್ತ ಪ್ರಾಧಿಕಾರವನ್ನಾಗಿ ನೇಮಿಸಿದೆ.

ಸಫಾಯಿ ಕರ್ಮಚಾರಿಗಳೆಂದರೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಖಾಯಂ ಅಥವಾ ಗುತ್ತಿಗೆ ಆಧಾರದ ಮೇಲೆ ರಸ್ತೆ ಗುಡಿಸಲು ಅಥವಾ ನೈರ್ಮಲ್ಯ ಮತ್ತು ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸಲು ನೇಮಕ ಮಾಡಿಕೊಳ್ಳಲಾದ ವ್ಯಕ್ತಿಗಳು, ಸಫಾಯಿ ಕರ್ಮಚಾರಿಗಳೆಂದರೆ ಮೂಲತ: ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಎಂದರೆ; ದೈಹಿಕವಾಗಿ ಮನುಷ್ಯನ ಮಲ-ಮೂತ್ರವನ್ನು ಸಂಪೂರ್ಣ ಕೊಳೆಯುವ ಮೊದಲೇ ಸ್ವಚ್ಛಗೊಳಸಲು ತೆರೆದ ಚರಂಡಿಗಳು, ಗುಂಡಿಗಳು, ರೈಲ್ವೆಹಳಿಗಳಿಂದ ವಿಲೇವಾರಿ ಮಾಡುವ ಅನೈರ್ಮಲ್ಯ ಕಾರ್ಯದಲ್ಲಿ ನಿರತನಾಗಿರುವ ಅಥವಾ ನಿಯೋಜನೆಗೊಂಡಿರುವ ಒಬ್ಬ ವ್ಯಕ್ತಿ.

## ಆಯೋಗದ ಕರ್ತವ್ಯ & ಜವಾಬ್ದಾರಿಗಳು:

ಕೇಂದ್ರ ಸರ್ಕಾರದ ಕಾಯ್ದೆ **"THE PROHIBITION OF EMPLOYMENT AS A MANUAL SCAVENGERS AND THEIR REHABILITATION ACT AND RULES 2013"**ರಲ್ಲಿ ತಿಳಿಸಿರುವ ಕಂಡಿಕೆಗಳ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಯೋಗವು ಶ್ರಮಿಸುತ್ತಿದೆ. ರಾಜ್ಯ ಆಯೋಗವು "**ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ**" ಕಾಲಕಾಲಕ್ಕೆ ನೀಡುವ ಸಲಹೆ ಸೂಚನೆಗಳನ್ನು ಪಾಲಿಸುತ್ತಿದೆ.

ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿದ್ದು, ಸಿವಿಲ್ ನ್ಯಾಯಾಲಯದ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಆಯೋಗವು quazi judicial ಅಧಿಕಾರವನ್ನು ಹೊಂದಿದ್ದು 1–ಅಧ್ಯಕ್ಷರು, 2–ಸದಸ್ಯರು (1 ಮಹಿಳೆ + 1 ಪುರುಷ) ಹೊಂದಿದ್ದು ಇವರು ಸರ್ಕಾರದಿಂದ ನಾಮ ನಿರ್ದೇಶಿತರಾಗಿರುತ್ತಾರೆ.

1. ಕಾಲಮಿತಿ ಕ್ರಿಯಾಯೋಜನೆಯಡಿಯಲ್ಲಿ ಸಫಾಯಿ ಕರ್ಮಚಾರಿಗಳಿಗೆ ನೀಡಿರುವ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ನಿರ್ಮೂಲ ಮಾಡುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು:
2. ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಪುನರ್ವಸತಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಅನುಷ್ಠಾನಗಳ ಅಧ್ಯಯನ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು ಹಾಗೂ ಅಂತಹ ಕಾರ್ಯಕ್ರಮಗಳ ಮತ್ತು ಯೋಜನೆಗಳ ಅನುಷ್ಠಾನವನ್ನು ಅಧ್ಯಯನ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು ಹಾಗೂ ಅಂತಹ ಕಾರ್ಯಕ್ರಮಗಳ ಮತ್ತು ಯೋಜನೆಗಳ ಸಮನ್ವಯ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
3. ನಿರ್ದಿಷ್ಟ ಕುಂದುಕೊರತೆಗಳನ್ನು ವಿಚಾರಿಸುವುದು ಎಂದರೆ:–
   i. ಸಫಾಯಿ ಕರ್ಮಚಾರಿಗಳ ಯಾವುದೇ ವರ್ಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಅಥವಾ ಯೋಜನೆಗಳು.
   ii. ಸಫಾಯಿ ಕರ್ಮಚಾರಿಗಳ ತೊಂದರೆಗಳನ್ನು ಶಮನಗೊಳಿಸುವ ಉದ್ದೇಶವನ್ನು ಹೊಂದಿರುವ ತೀರ್ಮಾನಗಳು, ಮಾರ್ಗದರ್ಶನಗಳು ಅಥವಾ ಸೂಚನೆಗಳು;
   iii. ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಏಳಿಗೆಗಾಗಿ ಕ್ರಮಗಳು.

iv. ಇವುಗಳನ್ನು ಅನುಷ್ಠಾನಕ್ಕೆ ತರದಿರುವ ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ಗಮನಿಸುವುದು.

4. ಸಫಾಯಿ ಕರ್ಮಚಾರಿಗಳು ಎದುರಿಸುತ್ತಿರುವ ತೊಂದರೆಗಳು ಮತ್ತು ಕುಂದುಕೊರತೆಗಳನ್ನು ಪರಿಗಣಿಸಿ, ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು,
5. ರಾಜ್ಯ ಸರ್ಕಾರವು ತನಗೆ ಕಳುಹಿಸಬಹುದಾದ ಯಾವುದೇ ಇತರೆ ವಿಷಯ.

ಆಯೋಗವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಅದರ ಏಜೆನ್ಸಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ತರಿಸಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು.

**ಆಯೋಗದ ಅಧಿಕಾರಗಳು**: ಆಯೋಗವು, ೮ನೇ ಪ್ರಕರಣದ ಅಡಿಯಲ್ಲಿ ಯಾವುದೇ ವಿಷಯವನ್ನು ತನಿಖೆ ಮಾಡುವಾಗ, ವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಅಡಿಯಲ್ಲಿ ಮತ್ತು ವಿಶೇಷವಾಗಿ ಸಂಬಂಧಪಟ್ಟಂತೆ ಒಂದು ದಾವೆಯನ್ನು ವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದರೆ,

i. ರಾಜ್ಯದ ಯಾವುದೇ ಭಾಗದಿಂದ ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ಪರೀಕ್ಷಿಸುವುದು

ii. ಯಾವುದೇ ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಶೋಧಿಸುವುದನ್ನು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು

iii. ಅಫಿಡೆವಿಟ್‌ಗಳ ಮೂಲಕ ಯಾವುದೇ ಸಾಕ್ಷ್ಯವನ್ನು ಸ್ವೀಕರಿಸುವುದು

iv. ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ನೀಡುವಂತೆ ಅಗತ್ಯಪಡಿಸುವುದು

v. ನಿಯಮಿಸಬಹುದಾದಂತ ಇತರ ಯಾವುದೇ ವಿಷಯ.

## ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ

### ಅಧಿಕಾರಿ/ಸಿಬ್ಬಂದಿಗಳ ವಿವರ.

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳು | ಭರ್ತಿ ಹುದ್ದೆಗಳು |
|---|---|---|---|
| 1 | ಶ್ರೀಮತಿ ಚಂದ್ರಕಲಾ<br>ಕಾರ್ಯದರ್ಶಿ | 01 | 01 |
| 2 | ಶ್ರೀಮತಿ. ಸುವರ್ಣ ಬಾಗಿ(ಪ್ರ)<br>ಸಂಶೋಧನಾ ಅಧಿಕಾರಿ | 01 | – |
| 3 | ಶ್ರೀಮತಿ. ಸುವರ್ಣ ಬಾಗಿ<br>ಸಹಾಯಕ ನಿರ್ದೇಶಕರು | 01 | 01 |
| 4 | ಶ್ರೀಮತಿ. ಬಿ.ಎಸ್.ವಿಮಲ<br>ಆಪ್ತ ಕಾರ್ಯದರ್ಶಿ | 01 | 01 |
| 5 | ಶ್ರೀಮತಿ.ಸುರೇಖ ದೊರೆಗೋಳ್<br>ಕಛೇರಿ ಅಧೀಕ್ಷಕರು | 01 | 01 |
| 6 | ಶ್ರೀಮತಿ.ವಾಣಿ.ಸಿ,ಎ<br>ಪ್ರಥಮ ದರ್ಜೆ ಸಹಾಯಕರು | 01 | 01 |
| 7 | ಶ್ರೀ.ಪುನೀತ್ ಎನ್.ಜಿ<br>ಪ್ರಥಮ ದರ್ಜೆ ಸಹಾಯಕರು | 01 | 01 |
| 8 | ಆಪ್ತ ಸಹಾಯಕರು | 01 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 9 | ದ್ವಿತೀಯ ದರ್ಜೆ ಸಹಾಯಕರು/<br>ಡಾಟಾ ಎಂಟ್ರಿ ಆಪರೇಟರ್ | 04 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 10 | ವಾಹನ ಚಾಲಕರು | 03 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 11 | ಗ್ರೂಪ್ ‘ ಡಿ’ | 03 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| **ಒಟ್ಟು** | | **18** | **06** |

## 2022-23ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದಲ್ಲಿ ನಿಗದಿಪಡಿಸಿರುವ ಅನುದಾನ. (ಮಾರ್ಚ್ 2023ರ ಅಂತ್ಯಕ್ಕೆ)

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮ | ಉಪ ಶೀರ್ಷಿಕೆ | ನಿಗದಿಯಾದ ಅನುದಾನ | ಒದಗಿಸಿದ ಅನುದಾನ | ಖರ್ಚು |
|---|---|---|---|---|---|
| 1 | ಅಧಿಕಾರಿ, ಸಿಬ್ಬಂದಿಗಳ ವೇತನ ಹಾಗೂ ಇನ್ನಿತರೆ ಭತ್ಯೆಗಳು | 002,003,011, 014,020,021 | 66.21 | 66.00 | 59.25 |
| 2 | ಪ್ರಯಾಣ ವೆಚ್ಚಗಳು | 041 | 15.00 | 15.00 | 13.90 |
| 3 | ದೂರವಾಣಿ ವೆಚ್ಚಗಳು | 052 | 2.00 | 02.00 | 0.66 |
| 4 | ಕಟ್ಟಡ ವೆಚ್ಚಗಳು | 071 | 38.00 | 38.00 | 35.90 |
| 5 | ಸಾರಿಗೆ ವೆಚ್ಚಗಳು | 195 | 12.00 | 12.00 | 11.39 |
| 6 | ಅಧ್ಯಕ್ಷರ ಹಾಗೂ ಸದಸ್ಯರುಗಳ ವೇತನ ಹಾಗೂ ಇನ್ನಿತರೆ ಭತ್ಯೆಗಳು ಆಯೋಗದ ಹೊರಸಂಪನ್ಮೂಲ ನೌಕರರ ವೇತನ/ ಆಯೋಗದ ನಿರ್ವಹಣೆ, ಮುದ್ರಣ, ಸಭೆಗಳಿಗೆ ಉಪಹಾರ ಹಾಗೂ ಇನ್ನಿತರೆ/ ಸಫಾಯಿ ಕರ್ಮಚಾರಿಗಳ ಬಗ್ಗೆ ಹಾಗೂ ಎಂ.ಎಸ್.ಕಾಯ್ದೆ 2013ರ ಅನುಷ್ಠಾನ ಸಂಬಂಧ ಅರಿವು/ ಹೊರದೇಶ/ಹೊರರಾಜ್ಯಗಳ ಪ್ರವಾಸ | 059 | 183.00 | 183.00 | 181.21 |
| **ಒಟ್ಟು** | | | **316.21** | **316.00** | **302.31** |

- 13.69 ಲಕ್ಷಗಳು ಆಯೋಗದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳ ಹುದ್ದೆಯು ಖಾಲಿ ಇರುವುದರಿಂದ ವೇತನದ ಉಳಿಕೆ ಮೊತ್ತ.

## 2022-23ನೇ ಸಾಲಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸ್ವೀಕೃತವಾಗಿರುವ ಮನವಿಗಳು ಹಾಗೂ ಅವುಗಳ ಮೇಲೆ ಕೈಗೊಂಡ ಕ್ರಮ

| ಕ್ರ.ಸಂ. | ಜಿಲ್ಲೆಗಳು | ಸ್ವೀಕೃತಿ | ಕ್ರಮ ಕೈಗೊಂಡಿರುವ ಮನವಿಗಳ ವಿವರ |
|---|---|---|---|
| 1 | ಬೆಂಗಳೂರು ನಗರ | 81 | 81 |
| 2 | ಬೆಂಗಳೂರು ಗ್ರಾಮಾಂತರ | 2 | 2 |
| 3 | ಬಾಗಲಕೋಟೆ | 2 | 2 |
| 4 | ಬೆಳಗಾವಿ | 9 | 9 |
| 5 | ಬಳ್ಳಾರಿ | 11 | 11 |
| 6 | ಬೀದರ್ | - | - |
| 7 | ವಿಜಯಪುರ | - | - |
| 8 | ಚಾಮರಾಜನಗರ | 8 | 8 |
| 9 | ಚಿಕ್ಕಬಳ್ಳಾಪುರ | 2 | 2 |
| 10 | ಚಿಕ್ಕಮಗಳೂರು | - | - |
| 11 | ಚಿತ್ರದುರ್ಗ | 2 | 2 |
| 12 | ದಕ್ಷಿಣ ಕನ್ನಡ | 6 | 6 |
| 13 | ದಾವಣಗೆರೆ | 5 | 5 |
| 14 | ಧಾರವಾಡ | 14 | 14 |
| 15 | ಗದಗ | 9 | 9 |
| 16 | ಕಲಬುರಗಿ | - | - |
| 17 | ಹಾಸನ | 4 | 4 |
| 18 | ಹಾವೇರಿ | 3 | 3 |
| 19 | ಕೊಡಗು | 1 | 1 |
| 20 | ಕೋಲಾರ | 11 | 11 |
| 21 | ಕೊಪ್ಪಳ | 18 | 18 |
| 22 | ಮಂಡ್ಯ | 9 | 9 |
| 23 | ಮೈಸೂರು | 30 | 30 |
| 24 | ರಾಯಚೂರು | 8 | 8 |
| 25 | ರಾಮನಗರ | 4 | 4 |
| 26 | ಶಿವಮೊಗ್ಗ | - | - |
| 27 | ತುಮಕೂರು | 8 | 8 |
| 28 | ಉಡುಪಿ | - | - |
| 29 | ಉತ್ತರ ಕನ್ನಡ | 1 | 1 |
| 30 | ಯಾದಗಿರಿ | - | - |
| 31 | ವಿಜಯನಗರ | - | - |
| | **ಒಟ್ಟು** | **248** | **248** |

## ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸ್ಯಾನಿಟರಿ ಲೆಟ್ರಿನ್‌ಗಳಾಗಿ ಪರಿವರ್ತಿಸಿರುವ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳಿಂದ ಪಡೆದಿರುವ ಮಾಹಿತಿ

| ಕ್ರ. ಸಂ | ಜಿಲ್ಲೆಯ ಹೆಸರು | ಗ್ರಾಮಾಂತರ ಪ್ರದೇಶಗಳಲ್ಲಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸಾನಿಟರಿ ಲೆಟ್ರಿನ್‌ಗಳನ್ನಾಗಿ ಪರಿವರ್ತಿಸಿರುವ ಮಾಹಿತಿ | ನಗರ ಪ್ರದೇಶಗಳಲ್ಲಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸಾನಿಟರಿ ಲೆಟ್ರಿನ್‌ಗಳನ್ನಾಗಿ ಪರಿವರ್ತಿಸಿರುವ ಮಾಹಿತಿ | ರಾಜ್ಯದಲ್ಲಿನ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಇನ್‌ಸಾನಿಟರಿ ಲೆಟ್ರಿನ್‌ಗಳನ್ನು ಸಾನಿಟರಿ ಲೆಟ್ರಿನ್‌ಗಳನ್ನಾಗಿ ಪರಿವರ್ತಿಸಿರುವ ಮಾಹಿತಿ |
|---|---|---|---|---|
| 1 | ಬೆಂಗಳೂರು | 210 | 177 | 387 |
| 2 | ಬೆಂಗಳೂರು (ಗ್ರಾ) | – | | – |
| 3 | ಬಾಗಲಕೋಟೆ | 2 | | 2 |
| 4 | ಬಳ್ಳಾರಿ | 547 | | 547 |
| 5 | ಬೆಳಗಾವಿ | 70 | – | 70 |
| 6 | ಬೀದರ್ | 896 | – | 896 |
| 7 | ಚಾಮರಾಜನಗರ | 4 | 1948 | 1952 |
| 8 | ಚಿಕ್ಕಬಳ್ಳಾಪುರ | 44 | 779 | 823 |
| 9 | ಚಿಕ್ಕಮಗಳೂರು | – | – | – |
| 10 | ರಾಮನಗರ | – | 4875 | 4875 |
| 11 | ಚಿತ್ರದುರ್ಗ | 1 | 5017 | 5018 |
| 12 | ಕೋಲಾರ | 91 | 3333 | 3424 |
| 13 | ದಾವಣಗೆರೆ | 1 | – | 1 |
| 14 | ಹಾಸನ | – | 233 | 233 |
| 15 | ಮಂಡ್ಯ | – | 897 | 897 |
| 16 | ಮೈಸೂರು | 1518 | 1725 | 3243 |
| 17 | ಗದಗ | 325 | 362 | 687 |
| 18 | ಹಾವೇರಿ | 141 | 708 | 849 |
| 19 | ಧಾರವಾಡ | 33 | – | 33 |
| 20 | ಕಲಬುರ್ಗಿ | 462 | – | 462 |
| 21 | ಕೊಡಗು | 4 | – | 4 |
| 22 | ಮಂಗಳೂರು (ದ.ಕ) | – | – | – |
| 23 | ರಾಯಚೂರು | 56 | – | 56 |
| 24 | ಶಿವಮೊಗ್ಗ | – | – | – |
| 25 | ತುಮಕೂರು | 9 | 3961 | 3970 |
| 26 | ಉಡುಪಿ | 197 | | 197 |
| 27 | ಉತ್ತರ ದಕ್ಷಿಣ | 296 | – | 296 |
| 28 | ಯಾದಗಿರಿ | 206 | 760 | 966 |
| 29 | ವಿಜಯಪುರ | 66 | – | 66 |
| 30 | ಕೊಪ್ಪಳ | 387 | – | 387 |
| | **ಒಟ್ಟು** | **5566** | **24775** | **30341** |

## ರಾಜ್ಯದಲ್ಲಿ ಜಿಲ್ಲಾವಾರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿವರ

| ಕ್ರ.ಸಂ. | ಜಿಲ್ಲೆಯ ಹೆಸರು | 2013ನೇ ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮೀಕ್ಷೆ | 2016ನೇ ಸಾಲಿಗೆ ಗ್ರಾಮೀಣ ಭಾಗಗಳಲ್ಲಿ ಸಮೀಕ್ಷೆ | 2018ನೇ ಸಾಲಿಗೆ ರಾಷ್ಟ್ರೀಯ ಸಮೀಕ್ಷೆ | | 2020 ನೇ ಸಾಲಿಗೆ ನಗರ & ಗ್ರಾಮೀಣ ಭಾಗಗಳಲ್ಲಿ ಸಮೀಕ್ಷೆ | | ಒಟ್ಟು |
|---|---|---|---|---|---|---|---|---|
| | | | | ನಗರ | ಗ್ರಾಮೀಣ | ನಗರ | ಗ್ರಾಮೀಣ | |
| 1 | ಬೆಂಗಳೂರು ನಗರ | – | 90 | 8 | 37 | – | – | **135** |
| 2 | ಬೆಂಗಳೂರು ಗ್ರಾಮೀಣ | 7 | 24 | 0 | 55 | – | – | **86** |
| 3 | ಬಳ್ಳಾರಿ | – | 10 | – | – | – | – | **10** |
| 4 | ಬೀದರ್ | – | 2 | – | – | – | – | **2** |
| 5 | ಚಿಕ್ಕಬಳ್ಳಾಪುರ | – | 12 | – | – | – | – | **12** |
| 6 | ಹಾವೇರಿ | – | 7 | 22 | 49 | – | – | **78** |
| 7 | ಕೋಲಾರ | 91 | 148 | 721 | 264 | – | – | **1224** |
| 8 | ಮಂಡ್ಯ | – | 42 | – | – | 281 | 525 | **848** |
| 9 | ರಾಯಚೂರು | – | 43 | 86 | 43 | – | – | **172** |
| 10 | ಶಿವಮೊಗ್ಗ | – | 22 | – | – | 5 | – | **27** |
| 11 | ಉಡುಪಿ | – | 3 | – | – | – | – | **3** |
| 12 | ಯಾದಗಿರಿ | – | 14 | – | – | – | – | **14** |
| 13 | ಮೈಸೂರು | – | – | 365 | 1016 | – | – | **1381** |
| 14 | ಧಾರವಾಡ | – | – | – | 60 | – | – | **60** |
| 15 | ಕಲಬುರಗಿ | – | – | 196 | 17 | – | – | **213** |
| 16 | ಕೊಪ್ಪಳ | 2 | – | – | – | – | – | **2** |
| 17 | ಬೆಳಗಾವಿ | – | – | – | 42 | – | – | **42** |
| 18 | ದಾವಣಗೆರೆ | – | – | 380 | 22 | – | – | **402** |
| 19 | ವಿಜಯಪುರ | – | – | 0 | 0 | – | – | **0** |
| 20 | ರಾಮನಗರ | – | – | – | – | 225 | 339 | **564** |
| 21 | ಬಾಗಲಕೋಟೆ | – | – | 0 | 0 | – | – | **0** |
| 22 | ಹಾಸನ | – | – | – | – | 0 | 52 | **52** |
| 23 | ಚಿಕ್ಕಮಗಳೂರು | – | – | – | – | 0 | 2 | **2** |
| 24 | ಕೊಡಗು | – | – | – | – | 13 | 50 | **63** |
| 25 | ಚಾಮರಾಜನಗರ | – | – | – | – | 138 | 181 | **319** |
| 26 | ತುಮಕೂರು | – | – | – | – | 70 | 87 | **157** |
| 27 | ಬಿಬಿಎಂಪಿ | 201 | – | 1424 | – | – | – | **1625** |

| ಒಟ್ಟು | 301 | 417 | 3202 | 1605 | 732 | 1236 | 7493 |
|---|---|---|---|---|---|---|---|

## 2019-20 ರಿಂದ 2023-24ರವರೆಗೆ ಎಂ.ಎಸ್ ಕಾಯ್ದೆ ಮತ್ತು ನಿಯಮ 2013ರನ್ನು ಉಲ್ಲಂಘನೆ ಮಾಡಿದ ಪ್ರಕರಣಗಳ ವಿವರ

| ಕ್ರ.ಸಂ | ವರ್ಷ | ಪ್ರಕರಣಗಳ ಸಂಖ್ಯೆ | ಮುಕ್ತಾಯಗೊಂಡಿರುವ ಪ್ರಕರಣಗಳ ಸಂಖ್ಯೆ | ಪ್ರಥಮ ವರ್ತಮಾನ ವರದಿ ದಾಖಲಾಗಿರುವ ಸಂಖ್ಯೆ | ಶಿಕ್ಷೆ ಮತ್ತು ದಂಡ | ವಿಳಂಬಕ್ಕೆ ಕಾರಣಗಳು/ ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | 2019-20 | 29 | 0 | 6 | | |
| 2 | 2020-21 | 13 | 0 | 0 | | |
| 3 | 2021-22 | 14 | 0 | 2 | | |
| 4 | 2022-23 | 27 | 0 | 1 | | |
| 5 | 2023-24 | 3 | 0 | 0 | | |
| | | 86 | 0 | 9 | | |

## 1993 ರಿಂದ 2022 ರವರೆಗೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯ ನಿರ್ವಹಿಸುವಾಗ ಮೃತಪಟ್ಟವರ ಮಾಹಿತಿ

| ಕ್ರ.ಸಂ. | ವರ್ಷ | ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುವಾಗ ಮೃತಪಟ್ಟವರ ಸಂಖ್ಯೆ |
|---|---|---|
| 1 | 1993-94 | - |
| 2 | 1994-95 | - |
| 3 | 1995-96 | 1 |
| 4 | 1998-99 | 3 |
| 5 | 2001-02 | 1 |
| 6 | 2007-08 | 2 |
| 7 | 2008-09 | 7 |
| 8 | 2009-10 | 3 |
| 9 | 2010-11 | 2 |
| 10 | 2011-12 | 7 |
| 11 | 2012-13 | 7 |
| 12 | 2013-14 | 7 |
| 13 | 2015-16 | 13 |
| 14 | 2016-17 | 9 |
| 15 | 2017-18 | 6 |
| 16 | 2018-19 | 4 |
| 17 | 2019-20 | 8 |
| 18 | 2020-21 | 5 |
| 19 | 2021-22 | 5 |
| **ಒಟ್ಟು** | | **90** |

## ಎಂ.ಎಸ್ ಕಾಯ್ದೆ ಹಾಗೂ ನಿಯಮ–2013ನ್ನು ಅನುಷ್ಠಾನಗೊಳಸಲು ಕೈಗೊಂಡಿರುವ ಕ್ರಮಗಳು.

1. ರಾಜ್ಯ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರಾದ ಸಮಾಜ ಕಲ್ಯಾಣ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರುಗಳ ಸದಸ್ಯತ್ವದೊಂದಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ ಕಾಯ್ದೆ ಮತ್ತು ನಿಯಮ–2013ಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ಸಂಬಂಧಪಟ್ಟ ಇಲಾಖೆಗಳಿಗೆ ಕ್ರಮಕೈಗೊಳ್ಳಲು ನಿರ್ದೇಶನ ನೀಡಲು 4 ಮತ್ತು 5ನೇ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯನ್ನು ನಡೆಸಲಾಗಿದೆ.

2. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ ಕಾಯ್ದೆ ಹಾಗೂ ನಿಯಮ–2013 5,000 ಪುಸ್ತಕಗಳನ್ನು ಹಾಗೂ ಕ್ಯಾಲೆಂಡರ್‌ಗಳನ್ನು ಮುದ್ರಿಸುವ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ವಿತರಿಸಲಾಗಿದೆ.

3. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇದ ಅರಿವು ಮೂಡಿಸಲು ಕಾಯ್ದೆಯ ಸಾರಾಂಶವನ್ನು ಒಳಗೊಂಡಂತೆ ಕ್ಯಾಲೆಂಡರ್‌ಗಳನ್ನು ಮುದ್ರಿಸಿ ನಗರ ಸ್ಥಳೀಯ ಸಂಸ್ಥೆ ಹಾಗೂ ಎಲ್ಲಾ ಗ್ರಾಮಪಂಚಾಯಿತಿ ಕಛೇರಿಗಳಿಗೆ ವಿತರಿಸಲಾಗಿರುತ್ತದೆ.

4. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಅರಿವು ಮೂಡಿಸಲು ಕಾಯ್ದೆಯ ಸಾರಾಂಶವನ್ನು ಒಳಗೊಂಡಂತೆ ಹ್ಯಾಂಡ್ ಬಿಲ್ (ಬ್ರೋಚರ್)ಗಳನ್ನು ಮುದ್ರಿಸಿ ನಗರ ಸ್ಥಳೀಯ ಸಂಸ್ಥೆ ಹಾಗೂ ಎಲ್ಲಾ ಗ್ರಾಮಪಂಚಾಯಿತಿ ಕಛೇರಿಗಳಿಗೆ ವಿತರಿಸಲಾಗಿರುತ್ತದೆ.

5. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಅರಿವು ಮೂಡಿಸಲು ಕಾಯ್ದೆಯ ಸಾರಾಂಶವನ್ನು ಒಳಗೊಂಡಂತೆ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಸಾವುಗಳನ್ನು ತಡೆಗಟ್ಟಲು ಎಲ್ಲಾ ಕಾರ್ಮಿಕರಲ್ಲೂ ಅರಿವು ಮೂಡಿಸುವ ನಿಟ್ಟಿನಲ್ಲಿ ನಾಟಕ ರೂಪದಲ್ಲಿ ಪ್ರದರ್ಶಿಸಲಾಗಿರುತ್ತದೆ.

**ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಎಲ್ಲಾ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆ**







ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ನೇಮಕಾತಿ ಸಂಬಂಧ ಪ್ರತಿಭಟನೆಯಲ್ಲಿ ನಿರತರಾಗಿರುವ ಪೌರಕಾರ್ಮಿಕರನ್ನು ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶನದನ್ವಯ ಖಾಯಂಗೊಳಿಸಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಅಂತಿಮಗೊಳಿಸಲು ನಿರ್ದೇಶಿಸಿದ ಕ್ಷಣ.



ಮಾನ್ಯ ಮುಖ್ಯಮಂತ್ರಿಯವರಿಗೆ ಮೈಸೂರು ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ರವರಿಂದ ಅಭಿನಂದನೆ ಸಲ್ಲಿಸಿದ ಕ್ಷಣ.



ಪೌರಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಕಾರಣರಾದ ಮಾನ್ಯ ಮಂತ್ರಿ ಶ್ರೀ ಗೋವಿಂದ ಕಾರಜೋಳರವರಿಗೆ ಸಫಾಯಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ವೆಂಕಟೇಶ್ ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಮಾಜಿ ಸದಸ್ಯರಾದ ಜಗದೀಶ್ ಹಿರೇಮನಿ ಹಾಗೂ ಇತರೆ ಸದಸ್ಯರುಗಳಿಂದ ಅಭಿನಂದನೆ ಸಲ್ಲಿಸಲಾಯಿತು.



ರಾಜ್ಯದಲ್ಲಿ ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡು 11,133 ಪೌರಕಾರ್ಮಿಕರನ್ನು ಖಾಯಂಗೊಳಿಸಿದ ಸಂಬಂಧ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದಿಸಿದ ಕ್ಷಣ.

## ದಿನಾಂಕ:18.04.2022ರಂದು ಬೆಳಗ್ಗೆ 11.30 ಗಂಟೆಗೆ ಮಾನ್ಯ ಶ್ರೀ ಎಂ. ಶಿವಣ್ಣ ಕೋಟೆ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಕೊಪ್ಪಳದಲ್ಲಿ ನಡೆದ ಸಭೆಯ ನಡವಳಿಗಳು.

**ನಿರ್ದೇಶನಗಳು:- ಬಾಗಲಕೋಟೆ**

1. ನೇರಪಾವತಿ, ಲೋಡರ್ಸ್, ದಿನಗೂಲಿ, ಕ್ಷೇಮಾಭಿವೃದ್ಧಿ ಕಾರ್ಮಿಕರಿಗೆ ಕನಿಷ್ಟ ವೇತನದ ವ್ಯತ್ಯಾಸದ ಮೊತ್ತವನ್ನು ಕಾರ್ಮಿಕರ ಖಾತೆಗೆ ಪಾವತಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡುವುದು ಕೈಗೊಂಡ ಕ್ರಮದ ಬಗ್ಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ರವರು 15 ದಿನಗಳೊಳಗಾಗಿ ವರದಿ ಸಲ್ಲಿಸುವುದು.
2. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯಲ್ಲಿ ಸರ್ಕಾರವು ಪಿ.ಎಂ.ಜೆ.ಜೆ.ವೈ ಹಾಗೂ ಗ್ರೂಪ್ ಇನ್ಸ್ಯೂರೆನ್ಸ್ ಮಾಡಿಸಲು ಸರ್ಕಾರದ ನಿರ್ದೇಶನವಿದೆ, ಕಾರ್ಮಿಕರು ಅಕಾಲಿಕವಾಗಿ ಮೃತರಾದರೆ ಅಥವಾ ಗಾಯಗೊಂಡಲ್ಲಿ ರೂ.5 ಲಕ್ಷದವರೆಗೂ ವೈದ್ಯಕೀಯ ವೆಚ್ಚವನ್ನು ಪಡೆಯಬಹುದಾಗಿರುತ್ತದೆ ಹಾಗೂ ಮೃತಪಟ್ಟಲ್ಲಿ 2 ಲಕ್ಷ ರೂ ಪರಿಹಾರ ದೊರೆಯುತ್ತದೆ. ಆದ್ದರಿಂದ ಈ ಕೂಡಲೇ ಎಲ್ಲಾ ಕಾರ್ಮಿಕರಿಗೂ ಇನ್ಸೂರೆನ್ಸ್ ಮಾಡಿಸಿ ಮಾನ್ಯ ಯೋಜನಾ ನಿರ್ದೇಶಕರು ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸುವುದು.
3. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಸುರಕ್ಷತಾ ಪರಿಕರಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಆಯೋಗವು 2017ರಲ್ಲಿ ಛಾಯಚಿತ್ರದ ಮೂಲಕ ಪ್ರದರ್ಶಿಸಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತಕ್ರಮಕೈಗೊಳ್ಳುವಂತೆ ನಿರ್ದೇಶಿಸಿರುತ್ತಾರೆ, ಆದರೆ ಕೈಗೊಂಡಿರುವ ಕ್ರಮದ ಕುರಿತು ವರದಿ ಸ್ವೀಕೃತವಾಗಿರುವುದಿಲ್ಲ, ಈ ಬಗ್ಗೆ ತುರ್ತು ಕ್ರಮವಹಿಸುವುದು.
4. ಜಿಲ್ಲೆಯ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಪೌರ ಕಾರ್ಮಿಕರುಗಳಿಗೆ ಅಗತ್ಯ ಸುರಕ್ಷಾ ಧಿರಿಸುಗಳನ್ನು ಹಾಗೂ ಸ್ವಚ್ಛತಾ ಪರಿಕರಗಳನ್ನು ನೀಡಿ, ಸುರಕ್ಷಾ ಧಿರಿಸುಗಳನ್ನು ಧರಿಸಿ ಸ್ವಚ್ಛತಾ ಕೆಲಸ ನಿರ್ವಹಿಸಲು ಕ್ರಮವಹಿಸುವುದು.
5. ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್‌ಚೆಕಪ್ ಮಾಡಿಸುವಂತೆ ಕ್ರಮ ವಹಿಸಿ ಆಯೋಗಕ್ಕೆ ವರದಿ ಸಲ್ಲಿಸುವುದು.
6. ನೇರಸಂವಾದ ಕಾರ್ಯಕ್ರಮದಲ್ಲಿ ಹಾಜರಿದ್ದ ಕೊಪ್ಪಳ ನಗರಸಭಾ ಹಾಜರಿದ್ದ ಕಾರ್ಮಿಕರು ಜಿಲ್ಲಾಡಳಿತಕ್ಕೆ ಹಲವು ಭಾರಿ ನಗರಸಭೆಯ ವ್ಯಾಪ್ತಿಯಲ್ಲಿ ಖಾಲಿ ಇರುವ ನಿವೇಶನವನ್ನು ನೀಡುವಂತೆ ಮನವಿ ಸಲ್ಲಿಸಿದ್ದರು ಯಾವುದೇ ಕ್ರಮಕೈಗೊಂಡಿಲ್ಲವೆಂದು ತಿಳಿಸಿರುತ್ತಾರೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರವೇತನ ಪೌರಕಾರ್ಮಿಕರಿಗೆ ನಿವೇಶನ ಮತ್ತು ವಸತಿಯನ್ನು ಕಲ್ಪಿಸುವ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು ಈ ಬಗ್ಗೆ ಜಿಲ್ಲೆಯ ಉಸ್ತುವಾರಿ ಸಚಿವರೊಂದಿಗೆ, ಸಂಸದರೊಂದಿಗೆ ಚರ್ಚಿಸಿ ನಿವೇಶನ ಮತ್ತು ವಸತಿಗಳನ್ನು ನೀಡುವ ಸಂಬಂಧ ಸೂಕ್ತ ಕ್ರಮಕೈಗೊಳ್ಳುವುದು.

**ಶ್ರೀ ಎಂ. ಶಿವಣ್ಣ ಕೋಟೆ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ**

**ದಿನಾಂಕ:26.04.2022ರಂದು ಹಾಸನದಲ್ಲಿ ನಡೆದ ಸಭಾ ನಡವಳಿಗಳು.**

**ನಿರ್ದೇಶನಗಳು:-**

1. ದಿನಾಂಕ 31.10.2017ರ ಸಭಾ ನಡವಳಿಗಳ ಅಂಶಗಳ ಮೇಲೆ ಅನುಪಾಲನಾ ವರದಿಯನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ಕ್ರೂಢೀಕರಿಸಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಮಾನ್ಯ ಅಧ್ಯಕ್ಷರು ವಿಷಾದನೀಯ ವ್ಯಕ್ತಪಡಿಸಿ 15 ದಿನಗಳೊಳಗಾಗಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸದರಿ ಸಭಾ ನಡವಳಿಗಳ ಅಂಶಗಳ ಮೇಲೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಂಡು ಒಂದು ತಿಂಗಳ ಒಳಗಾಗಿ ವರದಿ ಸಲ್ಲಿಸಲು ನಿರ್ದೇಶಿಸಿದರು.

2. ಜಿಲ್ಲಾ ಮೇಲ್ವಿಚಾರಣಾ ಸಮಿತಿ ಹಾಗೂ ಉಪವಿಭಾಗ ಮಟ್ಟದ ಸಮಿತಿ ಸಭೆಗಳನ್ನು ಕಡ್ಡಾಯವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಮತ್ತು ಸಫಾಯಿ ಕರ್ಮಚಾರಿಗಳ ಹಾಗೂ ಪೌರಕಾರ್ಮಿಕರುಗಳ ಕುರಿತು ಚರ್ಚಿಸಿ ಅಗತ್ಯ ಕ್ರಮ ಕೈಗೊಂಡು, ಕೈಗೊಂಡಿರುವ ಕ್ರಮಗಳ ಬಗ್ಗೆ ಹಾಗೂ ಸಭಾ ನಡವಳಿಯನ್ನು ರಾಜ್ಯ ಸಫಾಯಿ ಕರ್ಮಚಾರಿಗಳ ಸಲ್ಲಿಸಲು ಕ್ರಮವಹಿಸುವುದು.

3. ಕೆ.ಎಸ್.ಆರ್.ಟಿ.ಸಿ. ಬಸ್‌ನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಕಾರ್ಮಿಕರುಗಳಿಗೆ ಸರ್ಕಾರದಿಂದ / ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸಿರುವ ಮಾಸಿಕ ಕನಿಷ್ಠ ವೇತನವನ್ನು ನೀಡುವುದು ಹಾಗೂ ಇ.ಎಸ್.ಐ, ಮತ್ತು ಪಿ.ಎಫ್. ಅನ್ನು ಪಾವತಿಸಲು ಕ್ರಮವಹಿಸುವುದು ಮತ್ತು ಈಗಾಗಲೇ ಕಾರ್ಮಿಕ ಇಲಾಖೆಯಲ್ಲಿ ದಾಖಲಾಗಿರುವ 13 ಪ್ರಕರಣಗಳಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ 15 ದಿನಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸುವುದು.

4. ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಅಥವಾ ಪೌರಕಾರ್ಮಿಕರು ಪೋಲಿಸ್ ಇಲಾಖೆಗೆ ದೂರು ಕೊಟ್ಟಾಗ ಅನ್ವಯವಾಗುವ ಸೆಕ್ಷನ್ ಹಾಗೂ ಕಾನೂನಿನಡಿ ದೂರು ದಾಖಲಿಸಲು ಅಗತ್ಯ ಕ್ರಮವಹಿಸುವುದು.

5. ಗ್ರಾಮೀಣ ಭಾಗದಲ್ಲಿ ಪೌರಕಾರ್ಮಿಕರಿಗೆ ಅನುದಾನ ಲಭ್ಯವಿಲ್ಲವೆಂದು ವೇತನ ನೀಡುತ್ತಿಲ್ಲ. ಇದರಿಂದ ಅವರು ಜೀವನ ನಡೆಸಲು ಕಷ್ಟವಾಗಿದ್ದು, ಈ ಬಗ್ಗೆ ಗಮನಹರಿಸಿ ಪೌರಕಾರ್ಮಿಕರಿಗೆ ಕನಿಷ್ಠ ವೇತನ, ನಿವೇಶನ/ ಮನೆ ಹಾಗೂ ಇತರೆ ಸೌಲಭ್ಯ ಒದಗಿಸಲು ಕ್ರಮವಹಿಸುವುದು.

6. ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಬಗ್ಗೆ ಸ್ವಯಂ ಘೋಷಣೆ ಮಾಡಿಕೊಂಡು ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಿ, ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾಯ್ದೆಗಳನ್ವಯ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವುದು.

7. ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರುಗಳಿಗೆ ಉಪಹಾರ ಮಾಡಲು ಹಾಗೂ ವಸ್ತ್ರ ಬದಲಾವಣೆ ಮಾಡಿಕೊಳ್ಳಲು ಹಾಗೂ

ಸ್ವಚ್ಛತೆಯನ್ನು ನಿರ್ವಹಿಸಲು ಅನುಕೂಲವಾಗುವಂತೆ ಮೂರು ತಿಂಗಳೊಳಗಾಗಿ ವಿಶ್ರಾಂತಿ ಕೊಠಡಿಗಳನ್ನು ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಾಣ ಮಾಡಿ ವರದಿ ಸಲ್ಲಿಸುವುದು.

8. ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರುಗಳಿಗೆ ಸರ್ಕಾರದ ಹಾಗೂ ಸಫಾಯಿ ಕರ್ಮಚಾರಿಗಳ ಆಯೋಗದ ನಿರ್ದೇಶನಗಳನ್ನು ಅನುಸರಿಸಿ, ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆ ನಡೆಸಿ, ವರದಿ ಸಲ್ಲಿಸುವುದು.

9. ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರುಗಳಿಗೆ ಅಗತ್ಯ ಸುರಕ್ಷಾ ಧಿರಿಸುಗಳನ್ನು ಹಾಗೂ ಸ್ವಚ್ಛತಾ ಪರಿಕರಗಳನ್ನು ನೀಡಿ, ಸುರಕ್ಷಾ ಧಿರಿಸುಗಳನ್ನು ಧರಿಸಿ ಸ್ವಚ್ಛತಾ ಕೆಲಸ ನಿರ್ವಹಿಸಲು ಕ್ರಮವಹಿಸುವುದು.

10. ಪೌರಕಾರ್ಮಿಕರು ಮತ್ತು ಎಲ್ಲಾ ಸಫಾಯಿ ಕರ್ಮಚಾರಿಗಳಿಗೆ ದೊರೆಯುವ ಸೌಲಭ್ಯದ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಹಾಗೂ ಮಾಹಿತಿಯುಳ್ಳವರಿಂದ (Expert) ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

11. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ 2013ರಿಂದ 2017ರ ವರೆಗೂ ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸಿದಂತಹ ಪೌರಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿ ಆಗದೆ ಇರುವ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿ ಆಯೋಗಕ್ಕೆ ವರದಿ ಸಲ್ಲಿಸುವುದು.

12. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯಲ್ಲಿ ಸರ್ಕಾರವು ಪಿ.ಎಂ.ಜೆ.ಜೆ.ವೈ ಹಾಗೂ ಗ್ರೂಪ್ ಇನ್ಸ್ಯೂರೆನ್ಸ್ ಮಾಡಿಸಲು ಸರ್ಕಾರದ ನಿರ್ದೇಶನವಿದೆ ಕಾರ್ಮಿಕರು ಅಕಾಲಿಕವಾಗಿ ಮರಣ ಹೊಂದಿದಲ್ಲಿ ಅಥವಾ ಗಾಯಗೊಂಡಲ್ಲಿ ರೂ.5 ಲಕ್ಷದವರೆಗೂ ವೈದ್ಯಕೀಯ ವೆಚ್ಚವನ್ನು ಪಡೆಯ ಬಹುದಾಗಿರುತ್ತದೆ ಹಾಗೂ ಮೃತಪಟ್ಟಲ್ಲಿ ರೂ.2 ಲಕ್ಷ ಪರಿಹಾರ ದೊರೆಯುತ್ತದೆ. ಆದ್ದರಿಂದ ಈ ಕೂಡಲೇ ಎಲ್ಲಾ ಕಾರ್ಮಿಕರಿಗೂ ಇನ್ಸ್ಯೂರೆನ್ ಮಾಡಿಸಿ ಮಾನ್ಯ ಯೋಜನಾ ನಿರ್ದೇಶಕರು ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸುವುದು.

13. ಹಲವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರೋಸ್ಟರ್ ಪದ್ಧತಿಯಲ್ಲಿ ಬಾಕಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸೂಕ್ತ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ 15 ದಿನಗಳೊಳಗಾಗಿ ಯೋಜನಾ ನಿರ್ದೇಶಕರು ಕಳುಹಿಸಿಕೊಡುವುದು.

14. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಸುರಕ್ಷತಾ ಪರಿಕರಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಆಯೋಗವು ಛಾಯ ಚಿತ್ರಗಳ ಮೂಲಕ ಪ್ರದರ್ಶಿಸಿ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಲಾಗಿರುತ್ತದೆ, ಆದರೆ ಈ ಬಗ್ಗೆ ಈವರೆಗೂ ವರದಿ ಸ್ವೀಕೃತವಾಗಿರುವುದಿಲ್ಲ. ಮತ್ತೊಮ್ಮೆ ಸೂಕ್ತ ಕ್ರಮಕೈಗೊಳ್ಳಲು ನಿರ್ದೇಶಿಸಿದರು.

**ದಿನಾಂಕ:27.04.2022ರಂದು ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶ್ರೀ ಎಂ. ಶಿವಣ್ಣ (ಕೋಟೆ), ಅಧ್ಯಕ್ಷರು, ಸಚಿವ ಸಂಪುಟದರ್ಜೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರುರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

**ನಿರ್ದೇಶನಗಳು:**

1. **ಇನ್ ಸ್ಯಾನಿಟರಿ ಲೆಟ್ರಿನ್‌ಗಳು**: ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 2017ರಲ್ಲಿ 631 ಇನ್‌ಸ್ಯಾನಿಟರಿ ಲೆಟ್ರಿನ್‌ಗಳು ಗುರುತಿಸಲಾಗಿರುತ್ತದೆ. ಆದರೆ ಇನ್ನೂ 377 ಇನ್ ಸ್ಯಾನಿಟರಿ ಲೆಟ್ರಿನ್‌ಗಳು ಜೀವಂತವಾಗಿದ್ದು ಇವುಗಳನ್ನು ಸ್ಯಾನಿಟರಿ ಲೆಟ್ರಿನ್‌ಗಳಾಗಿ ಪರಿವರ್ತಿಸಿರುವುದಿಲ್ಲ. ಈ ಬಗ್ಗೆ ಕಾಯ್ದೆಯ ಪ್ರಕಾರ ದಂಡವಿಧಿಸಿ ವರದಿ ಸಲ್ಲಿಸಲು ನಿರ್ದೇಶಿಸಿದರು.

2. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ 2013ರಿಂದ 2017ರವರೆಗೂ ಪೌರಕಾರ್ಮಿಕರು ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸಿದಂತಹ ಪೌರಕಾರ್ಮಿಕರಿಗೆ ಕನಿಷ್ಠ ವೇತನವನ್ನು ಕಾರ್ಮಿಕರ ಖಾತೆಗೆ ಪಾವತಿ ಮಾಡದೇ ಇರುವುದರಿಂದ, ಕಾರ್ಮಿಕ ಅಧಿಕಾರಿಗಳು, ಪಿ.ಎಫ್. ಮತ್ತು ಇ.ಎಸ್.ಐ ಅಧಿಕಾರಿಗಳು ವರದಿ ಸಲ್ಲಿಸಲು ನಿರ್ದೇಶಿಸಿದರು.

3. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯಲ್ಲಿ ಸರ್ಕಾರವು ಪಿ.ಎಂ.ಎಸ್.ಬಿ.ಬೈ ಪಿ.ಎಂ.ಜೆ.ಜೆ.ಬಿ.ವೈ ಹಾಗೂ ಎಸ್.ಬಿ.ಐ ಆಕ್ಸಿಡೆಂಟ್ ಗ್ರೂಪ್ ಇನ್ಸೂರೆನ್ಸ್ ಮಾಡಿಸಲು ನಿರ್ದೇಶನವಿದೆ. ಕಾರ್ಮಿಕರು ಅಕಾಲಿಕವಾಗಿ ಮರಣ ಹೊಂದಿದ್ದಲ್ಲಿ ಅಥವಾ ಗಾಯಗೊಂಡಲ್ಲಿ 5 ಲಕ್ಷದವರೆಗೂ ವೈದ್ಯಕೀಯ ವೆಚ್ಚವನ್ನು ಪಡೆಯಬಹುದಾಗಿರುತ್ತದೆ ಹಾಗೂ ಮೃತಪಟ್ಟಲ್ಲಿ ರೂ.2 ಲಕ್ಷ ಪರಿಹಾರ ದೊರೆಯುತ್ತದೆ. ಆದ್ದರಿಂದ ಈ ಕೂಡಲೇ ಎಲ್ಲಾ ಕಾರ್ಮಿಕರಿಗೂ ಇನ್ಸ್ಯೂರೆನ್ಸ್ ಮಾಡಿಸಿ ಯೋಜನಾ ನಿರ್ದೇಶಕರು ಸೂಕ್ತ ಕ್ರಮಕೈಗೊಂಡು 15 ದಿನಗಳೊಗಾಗಿ ವರದಿ ಸಲ್ಲಿಸುವುದು.

4. 2017ರಲ್ಲಿ ಕರ್ನಾಟಕ ಸರ್ಕಾರವು ಪೌರಕಾರ್ಮಿಕರನ್ನು ನೇರಪಾವತಿಯಡಿಯಲ್ಲಿ ನೇಮಿಸಲಾಗಿರುತ್ತದೆ. ಆದರೆ ಹಲವು ನಗರಸಭಾ ವ್ಯಾಪ್ತಿಯಲ್ಲಿ ಈಗಲೂ ಸಹ ಪಿ..ಎಫ್ ಮತ್ತು ಇ.ಎಸ್.ಐ ಹಣವು ಕಾರ್ಮಿಕರ ಖಾತೆಗೆ ಪಾವತಿಯಾಗದಿರುವ ಬಗ್ಗೆ ನೇರ ಸಂವಾದ ಕಾರ್ಯಕ್ರಮದಲ್ಲಿ ಸ್ವತಃ ಕಾರ್ಮಿಕರೇ ತಿಳಿಸಿರುತ್ತಾರೆ. ಈ ಬಗ್ಗೆ ಯೋಜನಾ ನಿರ್ದೇಶಕರು, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ ದಾಖಲೆಗಳನ್ನು ಪರಿಶೀಲನೆ ನಡೆಸಿ ದೃಢೀಕರಣದೊಂದಿಗೆ 15 ದಿನಗಳೊಳಗಾಗಿ ವರದಿ ಸಲ್ಲಿಸುವುದು.

5. ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಪೌರ ಕಾರ್ಮಿಕರುಗಳಗೆ ಅಗತ್ಯ ಸುರಕ್ಷಾ ಧರಿಸುಗಳನ್ನು ಹಾಗೂ ಸ್ವಚ್ಛತಾ ಪರಿಕರಗಳನ್ನು ನೀಡಿ, ಸುರಕ್ಷಾ ಧಿರಿಸುಗಳನ್ನು ಧರಿಸಿ ಸ್ವಚ್ಛತಾ ಕೆಲಸ ನಿರ್ವಹಿಸಲು ಕ್ರಮವಹಿಸುವುದು.

6. ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಗೊಮ್ಮೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸುವಂತೆ ಕ್ರಮ ವಹಿಸಿ ವರದಿ ಸಲ್ಲಿಸುವುದು.

## ದಿನಾಂಕ: 17.05.2022 ರಂದು ಕೋಲಾರ ಜಿಲ್ಲೆ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ನಡೆದ ಸಭೆ

**ನಿರ್ದೇಶನಗಳು:-**

1. ಮಾನ್ಯ ಉಪವಿಭಾಗಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಮಿಕಾಧಿಕಾರಿಗಳು, ಜಂಟಿ/ ಉಪ ನಿರ್ದೇಶಕರು, ಕೈಗಾರಿಕೆ, ಪಿ.ಎಫ್ ಅಧಿಕಾರಿಗಳು, ಇ.ಎಸ್.ಐ ಅಧಿಕಾರಿಗಳು, ಸಮಾಜ ಕಲ್ಯಾಣ ಅಧಿಕಾರಿಗಳು ಖುದ್ದಾಗಿ ಎಲ್ಲಾ ಸಂಸ್ಥೆಗಳಗೂ ಭೇಟಿ ನೀಡಿ ಸ್ವಚ್ಛತಾ ಕಾರ್ಮಿಕರಿಗೆ 2013ರಿಂದ ಇಲ್ಲಿಯವರೆಗೆ ಪಾವತಿಯಾಗುತ್ತಿರುವ ಕನಿಷ್ಠ ವೇತನ ಪಿ.ಎಫ್, ಇ.ಎಸ್ಐ ಪಾವತಿಯಾಗಿರುವ ಬಗ್ಗೆ ಪರಿಶೀಲನೆ ನಡೆಸಿ ಕನಿಷ್ಠ ವೇತನ ಪಾವತಿಸುವುದು ಹಾಗೂ ವ್ಯತ್ಯಾಸವಿದ್ದಲ್ಲಿ, ವ್ಯತ್ಯಾಸದ ಮೊತ್ತವನ್ನು ಕಾರ್ಮಿಕರ ಖಾತೆಗೆ ಪಾವತಿ ಮಾಡಿಸುವುದು.

2. ಸರ್ಕಾರದ ನಿಯಮಗಳ ಅನ್ವಯ ಸ್ವಚ್ಛತಾ ಕಾರ್ಮಿಕರಿಗೆ ಸಂಸ್ಥೆಯವರು ಪ್ರತಿ 3 ತಿಂಗಳಗೊಮ್ಮೆ ನುರಿತ ವೈದ್ಯರಿಂದ ಆರೋಗ್ಯ ತಪಾಸಣೆಯನ್ನು ಕೈಗೊಳ್ಳುವುದು.

3. ಪ್ರತಿ ಖಾಸಗಿ ಕಂಪನಿಯು ತನ್ನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಮಕ್ಕಳಗೆ ವಿದ್ಯಾರ್ಥಿ ವೇತನ ಹಾಗೂ ವಸತಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಕಲ್ಪಿಸುವುದು.

4. ಎಂ.ಎಸ್‌ಕಾಯ್ದೆ 2013 ಸೆಕ್ಷನ್ 20ರ ಪ್ರಕಾರ ನೇಮಕವಾಗಿರುವಂತಹ. SWD 237 SDC 2012(4) ಪ್ರಕಾರ ಸಂಬಂಧಪಟ್ಟಂತಹ ಅಧಿಕಾರಿಗಳು ಎಲ್ಲಾ ಕಂಪನಿಗಳಗೂ ಖುದ್ದಾಗಿ ಭೇಟಿ ನೀಡಿ ಎಸ್‌ಟಿಪಿ ಪ್ಲಾಂಟ್‌ಗಳನ್ನು ಪರಿಶೀಲಿಸುವುದು.

5. ಉಪ ವಿಭಾಗಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಜಂಟಿ/ಉಪ ನಿರ್ದೇಶಕರು, ಕೈಗಾರಿಕೆ, ಕಾರ್ಮಿಕ ಅಧಿಕಾರಿಗಳು, ಪಿ.ಎಫ್, ಅಧಿಕಾರಿಗಳು, ಇ.ಎಸ್.ಐ ಅಧಿಕಾರಿಗಳು, ಮತ್ತು ತಹಶೀಲ್ದಾರ್ ಒಳಗೊಂಡಂತೆ ಎಲ್ಲಾ ಕಂಪನಿಯ ಮುಖ್ಯಸ್ಥರೊಂದಿಗೆ 3 ತಿಂಗಳಗೊಮ್ಮೆ ಕಂಪನಿ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ಸಭೆ ನಡೆಸುವುದು.




**ಕೋಲಾರ ಜಿಲ್ಲೆ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಮಿಕರ ಕುಂದು ಕೊರತೆಗಳ ಬಗ್ಗೆ ನಡೆದ ಸಭೆ.**

**ದಿನಾಂಕ:18.05.2022 ರಂದು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆ.**

**ನಿರ್ದೇಶನಗಳು:-**

1. ದಿನಾಂಕ:18.05.2022ರಂದು ಕೋಲಾರ-ಚಿಕ್ಕಬಳ್ಳಾಪುರ ಹಾಲು ಉತ್ಪಾದಕರ ಸಂಸ್ಥೆಯ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಟ ವೇತನ ಪಾವತಿ, ಇಎಸ್ಐ. ಪಿಎಫ್ ಕಡ್ಡಾಯವಾಗಿ ಪಾವತಿಸಿ ಇನ್ಸೂರೆನ್ಸ್ ಮಾಡಿಸುವುದು.

2. ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೃತಪಟ್ಟ ಪೌರಕಾರ್ಮಿಕರ ಪ್ರಕರಣಗಳಲ್ಲಿ ಕುಟುಂಬದ ಅವಲಂಬಿತರಿಗೆ ಸರ್ಕಾರದ ಆದೇಶದನ್ವಯ ಇನ್ಸ್ಯೂರೆನ್ಸ್ ಮೊತ್ತ ಹಾಗೂ ಪಿ.ಎಫ್ ಹಣವನ್ನು ನೀಡಿ ಮೃತಪಟ್ಟ ಪ್ರಕರಣಗಳಿಗೆ ಪರಿಹಾರ ವಿತರಿಸುವುದು.

3. ಕೋಲಾರ ನಗರಸಭಾ ವ್ಯಾಪ್ತಿಯಲ್ಲಿ ಅರ್ಹ ಪೌರಕಾರ್ಮಿಕರನ್ನು ಖಾಯಂಗೊಳಿಸುವುದು.

4. ಯೋಜನಾ ನಿರ್ದೇಶಕರು, ಕಡ್ಡಾಯವಾಗಿ ಪರಿಕರಗಳನ್ನು ಧರಿಸಿ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡುವುದು.

5. ಕೋಲಾರ ಜಿಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರಿಗೆ ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸುವುದು.

6. ಖಾಯಂ ಪೌರಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯ ಅಡಿಯಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಿರುವ ಮಾದರಿಯಲ್ಲಿ ನೇರ ಪಾವತಿ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಲು ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲೆಯ ಉಸ್ತುವಾರಿ ಸಚಿವರು, ಸಂಸದರೊಂದಿಗೆ ಚರ್ಚಿಸಿ ಸೂಕ್ತ ಕ್ರಮಕೈಗೊಳ್ಳುವುದು.

7. ಗ್ರಾಮೀಣ ಪ್ರದೇಶದಲ್ಲಿ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸರ್ವೆ ಮಾಡಿಸಿ ವರದಿ ಸಲ್ಲಿಸುವುದು.

8. 2013 ಮತ್ತು 2016ರ ಸರ್ವೆಯಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಂಡು ಸೆಕ್ಷನ್ 13 ಮತ್ತು 16ರ ಪ್ರಕಾರ ಪುನರ್ವಸತಿಯನ್ನು ಕಲ್ಪಿಸುವುದು.



**ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಪೌರಕಾರ್ಮಿಕರ ಕುಂದುಕೊರತೆಗಳ ಕುರಿತು ನೇರ ಸಂವಾದ ಕಾರ್ಯಕ್ರಮ.**

## ದಿನಾಂಕ:25.05.2022 ಮತ್ತು 26.05.2022ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆ

**ನಿರ್ದೇಶನಗಳು:**

1. ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆ ಕನಿಷ್ಠ ವೇತನ, ಪಿಎಫ್, ಇಎಸ್ಐ ಪಾವತಿಯಾಗಿರುವ ಬಗ್ಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಪರಿಶೀಲಿಸುವುದು.
2. ಸರ್ಕಾರದ ಪಿ.ಎಂ.ಜೆ.ಜೆ.ವೈ ಹಾಗೂ ಗ್ರೂಪ್ ಇನ್ಸೂರೆನ್ಸ್ ಅಡಿಯಲ್ಲಿ ಎಲ್ಲಾ ಕಾರ್ಮಿಕರಿಗೂ ಇನ್ಸ್ಯೂರೆನ್ಸ್ ಮಾಡಿಸುವುದು.
3. ಎಲ್ಲಾ ಕಾರ್ಮಿಕರಿಗೂ ಇಎಸ್ಐ, ಪಿಎಫ್‌ನ ಸೌಲಭ್ಯಗಳ ಹಾಗೂ ಸುರಕ್ಷತಾ ಪರಿಕರಗಳ ಉಪಯುಕ್ತಗಳ ಬಗ್ಗೆ ಅರಿವು ಮೂಡಿಸುವುದು.
4. ಪೌರಕಾರ್ಮಿಕರ ಕಾಲೋನಿಗಳಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಅವರ ಮಕ್ಕಳನ್ನು ಪಟ್ಟಿ ಮಾಡಿ ಕರ್ನಾಟಕ ವಸತಿ ಶಿಕ್ಷಣ ಸಂಘಗಳ ಸಂಸ್ಥೆಗಳಗೆ ಸೇರಿದ ಶಾಲೆಗಳಲ್ಲಿ ಉಚಿತವಾಗಿ ದಾಖಲಿಸುವುದು.
5. 2013 ರಿಂದ 2017ರವರೆಗೂ ಗುತ್ತಿಗೆದಾರರು ಪಿ.ಎಫ್. ಹಣವನ್ನು ಕಾರ್ಮಿಕರ ಖಾತೆಗೆ ಪಾವತಿಸಿಲ್ಲದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಹಣ ಪಾವತಿಗೆ ಕ್ರಮವಹಿಸುವುದು.
6. ಹಲವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರೋಸ್ಟರ್ ಪದ್ಧತಿಯಲ್ಲಿ ಬಾಕಿ ಉಳದಿರುವ ಹುದ್ದೆಗಳನ್ನು ಭರ್ತಿ ಮಾಡುವುದು.
7. ಯೋಜನಾ ನಿರ್ದೇಶಕರು, ಕಡ್ಡಾಯವಾಗಿ ಪರಿಕರಗಳನ್ನು ಧರಿಸಿ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡುವುದು
8. ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಗೊಮ್ಮೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸುವಂತೆ ಕ್ರಮ ವಹಿಸಿ ಆಯೋಗಕ್ಕೆ ವರದಿ ಸಲ್ಲಿಸುವುದು.



**ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ**

**ದಿನಾಂಕ: 01.06.2022ರಂದು ಬಿಬಿಎಂಪಿ ಪೂರ್ವವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದುಕೊರತೆಗಳ ಬಗ್ಗೆ ನೇರ ಸಂವಾದ ಮತ್ತು ಅಧಿಕಾರಿಗಳೊಡನೆ ನಡೆದ ಸಭೆ:**

**ಸಭಾಧ್ಯಕ್ಷರ ನಿರ್ದೇಶನಗಳು:**

1. ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸುವುದು. ಪೌರಕಾರ್ಮಿಕರು ದೋಷವುಳ್ಳ ಬಯೋಮೆಟ್ರಿಕ್ ಯಂತ್ರಗಳ ವ್ಯವಸ್ಥೆಯಿಂದ ಕಡಿಮೆ ವೇತನ ಪಡೆಯುತ್ತಿರುವುದು ಕಂಡುಬಂದಿರುವ ಮೇರೆಗೆ ಸರಿಪಡಿಸುವುದು. ಬಯೋಮೆಟ್ರಿಕ್ ಸಮಯಾವಕಾಶವನ್ನು ಬೆಳಗ್ಗೆ 7.00ಗಂಟೆವರೆಗೂ ವಿಸ್ತರಿಸುವುದು.

2. ಸರ್ಕಾರದ ಆದೇಶದನ್ವಯ ಎಲ್ಲಾ ಪೌರಕಾರ್ಮಿಕರು, ಲೋಡರ್ಸ್, ಕ್ಲೀನರ್‌ಗಳಿಗೆ ಸುರಕ್ಷತಾ ಪರಿಕರಗಳನ್ನು ವಿತರಣೆ ಮಾಡಿ ಅವುಗಳನ್ನು ಧರಿಸುವಂತೆ ಹಾಗೂ ಜಂಟಿ ಆಯುಕ್ತರು ಖುದ್ದಾಗಿ ಅನಿರೀಕ್ಷಿತ ಭೇಟಿಗಳನ್ನು ನೀಡಿ ಪರಿಕರಗಳನ್ನು ತೊಡದೇ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ದಂಡವನ್ನು ವಿಧಿಸುವುದು.

3. ಖಾಯಂ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ಕಲ್ಪಿಸಿರುವ ವಸತಿ ಸೌಲಭ್ಯವನ್ನು ನೇರ ಪಾವತಿ ಪೌರಕಾರ್ಮಿಕರಿಗೂ ವಿಸ್ತರಿಸುವುದು.

4. ಸರ್ಕಾರದ ಆದೇಶದಂತೆ ಪಿ.ಎಂ.ಜೆ.ಜೆಬಿ.ವೈ., ಪಿ.ಎಂ.ಎಸ್.ಬಿ.ವೈ ಮತ್ತು ಎಸ್.ಬಿ.ಐ ಗ್ರೂಪ್ ಆಕ್ಸಿಡೆಂಟ್ ಇನ್ಸ್ಯೂರೆನ್ಸ್ ಸೌಲಭ್ಯ ನೀಡುವುದು.

5. 24.10%ರಡಿಯಲ್ಲಿ ಮೀಸಲಿರಿಸಿದ ಶೇ.20%ರ ಅನುದಾನದಲ್ಲಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ನಿಗದಿಪಡಿಸಿದ ಕಾರ್ಯಕ್ರಮಕ್ಕಾಗಿ ವಿನಿಯೋಗಿಸುವುದು. ನೇರಪಾವತಿಯಡಿಯಲ್ಲಿ ನಿವೃತ್ತಿಹೊಂದುವ ಪೌರಕಾರ್ಮಿಕರಿಗೆ ಖಾಯಂ ಪೌರಕಾರ್ಮಿಕರು ನಿವೃತ್ತಿ ಸಮಯದಲ್ಲಿ ನೀಡುವ ಸೌಲಭ್ಯಗಳನ್ನು ನೀಡುವುದು.



**ಬೆಂಗಳೂರು ಮಹಾನಗರ ಪಾಲಿಕೆ ಪೂರ್ವವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದುಕೊರತೆಗಳ ಬಗ್ಗೆ ನೇರ ಸಂವಾದ ಮತ್ತು ಅಧಿಕಾರಿಗಳೊಡನೆ ನಡೆದ ಸಭೆ.**

**ದಿನಾಂಕ:09.06.2022ರಂದು ಬೆಳಗ್ಗೆ 10.30 ಗಂಟೆಗೆ ಕೊಠಡಿ ಸಂಖ್ಯೆ 318, ವಿಕಾಸಸೌಧದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಸೆಕ್ಷನ್-26 ಅನ್ವಯ ರಚಿಸಿರುವ ರಾಜ್ಯ ಮೇಲ್ವಿಚಾರಣಾ ಸಮಿತಿಯ 5ನೇ ಸಭೆಯ ನಡವಳಿ.**

**ತೀರ್ಮಾನ:**

1. ಗುರುತಿಸಿರುವ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್.ಕಾಯ್ದೆ 2013ರ ಅನ್ವಯ ಒಂದು ತಿಂಗಳ ಒಳಗಾಗಿ ಗುರುತಿನ ಚೀಟಿಯನ್ನು ನೀಡಲು ಕ್ರಮವಹಿಸಿ ವರದಿ ಸಲ್ಲಿಸುವುದು.
2. ರಾಜೀವ್‌ಗಾಂಧಿ ಅಭಿವೃದ್ಧಿ ನಿಗಮದಿಂದ ನಿಗದಿಪಡಿಸಿರುವ ಗುರಿಯಂತೆ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮನೆಗಳನ್ನು ಕಡ್ಡಾಯವಾಗಿ ಹಂಚಿಕೆ ಮಾಡಿ ಸಂಬಂಧಪಟ್ಟ ಇಲಾಖೆಗಳು 3 ತಿಂಗಳೊಳಗಾಗಿ ವರದಿ ಸಲ್ಲಿಸುವುದು.
3. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ನೇಮಕಾತಿಗಾಗಿ 10ನೇ ತರಗತಿ ಉತ್ತೀರ್ಣ ಮಾನದಂಡವನ್ನು ಮಾರ್ಪಡಿಸಿ 7ನೇ ತರಗತಿ ನಿಗಧಿಪಡಿಸಿ ನೇಮಿಸಿಕೊಳ್ಳುವುದು.
4. ಮಾನ್ಯ ಐ.ಪಿ.ಡಿ ಸಾಲಪ್ಪನವರ ಮಾರ್ಗದರ್ಶಗಳನ್ವಯ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು 1000ಕ್ಕೆ ಒಬ್ಬ ಪೌರಕಾರ್ಮಿಕರಂತೆ ಮಾನದಂಡವನ್ನು ನಿಗದಿಗೊಳಿಸಿ ಗ್ರಾಮೀಣ ಇಲಾಖೆಯಿಂದ ಆದೇಶ ಹೊರಡಿಸುವುದು.
5. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಈ ಕೂಡಲೇ ಇ.ಎಸ್.ಐ, ಪಿ.ಎಫ್ ಹಾಗೂ ಹೆಲ್ತ್‌ಕಾರ್ಡ್‌ನ್ನು ವಿತರಣೆ ಮಾಡಲು ಗ್ರಾಮೀಣ ಇಲಾಖೆಯಿಂದ ಆದೇಶ ಹೊರಡಿಸುವುದು.
6. ಗ್ರಾಮೀಣ ಪ್ರದೇಶದಲ್ಲಿ ಗುರುತಿಸಿರುವ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಿಗೆ ಪರ್ಯಾಯ ಉದ್ಯೋಗಕ್ಕಾಗಿ ಗ್ರಾಮಪಂಚಾಯಿತಿಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಲ್ಲಿ ಭರ್ತಿ ಮಾಡಲು ಕ್ರಮವಹಿಸುವುದು.
7. ಮಾನ್ಯ ಸಭಾಧ್ಯಕ್ಷರು ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಆಯೋಗದಿಂದ ವಕೀಲರನ್ನು ನೇಮಿಸಿಕೊಳ್ಳಲು ಅಂಗೀಕರಿಸಿದರು. ಪ್ರಕರಣದ ವಿವರದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸುವುದು.
8. ಕಲಬುರಗಿ, ಮಂಗಳೂರು ಮಹಾನಗರ ಪಾಲಿಕೆಗಳಲ್ಲಿ ಈ ಕೂಡಲೇ ಗುತ್ತಿಗೆ ಪದ್ದತಿಯನ್ನು ನೇರಪಾವತಿ ಅಡಿಯಲ್ಲಿ ನೇಮಿಸಿಕೊಳ್ಳಲು 1 ತಿಂಗಳೊಳಗಾಗಿ ಕ್ರಮವಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.
9. ಮಾನ್ಯ ಸಭಾಧ್ಯಕ್ಷರು ಪೌರಾಡಳಿತ ನಿರ್ದೇಶನಾಲಯದಿಂದ ಯು.ಜಿ.ಡಿ ಕಾರ್ಮಿಕರಿಗೂ ಸಂಕಷ್ಟ ಭತ್ಯೆಯನ್ನು ವಿಸ್ತರಿಸಲು ಆದೇಶ ಹೊರಡಿಸಲು ಸೂಚಿಸಿದರು.



ವಿಕಾಸಸೌಧದಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಸೆಕ್ಷನ್-26 ರನ್ವಯ ರಚಿಸಿರುವ ರಾಜ್ಯ ಮೇಲ್ವಿಚಾರಣಾ ಸಮಿತಿಯ 5ನೇ ಸಭೆ.



ನಿಗಮದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಮಾಜ ಕಲ್ಯಾಣ ಇಲಾಖಾ ಸಚಿವರು, ನಿಗಮದ ಅಧ್ಯಕ್ಷರು ಮತ್ತು ಇಲಾಖಾ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಸಮಾಲೋಚನೆ.

## ದಿನಾಂಕ:14.06.2022 ಮತ್ತು 15.06.2022ರಂದು ತುಮಕೂರು ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಸಭೆ.

**ನಿರ್ದೇಶನಗಳು** :

1. 2013ರಿಂದ 2017ರ ವರೆಗೂ ಹೊರಗುತ್ತಿಗೆಯ ಆಧಾರದ ಮೇಲೆ ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಿದ ಪೌರಕಾರ್ಮಿಕರಿಗೆ ಪಾವತಿಯಾಗಿಲ್ಲದ ಪಿಎಫ್, ಇಎಸ್‌ಐನ್ನು ಸಂಬಂಧಪಟ್ಟ ಅಧಿಕಾರಿಗಳಿಂದ 15 ದಿನಗಳೊಳಗಾಗಿ ಪಾವತಿಸುವುದು. ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಅಮಾನತ್ತು ಮಾಡುವುದು.

2. ಕಾರ್ಮಿಕ ಕಾಯ್ದೆಯ ಕನಿಷ್ಠ ವೇತನ, ಪಿಎಫ್, ಇ.ಎಸ್.ಐಗಳನ್ನು ಕಡ್ಡಾಯವಾಗಿ ಪೌರಕಾರ್ಮಿಕರಿಗೆ ಪಾವತಿಸುವುದು ಹಾಗೂ ಸುರಕ್ಷತಾ ಪರಿಕರಗಳ ಉಪಯುಕ್ತತೆ ಬಗ್ಗೆ ಅರಿವು ಮೂಡಿಸುವುದು.

3. ಸರ್ಕಾರದ ಆದೇಶದಂತೆ ಪಿ.ಎಂ.ಜೆ.ಜೆ.ಬಿ.ವೈ. ಪಿ.ಎಂ.ಎಸ್.ಬಿ.ವೈ ಮತ್ತು ಎಸ್.ಬಿ.ಐ ಗ್ರೂಪ್ ಆಕ್ಸಿಡೆಂಟ್ ಇನ್ಸ್ಯೂರೆನ್ಸ್ ಸೌಲಭ್ಯ ನೀಡುವುದು.

4. ಎಲ್ಲಾ ಕಾರ್ಮಿಕರಿಗೂ ಇಎಸ್‌ಐ, ಪಿಎಫ್‌ನ ಸೌಲಭ್ಯಗಳ ಹಾಗೂ ಪೌರಕಾರ್ಮಿಕರ ಕಾಲೋನಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಅವರ ಮಕ್ಕಳನ್ನು ಪಟ್ಟಿ ಮಾಡಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಿಗೆ ಸೇರಿದ ಶಾಲೆಗಳಲ್ಲಿ ಉಚಿತವಾಗಿ ದಾಖಲಿಸುವುದು. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಜನಸಂಖ್ಯೆಗೆ ತಕ್ಕಂತೆ ಕಾರ್ಮಿಕರನ್ನು ನೇಮಿಸಿಕೊಳ್ಳುವುದು.

5. 2013 ಮತ್ತು 2016ರ ಸರ್ವೆಯಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಂಡು ಸೆಕ್ಷನ್-13 ಮತ್ತು 16ರ ಪ್ರಕಾರ ಪುನರ್ವಸತಿಯನ್ನು ಕಲ್ಪಿಸುವುದು.

6. ತುಮಕೂರು ಜಿಲ್ಲೆಯ ಕುರಿಪಾಳ್ಯ ಮತ್ತು ಕುಣಿಗಲ್ ಪುರಸಭೆಯ ವಾರ್ಡ್ ನಂ.11ರ ಕೋಟೆ ವಾರ್ಡ್‌ಗಳ ವ್ಯಾಪ್ತಿಯಲ್ಲಿ, ಈಗಲೂ ಮಾನವನ ಮಲ ಮೂತ್ರಗಳನ್ನು ನೇರವಾಗಿ ತೆರೆದ ಚರಂಡಿಗೆ ಬಿಡುತ್ತಿದ್ದು, ಎಂ.ಎಸ್.ಕಾಯ್ದೆ 2013ರ ಪ್ರಕಾರ ನೋಟೀಸ್ ಜಾರಿಗೊಳಿಸಿ ದಂಡ ವಿಧಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಿದರು.

7. ಯೋಜನಾ ನಿರ್ದೇಶಕರು, ಪಿ.ಎಫ್ ಅಧಿಕಾರಿಗಳು, ಕಾರ್ಮಿಕ ಅಧಿಕಾರಿಗಳು ಒಳಗೊಂಡಂತೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆಗೆ ಭೇಟಿ ನೀಡಿ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಕನಿಷ್ಠ ವೇತನ, ಪಿಎಫ್, ಇಎಸ್‌ಐ ಮಂಜೂರು ಮಾಡಿಸುವುದು.

೮. ನೇರಪಾವತಿಯಡಿಯಲ್ಲಿ ನಿವೃತ್ತಿಹೊಂದುವ ಪೌರಕಾರ್ಮಿಕರಿಗೆ ಖಾಯಂ ಪೌರಕಾರ್ಮಿಕರು ನಿವೃತ್ತಿ ಸಮಯದಲ್ಲಿ ನೀಡುವ ಸೌಲಭ್ಯಗಳನ್ನು ನೀಡುವುದು.

೯. ಯೋಜನಾ ನಿರ್ದೇಶಕರು, ಕಡ್ಡಾಯವಾಗಿ ಪರಿಕರಗಳನ್ನು ಧರಿಸಿ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡುವುದು. ತಪ್ಪಿದ್ದಲ್ಲಿ, ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಸಂಬಂಧಪಟ್ಟವರಿಗೆ ಸರ್ಕಾರದ ಆದೇಶದನ್ವಯ ದಂಡ ವಿಧಿಸುವುದು.

10. ಸರ್ಕಾರದ ಆದೇಶದನ್ವಯ ಪ್ರತಿ ೩ ತಿಂಗಳಗೊಮ್ಮೆ ಮಾಸ್ಟರ್ ಹೆಲ್ತ್‌ಚೆಕಪ್ ಮಾಡಿಸುವುದು, ವಿಶ್ರಾಂತಿಗೃಹಗಳನ್ನು ನಿರ್ಮಿಸುವುದು.

11. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮೀಕ್ಷೆ ಸಮಿತಿಯಲ್ಲಿ ಅನುಮೋದನೆಗೊಂಡಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ರಾಜ್ಯ ಸಮಿತಿಯ ಅನುಮೋದನೆಗೆ ಸಲ್ಲಿಸುವುದು.

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆದ ಪೌರ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ನಡೆದ ಸಭೆ

**ಸಭಾಧ್ಯಕ್ಷರ ನಿರ್ದೇಶನಗಳು:**

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯು ಅತಿ ದೊಡ್ಡದಾಗಿದ್ದು ಕೇವಲ 43 ಜನ ಸ್ವಚ್ಛತಾ ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಅಗತ್ಯತೆಗೆ ಅನುಗುಣವಾಗಿ ಕಾರ್ಮಿಕರನ್ನು ನೇಮಿಸಿಕೊಳ್ಳುವುದು.

2. ವಿಶ್ವವಿದ್ಯಾನಿಲಯದ ಎಲ್ಲಾ ಸ್ವಚ್ಛತಾ ಕಾರ್ಮಿಕರನ್ನು ಖಾಯಂಗೊಳಿಸಲು ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸುವುದು.

3. ಕಾರ್ಮಿಕ ಇಲಾಖೆಯು ಕನಿಷ್ಠ ವೇತನದ ವ್ಯತ್ಯಾಸದ ಮೊತ್ತವನ್ನು ಲೆಕ್ಕಚಾರ ಮಾಡಿ ವಿಶ್ವವಿದ್ಯಾನಿಲಯದಿಂದ ಕಾರ್ಮಿಕರ ಖಾತೆಗೆ ಪಾವತಿಸುವುದು.

4. ಪಿ.ಎಫ್ ಮತ್ತು ಇ.ಎಸ್.ಐ ಇಲಾಖೆಯ ಅಧಿಕಾರಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ ವ್ಯತ್ಯಾಸ ಕಂಡುಬಂದಲ್ಲಿ ಕಾರ್ಮಿಕರ ಖಾತೆಗೆ ಪಾವತಿಸಲು ಕ್ರಮವಹಿಸುವುದು.

5. ಕಾರ್ಮಿಕರಿಗೆ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದು.

6. ಸರ್ಕಾರದ ಆದೇಶದನ್ವಯ ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳನ್ನು ನೀಡುವುದು.

7. ಸ್ವಚ್ಛತಾ ಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸುವುದು.

8. ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್‌ಚೆಕಪ್ ಮಾಡಿಸುವುದು.

9. ಕಾರ್ಮಿಕರ ಮಕ್ಕಳಿಗೆ ವಿಶ್ವವಿದ್ಯಾನಿಲಯದಲ್ಲಿ ಉಚಿತ ಶಿಕ್ಷಣ ನೀಡುವುದು.

10. ವಿಶ್ವವಿದ್ಯಾನಿಲಯದ ವಿಸ್ತೀರ್ಣಕ್ಕೆ ಅನುಗುಣವಾಗಿ ಎಸ್.ಟಿ.ಪಿ ಟ್ಯಾಂಕ್ ನಿರ್ಮಿಸುವುದು.

## ದಿನಾಂಕ:16.07.2022ರಂದು ಟಿ.ನರಸೀಪುರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ನಡೆದ ಸಭೆ

**ನಿರ್ದೇಶನಗಳು:**

1. ಪಿ.ಎಫ್ ಮತ್ತು ಇ.ಎಸ್.ಐ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ವ್ಯತ್ಯಾಸ ಕಂಡುಬಂದಲ್ಲಿ ಕಾರ್ಮಿಕರ ಖಾತೆಗೆ ಪಾವತಿಸಲು ಕ್ರಮವಹಿಸುವುದು.

2. ಕಾರ್ಮಿಕರ ಅಳತೆಗೆ ತಕ್ಕಂತೆ ಉತ್ತಮ ಗುಣಮಟ್ಟದ ಸುರಕ್ಷತಾ ಪರಿಕರಗಳನ್ನು ತೊಟ್ಟು ಕಾರ್ಯನಿರ್ವಹಿಸುವುದು. ತಪ್ಪಿದ್ದಲ್ಲಿ ಅಂತಹವರ ಮೇಲೆ ಸರ್ಕಾರದ ಆದೇಶದನ್ವಯ ದಂಡವನ್ನು ವಿಧಿಸುವುದು.

3. ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಪ್ರತಿಕಾರ್ಮಿಕರಿಗೂ ಕಡ್ಡಾಯವಾಗಿ ವಸತಿ ಸೌಲಭ್ಯವನ್ನು ಕಲ್ಪಿಸುವುದು.

4. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್,ಕಾಯ್ದೆ ಮತ್ತು ನಿಯಮ 2013ರ ಸೆಕ್ಷನ್-13ರ ಪ್ರಕಾರ ಕಡ್ಡಾಯವಾಗಿ ಪುನರ್ವಸತಿ ಕಲ್ಪಿಸುವುದು.

5. ನುರಿತ ವೈದ್ಯರಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಪ್ರತಿ ಕಾರ್ಮಿಕರಿಗೂ ಕಡ್ಡಾಯವಾಗಿ ಮಾಸ್ಟರ್ ಆರೋಗ್ಯ ತಪಾಸಣೆಯನ್ನು ಮಾಡಿಸುವುದು.

6. ಸಫಾಯಿ ಕರ್ಮಚಾರಿಗಳ ಕಾಲೋನಿಗೆ ಭೇಟಿ ನೀಡಿ ಸಫಾಯಿ ಕರ್ಮಚಾರಿಗಳ ಕುಟುಂಬದ ಮಕ್ಕಳನ್ನು ಪಟ್ಟಿ ಮಾಡಿ ಶಿಕ್ಷಣ ದೊರಕಿಸಿಕೊಡಲು, ವಿದ್ಯಾರ್ಥಿ ವೇತನ ಮತ್ತು ತರಬೇತಿ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಕ್ರಮವಹಿಸುವುದು.

7. ಗದಗ ಜಿಲ್ಲೆಯಲ್ಲಿ ನಿರ್ಮಿಸಿರುವ ರೀತಿಯಲ್ಲಿ ಉತ್ತಮ ಶೌಚಾಲಯ, ವಿಶ್ರಾಂತಿ ಗೃಹವನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವುದು.

## ದಿನಾಂಕ: 26.07.2022 ರಂದು ಗದಗ ಜಿಲ್ಲೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ

**ಸಭಾಧ್ಯಕ್ಷರ ನಿರ್ದೇಶನಗಳು:**

1. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ ವ್ಯಾಪ್ತಿಯ 2013ರಿಂದ 2017ರ ವರೆಗೂ ಪೌರಕಾರ್ಮಿಕರು ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸಿದಂತಹ ಪೌರಕಾರ್ಮಿಕರಿಗೆ ಕನಿಷ್ಠ ವೇತನವನ್ನು ಗುತ್ತಿಗೆದಾರರು ಪಾವತಿಸುವುದು.
2. ಪೌರಕಾರ್ಮಿಕರು, ಲೋಡರ್ಸ್, ಡ್ರೈವರ್, ಕ್ಲೀನರ್ ಕೆಲಸಗಾರರಿಗೆ ಪ್ರತಿಮಾಹೆ ವೇತನ ಚೀಟಿಯನ್ನು ನೀಡುವಂತೆ ಹಾಗೂ ಇ.ಎಸ್.ಐ ಮತ್ತು ಪಿ.ಎಫ್ ಹಣವು ಕಾರ್ಮಿಕರ ಖಾತೆಗೆ ಜಮೆ ಆಗುತ್ತಿರುವ ಬಗ್ಗೆ ಪರಿಶೀಲಿಸಿ ಪ್ರತಿ ಮಾಹೆ ಪಾವತಿಸುವುದು.
3. ಕಾರ್ಮಿಕರು ಅಕಾಲಿಕವಾಗಿ ಮೃತಪಟ್ಟಲ್ಲಿ 2 ಲಕ್ಷಗಳ ಪರಿಹಾರ ಹಾಗೂ ಗಾಯಗೊಂಡಲ್ಲಿ ವೈದ್ಯಕೀಯ ವೆಚ್ಚವನ್ನು ಪಾವತಿಸುವುದು ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಗೊಮ್ಮೆ ಮಾಸ್ಟರ್ ಹೆಲ್ತ್‌ಚೆಕಪ್ ಮಾಡಿಸುವುದು.
4. ಸ್ವಚ್ಛತಾ ಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸುವುದು ಜಿಲ್ಲಾಧಿಕಾರಿಗಳು ಜಿಲ್ಲೆಯ ಉಸ್ತುವಾರಿ ಸಚಿವರೊಂದಿಗೆ, ಸಂಸದರೊಂದಿಗೆ ಚರ್ಚಿಸಿ ನಿವೇಶನ ಮತ್ತು ವಸತಿಗಳನ್ನು ನೀಡುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದು.
5. ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಸಿಂಗಲ್ ಪಿಟ್‌ಗಳನ್ನು ಸ್ವಚ್ಛಗೊಳಿಸಲು ಸಕ್ಕಿಂಗ್ ಮಿಷನ್‌ಗಳ ಬಳಸುವ ಬಗ್ಗೆ ಅರಿವು ಮೂಡಿಸುವುದು.
6. 24.10%ರಡಿಯಲ್ಲಿ ಮೀಸಲಿರಿಸಿದ ಶೇ.20%ರ ಅನುದಾನದಲ್ಲಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ನಿಗದಿಪಡಿಸಿದ ಕಾರ್ಯಕ್ರಮಕ್ಕಾಗಿ ವಿನಿಯೋಗಿಸುವುದು.



## ಗದಗ ಜಿಲ್ಲೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ

## ದಿನಾಂಕ:08.08.2022ರಂದು ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಲು ನಡೆದ ಸಭೆಯ ನಡವಳ

***

**ಸಭಾಧ್ಯಕ್ಷರ ನಿರ್ದೇಶನಗಳು:**

1. ಸಫಾಯಿ ಕರ್ಮಚಾರಿಗಳಗೆ ಪ್ರತ್ಯೇಕವಾದ ಹಣಕಾಸನ್ನು ನಿಗದಿಗೊಳಸಿ ಸ್ವಚ್ಛತಾ ಕಾರ್ಮಿಕರ ವೇತನವನ್ನು ನಿಗದಿಗೊಳಸಿ ಪ್ರತಿಮಾಹೆ ಸ್ವಚ್ಛತಾ ಕಾರ್ಮಿಕರಿಗೆ ವೇತನವನ್ನು ಪಾವತಿಸುವುದು.
2. ಅತಿ ತುರ್ತಾಗಿ ಎಲೆಕ್ಟ್ರಾನಿಕ್ ಫಂಡ್ ಮ್ಯಾನೇಜ್‌ಮೆಂಟ್ ಯೋಜನೆಯನ್ನು ಜಾರಿಗೊಳಸಲು ಕ್ರಮವಹಿಸುವುದು.
3. ಐಪಿಡಿ ಸಾಲಪ್ಪನವರ ಸುತ್ತೋಲೆ, 2018ರಲ್ಲಿ ಅಧ್ಯಯನ ನಡೆಸಿರುವ ರಾಷ್ಟ್ರೀಯ ಕಾನೂನು ಶಾಲೆ ವರದಿಯಂತೆ 1,000 ಜನಕ್ಕೆ ಒಬ್ಬ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವುದು.
4. ಹೆಚ್ಚುವರಿ ಪೌರಕಾರ್ಮಿಕರನ್ನು ಖಾಲಿ ಇರುವ ಗ್ರಾಮಪಂಚಾಯಿತಿಗಳಗೆ ನಿಯೋಜನೆ ಮಾಡಿ ಕನಿಷ್ಠ ವೇತನ, ಪಿ.ಎಫ್. ಇ.ಎಸ್.ಐ ಗಳನ್ನು ಪಾವತಿಸಲು ಕ್ರಮವಹಿಸುವುದು.
5. ಪಿ.ಎಫ್. ಮತ್ತು ಇ.ಎಸ್.ಐ ಇಲಾಖೆಗಳ ಮುಖ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಪಿ.ಎಫ್. ಮತ್ತು ಇ.ಎಸ್.ಐ ಅನ್ನು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸ್ವಚ್ಛತಾ ಕಾರ್ಮಿಕರಿಗೂ ನೀಡುವುದು.
6. ಹೆಚ್ಚುವರಿಯಾಗಿ ನೇಮಕಗೊಂಡಿರುವ ಪೌರಕಾರ್ಮಿಕರನ್ನು ಖಾಲಿ ಇರುವ ಗ್ರಾಮೀಣ ಪ್ರದೇಶದ ಗ್ರಾಮ ಪಂಚಾಯಿತಿಗಳಗೆ ನೇಮಿಸಿಕೊಳ್ಳಲು ಕ್ರಮವಹಿಸುವುದು.
7. ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಕಾರ್ಮಿಕರನ್ನು ಪರಿಗಣಿಸಿ ಅಥವಾ ಜಿಲ್ಲೆಯಲ್ಲಿರುವ ಕಾರ್ಮಿಕರನ್ನು ವ್ಯಾಪ್ತಿಯನ್ನು ಪರಿಗಣಿಸುವುದರಿಂದ ಪಿ.ಎಫ್. ಮತ್ತು ಇ.ಎಸ್.ಐ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಷರತ್ತುಗಳನ್ನು ಅಥವಾ ಮಾನದಂಡಗಳನ್ನು ಅಳವಡಿಸಲು ಕ್ರಮವಹಿಸುವುದು.
8. ಪಿ.ಎಂ.ಜೆ.ಜೆ.ಬಿ.ವೈ ಮತ್ತು ಪಿ.ಎಂ.ಬಿ.ಎಸ್.ಪಿ.ವೈ ಯೋಜನೆಗಳನ್ನು ಅನುಷ್ಠಾನಗೊಳಸಲು ಸುತ್ತೋಲೆ ಹೊರಡಿಸಲಾಗಿರುತ್ತದೆ. ಆದರೆ ಬಹಳಷ್ಟು ಗ್ರಾಮೀಣ ಪ್ರದೇಶದಲ್ಲಿ ಈ ಯೋಜನೆ ಅನುಷ್ಠಾನಗೊಳಸಿರುವುದಿಲ್ಲ. ಈ ಕುರಿತು ಸೂಕ್ತ ಕ್ರಮಕೈಗೊಳ್ಳುವುದು.

೯. ಗ್ರಾಮಪಂಚಾಯಿತಿಗಳಲ್ಲಿ ಪರಿಕರಗಳನ್ನು ವಿತರಣೆ ಮಾಡಲು ಪ್ರತಿ ಕಾರ್ಮಿಕರಿಗೂ ವರ್ಷಕ್ಕೊಮ್ಮೆ ಅನುದಾನವನ್ನು ಗ್ರಾಮಪಂಚಾಯಿತಿಗಳಿಗೆ ನೀಡುವುದು ಹಾಗೂ ಪರಿಕರಗಳನ್ನು ತೊಟ್ಟು ಕಾರ್ಯನಿರ್ವಹಿಸದಿದ್ದಲ್ಲಿ ಆರ್.ಡಿ.ಪಿ.ಆರ್ ಸುತ್ತೋಲೆಯ ಸಂಬಂಧಿಸಿದವರ ವಿರುದ್ಧ ಕ್ರಮ ವಹಿಸುವುದು.

10. ಗ್ರಾಮೀಣ ಪ್ರದೇಶದಲ್ಲಿ ಜಾಗದ ಅವಕಾಶ ಹೆಚ್ಚಾಗಿದ್ದು, ಈ ಕೂಡಲೇ ಸರ್ಕಾರಿ ಜಮೀನುಗಳನ್ನು ಗುರುತಿಸಿ ವಿಶೇಷ ವಸತಿ ಯೋಜನೆಯನ್ನು ರೂಪಿಸಿ ಅಥವಾ ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಪ್ರಥಮ ಆದ್ಯತೆಯ ಮೇರೆಗೆ ವಸತಿಗಳನ್ನು ನೀಡಲು ತಿಳಿಸಿದರು.

11. ಗ್ರಾಮಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಪೌರಕಾರ್ಮಿಕರ ಮಕ್ಕಳನ್ನು ಪಟ್ಟಿ ಮಾಡಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಥವಾ ಆಯೋಗಕ್ಕೆ ಸಲ್ಲಿಸಲು ಕ್ರಮವಹಿಸುವುದು.

## ದಿನಾಂಕ:25.08.2022ರಂದು ಬೆಳಗಾವಿ ಜಿಲ್ಲೆಯಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಸಭೆಯ ನಡವಳಿಗಳು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳನ್ನು ಎಲ್ಲಾ ಕಾರ್ಮಿಕರಿಗೂ ದೊರಕಿಸಲು ಕ್ರಮವಹಿಸುವುದು.

- ❖ ಸಫಾಯಿ ಕರ್ಮಚಾರಿಗಳ ಸುರಕ್ಷತಾ ದೃಷ್ಟಿಯಿಂದ ಅವರಿಗೆ ಉತ್ತಮ ಗುಣಮಟ್ಟದ ಸಮವಸ್ತ್ರ ಗ್ಲೌಸ್, ಬೂಟು, ಏಪ್ರಾನ್ ಮತ್ತು ಮಾಸ್ಕ್‌ಗಳನ್ನು ಖರೀದಿಸಿ ವಿತರಿಸಿ, ಪೌರಕಾರ್ಮಿಕರು ಸುರಕ್ಷತಾ ಪರಿಕರಗಳನ್ನು ಖಡ್ಡಾಯವಾಗಿ ಧರಿಸಲು ಕ್ರಮವಹಿಸುವಂತೆ ಒಂದುವೇಳೆ ಕ್ರಮವಹಿಸದಿದ್ದಲ್ಲಿ, ಸಂಬಂಧಪಟ್ಟ ಆರೋಗ್ಯ ನಿರೀಕ್ಷಕರ ಮೇಲೆ ಸೂಕ್ತ ಕ್ರಮಕೈಗೊಳ್ಳಲು ನಿರ್ದೇಶನ ನೀಡಿದರು.
- ❖ ಪೌರಕಾರ್ಮಿಕರ ಮಕ್ಕಳಿಗೆ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಿಕ್ಷಣ ಸಂಸ್ಥೆಗಳ ಶಾಲೆಗಳಲ್ಲಿ ಉಚಿತ ಪ್ರವೇಶಾವಕಾಶವಿದ್ದು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಈ ಬಗ್ಗೆ ತಿಳಿಸಿ ಅವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕಲ್ಪಿಸಿಕೊಡುವಂತೆ ಕ್ರಮವಹಿಸಲು ನಿರ್ದೇಶಿಸಿದರು.
- ❖ 2016ರ ಕಾರ್ಮಿಕ ಇಲಾಖೆಯ ಆಧಿಸೂಚನೆಯ ಅನ್ವಯ ಪೌರಕಾರ್ಮಿಕ ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕವಾದ ವಿಶ್ರಾಂತಿಗೃಹಗಳನ್ನು ಖಡ್ಡಾಯವಾಗಿ ನಿರ್ಮಿಸಲು ಕ್ರಮ ವಹಿಸಿ, 3 ತಿಂಗಳೊಳಗಾಗಿ ವಿಶ್ರಾಂತಿಗೃಹಗಳನ್ನು ನಿರ್ಮಿಸುವಂತೆ ಮುಖ್ಯಾಧಿಕಾರಿಗಳು- ನಗರಸಭೆ/ ಪುರಸಭೆ/ಪಟ್ಟಣ ಪಂಚಾಯತಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.
- ❖ ಖಾಯಂ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯ ಅಡಿಯಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸುವ ಮಾದರಿಯಲ್ಲಿಯೇ ನೇರಪಾವತಿ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಲು ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲೆಯ ಉಸ್ತುವಾರಿ ಸಚಿವರೊಂದಿಗೆ, ಸಂಸದರೊಂದಿಗೆ ಚರ್ಚಿಸಿ ನಿವೇಶನ ಮತ್ತು ವಸತಿಗಳನ್ನು ನೀಡುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದು.
- ❖ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ ಸಿಂಗಲ್ ಪಿಟ್‌ಗಳನ್ನು ಡಬಲ್ ಪಿಟ್ ಮಾಡಿ ಸ್ವಚ್ಛಗೊಳಿಸಲು ಸಕ್ಕಿಂಗ್ ಮಿಷನ್‌ಗಳನ್ನು ಬಳಸುವ ಬಗ್ಗೆ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಅರಿವು ಮೂಡಿಸುವುದು.
- ❖ 24.10%ರ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದ ಶೇ 20%ರಷ್ಟನ್ನು ಮೀಸಲಿಟ್ಟ ಅನುದಾನದಲ್ಲಿ ಪೌರಕಾರ್ಮಿಕರ/ ಕುಟುಂಬದ ಕಲ್ಯಾಣಕ್ಕಾಗಿ ವಿದ್ಯಾಭ್ಯಾಸ, ವಸತಿ, ಉದ್ಯೋಗಾರ್ಹತೆಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸುವ ಬಗ್ಗೆ ನಿರ್ದೇಶನ ನೀಡಲಾಯಿತು.
- ❖ ಪೌರಕಾರ್ಮಿಕರ ಕನಿಷ್ಠ ವೇತನವು ಪರಿಷ್ಕೃತಗೊಂಡಿದ್ದು, ಕಾರ್ಮಿಕರಿಗೆ ಕಡ್ಡಾಯವಾಗಿ ಪರಿಷ್ಕೃತ ಕನಿಷ್ಠ ವೇತನವನ್ನು ನೀಡಲು ಕ್ರಮವಹಿಸುವಂತೆ ಸಭೆಗೆ ತಿಳಿಸಿದರು.




**ಬೆಳಗಾವಿ ಜಿಲ್ಲಾಮಟ್ಟದಲ್ಲಿ ಎಂ.ಎಸ್. ಕಾಯ್ದೆ ಮತ್ತು ನಿಯಮಗಳು 2013ರ ಅಂಶಗಳ ಕುರಿತು ತರಬೇತಿ ಮತ್ತು ಸಭೆ.**



**ಬೆಳಗಾವಿ ಜಿಲ್ಲೆಯಲ್ಲಿ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳ ಬಗ್ಗೆ ಕಾರ್ಮಿಕರೊಡನೆ ಜಿಲ್ಲಾಡಳಿತದ ಅಧಿಕಾರಿಗಳು ಒಳಗೊಂಡಂತೆ ನೇರಸಂವಾದ ಕಾರ್ಯಕ್ರಮ.**

**ದಿನಾಂಕ:30.09.2022 ರಂದು ಬೀದರ್ ಜಿಲ್ಲೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶ್ರೀ ಎಂ. ಶಿವಣ್ಣ (ಕೋಟೆ), ಅಧ್ಯಕ್ಷರು, ಸಚಿವ ಸಂಪುಟದರ್ಜೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರುರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

**ನಿರ್ದೇಶನಗಳು:**

1. 2017ರಲ್ಲಿ ಕರ್ನಾಟಕ ಸರ್ಕಾರವು ಪೌರಕಾರ್ಮಿಕರನ್ನು ನೇರಪಾವತಿಯಡಿಯಲ್ಲಿ ನೇಮಿಸಲು ಆದೇಶಿಸಿರುತ್ತದೆ. ಆದರೆ ಹಲವು ನಗರಸಭಾ ವ್ಯಾಪ್ತಿಯಲ್ಲಿ ಈಗಲೂ ಸಹ ಪಿ.ಎಫ್ ಮತ್ತು ಇ.ಎಸ್.ಐ ಹಣವು ಕಾರ್ಮಿಕರ ಖಾತೆಗೆ ಪಾವತಿಯಾಗದಿರುವ ಬಗ್ಗೆ ಆಯೋಗದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಯೋಜನಾ ನಿರ್ದೇಶಕರು, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ ದಾಖಲೆಗಳನ್ನು ಪರಿಶೀಲನೆ ನಡೆಸಿ ಧೃಢೀಕರಣದೊಂದಿಗೆ 15 ದಿನಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸುವುದು.

2. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರವೇತನ ಪೌರಕಾರ್ಮಿಕರಿಗೆ ನಿವೇಶನ ಮತ್ತು ವಸತಿಯನ್ನು ಕಲ್ಪಿಸುವ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು ಈ ಬಗ್ಗೆ ಜಿಲ್ಲೆಯ ಉಸ್ತುವಾರಿ ಸಚಿವರೊಂದಿಗೆ, ಸಂಸದರೊಂದಿಗೆ ಚರ್ಚಿಸಿ ನಿವೇಶನ ಮತ್ತು ವಸತಿಗಳನ್ನು ನೀಡುವ ಸಂಬಂಧ ಸೂಕ್ತ ಕ್ರಮಕೈಗೊಳ್ಳುವುದು.

3. ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಪಂಚಾಯತಿ ವ್ಯಾಪ್ತಿಯಲ್ಲಿ ಸಕ್ಕಿಂಗ್ ಹಾಗೂ ಜಟ್ಟಿಂಗ್ ಯಂತ್ರಗಳು ಕಡಿಮೆ ಇದ್ದು ಈ ಬಗ್ಗೆ ಕ್ರಮವಹಿಸಿ ಹೆಚ್ಚು ಯಂತ್ರಗಳು ಕಾರ್ಯನಿರ್ವಹಿಸುವಂತೆ ಕ್ರಮಕೈಗೊಳ್ಳುವುದು.

4. ದಿನಾಂಕ 28.07.2022ರಂದು ಕಾರ್ಮಿಕ ಇಲಾಖೆಯು ಸ್ವಚ್ಛತಾ ಕಾರ್ಯನಿರ್ವಹಿಸುವ ಕಾರ್ಮಿಕರ ಕನಿಷ್ಠ ವೇತವನ್ನು ಪರಿಷ್ಕರಿಸಿರುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಿದ್ದು. ಸದರಿ ಆದೇಶದನ್ವಯ ಪೌರಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪಾವತಿ ಮಾಡುತ್ತಿರುವ ಬಗ್ಗೆ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಂದ ಧೃಢೀಕರಿಸಿ 15 ದಿನಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸುವುದು.



**ಬೀದರ್ ಜಿಲ್ಲೆಯಲ್ಲಿ ಸಫಾಯಿ ಕರ್ಮಚಾರಿಗಳ**

**ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಅಧಿಕಾರಿಗಳೊಡನೆ ಸಭೆ.**

**ದಿನಾಂಕ:01.10.2022ರಂದು ಯಾದಗಿರಿ ಜಿಲ್ಲೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶ್ರೀ ಎಂ. ಶಿವಣ್ಣ (ಕೋಟೆ), ಅಧ್ಯಕ್ಷರು, ಸಚಿವ ಸಂಪುಟ ದರ್ಜೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರಕಾರ್ಮಿಕರಿಗೆ ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗಳಿಗೆ ಒಳ್ಳೆಯ ತಿಂಡಿಯನ್ನು ನೀಡಬೇಕು ಹಾಗೂ ಸ್ವಚ್ಛತಾ ಕಾರ್ಮಿಕರಿಗೆ ಯಾದಗಿರಿ ನಗರದ ಎರಡು ಕಡೆ ಸುಸಜ್ಜಿತ ವಿಶ್ರಾಂತಿಗೃಹ ನಿರ್ಮಾಣ ಮಾಡಬೇಕು. ಈ ಬಗ್ಗೆ ನಗರಸಭೆಯ ಕೌನ್ಸಿಲ್‌ನ ಗಮನಕ್ಕೆ ತಂದು ಮೂರು ತಿಂಗಳೊಳಗಾಗಿ ಕ್ರಮಕೈಗೊಳ್ಳಲು ಸೂಚಿಸಿದರು. ಖಾಸಗಿ ವ್ಯಕ್ತಿಗಳ ಆಸ್ತಿಗಳಲ್ಲಿ ಪೌರಕಾರ್ಮಿಕರ ವಿಶ್ರಾಂತಿ ಗೃಹನಿರ್ಮಾಣ ಮುಂದೆ ಬಂದಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ಎಂಓಯು ಮಾಡಿಕೊಳ್ಳಲು ತಿಳಿಸಿದರು. ಯಾದಗಿರಿಯ ಸಮುದಾಯ ಶೌಚಾಲಯಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಲು ಆಗದಿದ್ದಲ್ಲಿ, ಅವುಗಳನ್ನು ಕೆಡವಲು ಸೂಚಿಸಿದರು.

**ನಿರ್ದೇಶನಗಳು:-**

1. ದಿನಾಂಕ:05.07.2017ರಂದು ಆಯೋಗದ ಸಭಾ ನಡವಳಿ ಅಂಶಗಳ ಮೇಲೆ ಸೂಕ್ತ ಕ್ರಮ ಕೈಗೊಂಡು 15 ದಿನಗಳೊಳಗಾಗಿ ವರದಿ ಸಲ್ಲಿಸುವುದು.
2. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ 2013 ರಿಂದ 2017ರ ವರೆಗೂ ಪೌರ ಕಾರ್ಮಿಕರು ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸಿದಂತಹ ಪೌರಕಾರ್ಮಿಕರಿಗೆ ಕನಿಷ್ಠ ವೇತನವನ್ನು ಗುತ್ತಿಗೆದಾರ ಪಾವತಿ ಮಾಡಿರುವುದಿಲ್ಲ. ಈ ಬಗ್ಗೆ ಕಾರ್ಮಿಕ ಅಧಿಕಾರಿಗಳು, ಪಿ.ಎಫ್ ಅಧಿಕಾರಿಗಳು ಮತ್ತು ಇ.ಎಸ್.ಐ ಅಧಿಕಾರಿಗಳು ಒಳಗೊಂಡಂತೆ ಪರಿಶೀಲನೆ ನಡೆಸಿ 15 ದಿನಗಳೊಳಗಾಗಿ ವರದಿಯನ್ನು ಸಿಪಡಿಸಿ ಸಲ್ಲಿಸುವಂತೆ ನಿರ್ದೇಶಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ಬಗ್ಗೆ 1 ತಿಂಗಳೊಳಗಾಗಿ ಸೂಕ್ತ ಕ್ರಮಕೈಗೊಳ್ಳದೆ ಇದ್ದಲ್ಲಿ ಆಯೋಗದಲ್ಲಿ ಪ್ರಕರಣವನ್ನು ದಾಖಲಿಸಲು ಸೂಚಿಸಿದರು.
3. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ ಮತ್ತು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಿದಂತಹ ಪೌರಕಾರ್ಮಿಕರು, ಲೋಡರ್ಸ್, ಡ್ರೈವರ್, ಕ್ಲೀನರ್ ಕೆಲಸಗಾರರಿಗೆ ಪ್ರತಿ ಮಾಹೆ ವೇತನ ಚೀಟಿಯನ್ನು ನೀಡುವಂತೆ ಕ್ರಮವಹಿಸುವುದು ಹಾಗೂ ಇ.ಎಸ್.ಐ ಮತ್ತು ಪಿ.ಎಫ್ ಹಣವು ಕಾರ್ಮಿಕರ ಖಾತೆಗೆ ಜಮೆ ಆಗುತ್ತಿರುವ ಬಗ್ಗೆ ಪರಿಶೀಲಿಸಿ ಪ್ರತಿ ಮಾಹೆ ಪಾವತಿ ಮಾಡಿರುವ ವರದಿಯನ್ನು ಆಯೋಗಕ್ಕೆ ಸಲ್ಲಿಸುವುದು.
4. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯಲ್ಲಿ ಸರ್ಕಾರವು ಪಿ.ಎಂ.ಎಸ್.ಬಿ.ವೈ ಪಿ.ಎಂ.ಜೆ.ಜೆ.ಬಿ.ವೈ ಹಾಗೂ ಎಸ್.ಬಿ.ಐ ಆಕ್ಸಿಡೆಂಟ್ ಗ್ರೂಪ್ ಇನ್ಸ್ಯೂರೆನ್ಸ್ ಮಾಡಿಸಲು ನಿರ್ದೇಶನವಿದೆ.

ಕಾರ್ಮಿಕರು ಅಕಾಲಿಕವಾಗಿ ಅಥವಾ ಗಾಯಗೊಂಡಲ್ಲಿ 5 ಲಕ್ಷದವರೆಗೂ ವೈದ್ಯಕೀಯ ವೆಚ್ಚವನ್ನು ಪಡೆಯಬಹುದಾಗಿರುತ್ತದೆ ಹಾಗೂ ಮೃತಪಟ್ಟಲ್ಲಿ 2 ಲಕ್ಷ ರೂ ಪರಿಹಾರ ದೊರೆಯುತ್ತದೆ. ಆದ್ದರಿಂದ ಈ ಕೂಡಲೇ ಎಲ್ಲಾ ಕಾರ್ಮಿಕರಿಗೂ ಇನ್ಸೂರೆನ್ಸ್ ಮಾಡಿಸಿ ಯೋಜನಾ ನಿರ್ದೇಶಕರು ಸೂಕ್ತ ಕ್ರಮ ಕೈಗೊಂಡು 15 ದಿನಗಳೊಗಾಗಿ ವರದಿ ಸಲ್ಲಿಸುವುದು.

5. 2017ರಲ್ಲಿ ಕರ್ನಾಟಕ ಸರ್ಕಾರವು ಪೌರಕಾರ್ಮಿಕರನ್ನು ನೇರಪಾವತಿಯಡಿಯಲ್ಲಿ ನೇಮಿಸಲಾಗಿ ರುತ್ತದೆ. ಆದರೆ ಹಲವು ನಗರಸಭಾ ವ್ಯಾಪ್ತಿಯಲ್ಲಿ ಈಗಲೂ ಸಹ ಪಿ.ಎಫ್ ಮತ್ತು ಇ.ಎಸ್.ಐ ಹಣವು ಕಾರ್ಮಿಕರ ಖಾತೆಗೆ ಪಾವತಿಯಾಗದಿರುವ ಬಗ್ಗೆ ನೇರಸಂವಾದ ಕಾರ್ಯಕ್ರಮದಲ್ಲಿ ಸ್ವತಃ ಕಾರ್ಮಿಕರೇ ತಿಳಿಸಿರುತ್ತಾರೆ. ಈ ಬಗ್ಗೆ ಯೋಜನಾ ನಿರ್ದೇಶಕರು, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ ದಾಖಲೆಗಳನ್ನು ಪರಿಶೀಲನೆ ನಡೆಸಿ ದೃಢೀಕರಣದೊಂದಿಗೆ 15 ದಿನಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸುವುದು.

6. ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮೃತಪಟ್ಟ ಪ್ರಕರಣಗಳು ಹೆಚ್ಚಾಗಿದ್ದು ಸದರಿ ಕುಟುಂಬದ ಅವಲಂಬಿತರಿಗೆ ಯಾವುದೇ ರೀತಿಯ ಸೌಲಭ್ಯಗಳು ದೊರೆಯದೆ ವಂಚಿತರಾಗಿರುವ ಬಗ್ಗೆ ತಿಳಿಸಿರುತ್ತಾರೆ. ಈ ರೀತಿಯಾಗಿ ಮೃತಪಟ್ಟ ಪೌರಕಾರ್ಮಿಕರ ಕುಟುಂಬದ ಅವಲಂಭಿತರಿಗೆ ಸರ್ಕಾರದ ಆದೇಶದನ್ವಯ ಇನ್ಸ್ಯೂರೆನ್ಸ್ ಮೊತ್ತ ಹಾಗೂ ಪಿ.ಎಫ್ ಹಣವನ್ನು ನೀಡಲು ಈ ಕೂಡಲೇ ಕ್ರಮವಹಿಸುವುದು. ಹಾಗೂ ಜಿಲ್ಲೆಯಲ್ಲಿ ಮೃತಪಟ್ಟ ಪ್ರಕರಣಗಳ ಪಟ್ಟಿ ಮತ್ತು ಪರಿಹಾರ ವಿತರಿಸಿರುವ ಬಗ್ಗೆ 15 ದಿನಗೊಳಗಾಗಿ ಮಾನ್ಯ ಯೋಜನಾ ನಿರ್ದೇಶಕರು ಆಯೋಗಕ್ಕೆ ವರದಿ ಸಲ್ಲಿಸುವುದು.

7. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಸುರಕ್ಷತ ಪರಿಕರಗಳಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಕರ್ನಾಟಕ ಸರ್ಕಾರವು ಈ ಬಗ್ಗೆ ಗಂಭೀರವಾಗಿ ಪರಿಗಣಿಸಿ ಪರಿಕರಗಳನ್ನು ತೊಡದೇ ಕಾರಣರಾಗಿರುವ ಆರೋಗ್ಯ ನಿರೀಕ್ಷಕರು ಮತ್ತು ಪರಿಸರ ಅಭಿಯಂತರರ ಮೇಲೆ ದಂಡವನ್ನು ವಿಧಿಸಲು ಸರ್ಕಾರವು ಆದೇಶಿಸಿರುತ್ತದೆ. ಯೋಜನಾ ನಿರ್ದೇಶಕರು, ಕಡ್ಡಾಯವಾಗಿ ಪರಿಕರಗಳನ್ನು ಧರಿಸಿ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡುವುದು. ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಅಧಿಕಾರಿಗಳು ವಾರದಲ್ಲಿ 2 ಬಾರಿ ತಮ್ಮ ವ್ಯಾಪ್ತಿಯ ನಗರಸಭೆ, ಪುರಸಭೆಗಳಿಗೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿ ಪರಿಶೀಲನಾ ವರದಿಯನ್ನು ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸುವುದು. ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಸಂಬಂಧಪಟ್ಟವರಿಗೆ ಸರ್ಕಾರದ ಆದೇಶದನ್ವಯ ದಂಡ ವಿಧಿಸಲು ಕ್ರಮ ವಹಿಸುವುದು. ಹಾಗೂ ಕೈಗೊಂಡ ಕ್ರಮದ ಬಗ್ಗೆ ಪ್ರತಿ ಮಾಹೆ ಆಯೋಗಕ್ಕೆ ವರದಿ ಸಲ್ಲಿಸುವುದು.

8. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರ ಆರೋಗ್ಯ ತಪಾಸಣೆಯನ್ನು ಕೈಗೊಳ್ಳುವ ಸಂಬಂಧ ನಿರ್ದೇಶನ ನೀಡಿದ್ದರೂ ಸಹ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆರೋಗ್ಯ ತಪಾಸಣೆಯನ್ನು

ಕೈಗೊಳ್ಳದೇ ಇರುವುದು ಆಯೋಗದ ಗಮನಕ್ಕೆ ಬಂದಿರುತ್ತದೆ. ಈ ಕುರಿತು ಮಾನ್ಯ ಅಧ್ಯಕ್ಷರು ಸಫಾಯಿ ಕರ್ಮಚಾರಿಗಳ ವೃತ್ತಿಯಲ್ಲಿರುವವರ ಕಾರ್ಮಿಕರು 40 ವರ್ಷಗಳ ಒಳಗಾಗಿ ಮೃತಪಡುತ್ತಿರುತ್ತಾರೆ ಎಂದು ಹಲವಾರು ಸಂಶೋಧನೆಗಳಿಂದ ದೃಢಪಟ್ಟಿದ್ದು. ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸುವಂತೆ ಕ್ರಮ ವಹಿಸಿ ಆಯೋಗಕ್ಕೆ ವರದಿ ಸಲ್ಲಿಸುವುದು.

9. ಖಾಯಂ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯ ಅಡಿಯಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಆದರೆ ನೇರಪಾವತಿ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ವಸತಿ ಸೌಲಭ್ಯಗಳು ಇಲ್ಲದಿರುವುದು ಕಂಡುಬಂದಿರುತ್ತದೆ. ಆದ್ದರಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರವೇತನ ಪೌರಕಾರ್ಮಿಕರಿಗೆ ನಿವೇಶನ ಮತ್ತು ವಸತಿಯನ್ನು ಕಲ್ಪಿಸುವ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು ಈ ಬಗ್ಗೆ ಜಿಲ್ಲೆಯ ಉಸ್ತುವಾರಿ ಸಚಿವರೊಂದಿಗೆ, ಸಂಸದರೊಂದಿಗೆ ಚರ್ಚಿಸಿ ನಿವೇಶನ ಮತ್ತು ವಸತಿಗಳನ್ನು ನೀಡುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದು.

10. ಜಿಲ್ಲೆಯಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್. ಕಾಯ್ದೆ 2013ರ ಸೆಕ್ಷನ್ 13 ಮತ್ತು 16 ಪ್ರಕಾರ ಪುನರ್ವಸತಿ ಕಲ್ಪಿಸಲು ಸೂಕ್ತ ಕ್ರಮಕೈಗೊಂಡು 15 ದಿನಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸುವುದು.

**ದಿನಾಂಕ:15.12.2022ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಶಿವಣ್ಣ ಎಂ.ಕೋಟೆ, ಮಾನ್ಯ ಅಧ್ಯಕ್ಷರು, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ, ಬೆಂಗಳೂರುರವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಕುರಿತು ನಡೆದ ಸಭೆಯ ನಡವಳಿಗಳು.**

**ನಿರ್ದೇಶನಗಳು:**

ಜಿಲ್ಲಾಧಿಕಾರಿಗಳು, 15 ದಿವಸದೊಳಗೆ ಶ್ರೀಮತಿ.ಶಾರದ ಇವರ ಪತಿಯವರ ಪಿ.ಎಫ್ ಹಣ ಶ್ರೀಮತಿ.ಶಾರದ ರವರ ಖಾತೆಗೆ ಜಮೆಗಾಗಿ ಪೂರಕ ದಾಖಲೆ ನೀಡಲು ಪೌರಾಯುಕ್ತರಿಗೆ ಕ್ರಮವಹಿಸುವಂತೆ ಪೌರಾಯುಕ್ತರು ಹಾಗೂ ಪಿ.ಎಫ್ ಅಧಿಕಾರಿಗಳಿಗೆ ಸೂಚಿಸಿದರು.

ಪಿ.ಎಫ್, ಇ.ಎಸ್.ಐ ಕಾರ್ಡ್, ಸ್ವಚ್ಚತಾ ಪರಿಕರಗಳ ಉಪಯೋಗ, ಆರೋಗ್ಯದ ಬಗ್ಗೆ ಕಾಳಜಿ, ಮಾಸ್ಟರ್ ಹೆಲ್ತ್‌ಚೆಕಪ್ ಮುಂತಾದ ವಿಷಯಗಳ ಕುರಿತು ಕಾರ್ಯಾಗಾರವನ್ನು ಏರ್ಪಡಿಸಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ದೇಶಿಸಿದರು.

ಜಿಲ್ಲಾಧಿಕಾರಿಗಳು, ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಂತೆ ಕಾರ್ಮಿಕ ಅಧಿಕಾರಿಗಳು 2018ರಿಂದ ಇಲ್ಲಿಯವರೆಗೂ ಪರಿಶೀಲನೆ ನಡೆಸಿ ವರದಿಯನ್ನು ಒಂದು ತಿಂಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸಲು ಹಾಗೂ ಜಿಲ್ಲಾ ಜಾಗೃತಿ ಸಮಿತಿ ಸಭೆಯಲ್ಲಿ ಮಾಹಿತಿಯನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚಿಸಿದರು.

ರೈಲ್ವೆ ಇಲಾಖೆಗಳಿಗೆ ಮತ್ತು ಕೆ.ಎಸ್.ಆರ್.ಟಿ.ಸಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಚತಾ ಕಾರ್ಮಿಕರಿಗೆ ಕನಿಷ್ಟ ವೇತನ ಪಾವತಿಸುತ್ತಿರುವುದರ ಬಗ್ಗೆ ಪರಿಶೀಲನೆ ನಡೆಸಿ ಆಯೋಗಕ್ಕೆ ವರಧಿ ಸಲ್ಲಿಸಲು ನಿರ್ದೇಶಿಸಿದರು.

ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ ಮತ್ತು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಿದಂತಹ ಪೌರಕಾರ್ಮಿಕರು, ಲೋಡರ್ಸ್, ಡ್ರೈವರ್, ಕ್ಲೀನರ್, ನೇರಪಾವತಿ ಪೌರಕಾರ್ಮಿಕರಿಗೆ 2017ರಿಂದ ಇ.ಎಸ್.ಐ ಮತ್ತು ಪಿ.ಎಫ್ ಹಣವು ಕಾರ್ಮಿಕರ ಖಾತೆಗೆ ಜಮೆ ಆಗುತ್ತಿರುವ ಬಗ್ಗೆ ಪರಿಶೀಲಿಸಿ ಪ್ರತಿಮಾಹೆ ವೇತನ ಚೀಟಿಯನ್ನು ನೀಡುವಂತೆ ಕ್ರಮವಹಿ ವರದಿಯನ್ನು ಆಯೋಗಕ್ಕೆ ಸಲ್ಲಿಸುವುದು.

ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯಲ್ಲಿ ಸರ್ಕಾರವು ಪಿ.ಎಂ.ಎಸ್.ಬಿ.ಬೈ ಪಿ.ಎಂ.ಜೆ.ಜೆ.ಬಿ.ವೈ ಹಾಗೂ ಎಸ್.ಬಿ.ಐ ಆಕ್ಸಿಡೆಂಟ್ ಗ್ರೂಪ್ ಇನ್ಸ್ಯೂರೆನ್ಸ್ ಮಾಡಿಸಲು ನಿರ್ದೇಶನವಿದೆ ಕಾರ್ಮಿಕರು ಅಕಾಲಿಕವಾಗಿ ಅಥವಾ ಗಾಯಗೊಂಡಲ್ಲಿ 5 ಲಕ್ಷದವರೆಗೂ ವೈದ್ಯಕೀಯ ವೆಚ್ಚವನ್ನು

ಪಡೆಯಬಹುದಾಗಿರುತ್ತದೆ ಹಾಗೂ ಮೃತಪಟ್ಟಲ್ಲಿ 2 ಲಕ್ಷ ರೂ ಪರಿಹಾರ ದೊರೆಯುತ್ತದೆ. ಆದ್ದರಿಂದ ಈ ಕೂಡಲೇ ಎಲ್ಲಾ ಕಾರ್ಮಿಕರಿಗೂ ಇನ್ಸ್ಯೂರೆನ್ಸ್ ಮಾಡಿಸಿ ಯೋಜನಾ ನಿರ್ದೇಶಕರು ಸೂಕ್ತ ಕ್ರಮಕೈಗೊಂಡು 15 ದಿನಗಳೊಗಾಗಿ ವರದಿ ಸಲ್ಲಿಸುವುದು.

ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮೃತಪಟ್ಟ ಪ್ರಕರಣಗಳು ಹೆಚ್ಚಾಗಿದ್ದು, ಸದರಿ ಕುಟುಂಬದ ಅವಲಂಬಿತರಿಗೆ ಯಾವುದೇ ರೀತಿಯ ಸೌಲಭ್ಯಗಳು ದೊರೆಯದೆ ವಂಚಿತರಾಗಿರುವ ಬಗ್ಗೆ ತಿಳಿಸಿರುತ್ತಾರೆ. ಈ ರೀತಿಯಾಗಿ ಮೃತಪಟ್ಟ ಪೌರಕಾರ್ಮಿಕರ ಕುಟುಂಬದ ಅವಲಂಭಿತರಿಗೆ ಸರ್ಕಾರದ ಆದೇಶದನ್ವಯ ಇನ್ಸ್ಯೂರೆನ್ಸ್ ಮೊತ್ತ ಹಾಗೂ ಪಿ.ಎಫ್ ಹಣವನ್ನು ನೀಡಲು ಈ ಕೂಡಲೇ ಕ್ರಮವಹಿಸುವುದು. ಹಾಗೂ ಜಿಲ್ಲೆಯಲ್ಲಿ ಮೃತಪಟ್ಟ ಪ್ರಕರಣಗಳ ಪಟ್ಟಿ ಮತ್ತು ಪರಿಹಾರ ವಿತರಿಸಿರುವ ಬಗ್ಗೆ 15 ದಿನಗೊಳಗಾಗಿ ಯೋಜನಾ ನಿರ್ದೇಶಕರು ಆಯೋಗಕ್ಕೆ ವರದಿ ಸಲ್ಲಿಸುವುದು.

ಹಲವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರೋಸ್ಟರ್ ಪದ್ಧತಿಯಲ್ಲಿ ಬಾಕಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸೂಕ್ತ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ಆಯೋಗಕ್ಕೆ 15 ದಿನಗಳೊಳಗಾಗಿ ಯೋಜನಾ ನಿರ್ದೇಶಕರು ಕಳುಹಿಸಿಕೊಡುವುದು.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಸುರಕ್ಷತಾ ಪರಿಕರಗಳಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಕಾರಣರಾಗಿರುವ ಆರೋಗ್ಯ ನಿರೀಕ್ಷಕರು ಮತ್ತು ಪರಿಸರ ಅಭಿಯಂತರರ ಮೇಲೆ ದಂಡವನ್ನು ವಿಧಿಸಲು ಸರ್ಕಾರವು ಆದೇಶಿಸಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಅಧಿಕಾರಿಗಳು ವಾರದಲ್ಲಿ 2 ಭಾರಿ ತಮ್ಮ ವ್ಯಾಪ್ತಿಯ ನಗರಸಭೆ, ಪುರಸಭೆಗಳಿಗೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿ ಪರಿಶೀಲನಾ ವರದಿಯನ್ನು ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸುವುದು.

ಪೌರಕಾರ್ಮಿಕರಿಗೆ ಸರ್ಕಾರದ ಆದೇಶದನ್ವಯ ಪ್ರತಿ 3 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸುವಂತೆ ಕ್ರಮವಹಿಸಿ ಆಯೋಗಕ್ಕೆ ವರದಿ ಸಲ್ಲಿಸುವುದು.

ಖಾಯಂ ಪೌರಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯ ಅಡಿಯಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಆದರೆ ನೇರಪಾವತಿ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ವಸತಿ ಸೌಲಭ್ಯಗಳು ಇಲ್ಲದಿರುವುದು ಕಂಡುಬಂದಿರುತ್ತದೆ. ಆದ್ದರಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರ ವೇತನ ಪೌರಕಾರ್ಮಿಕರಿಗೆ ನಿವೇಶನ ಮತ್ತು ವಸತಿಯನ್ನು ಕಲ್ಪಿಸುವ ಸಂಬಂಧ ಜಿಲ್ಲಾಧಿಕಾರಿಗಳು ಈ ಬಗ್ಗೆ ಜಿಲ್ಲೆಯ ಉಸ್ತುವಾರಿ ಸಚಿವರೊಂದಿಗೆ, ಸಂಸದರೊಂದಿಗೆ ಚರ್ಚಿಸಿ ನಿವೇಶನ ಮತ್ತು ವಸತಿಗಳನ್ನು ನೀಡುವ ಸಂಬಂಧ ಸೂಕ್ತ ಕ್ರಮಕೈಗೊಳ್ಳುವುದು.

**ಮಾನ್ಯ ಶ್ರೀ.ಎಂ.ಶಿವಣ್ಣ(ಕೋಟೆ) ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ, ಬೆಂಗಳೂರು ರವರು ದಿನಾಂಕ:31-01-2023ರಂದು ಪಾಂಡವಪುರ ಪುರಸಭೆಗೆ ಸಂಬಂಧಿಸಿದಂತೆ ಸಭಾ ನಡವಳಿ.**

ಸರ್ಕಾರದ ಆದೇಶದ ಸಂಖ್ಯೆ:ನಅಇ/126/ಟಿಎಂಎಸ್/2016, ಬೆಂಗಳೂರು ದಿ:07-08-2017ರ ಪ್ರಕಾರ ಪಾಂಡವಪುರ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ನೇರವೇತನ ಹಾಗೂ ಖಾಯಂಗೊಳಿಸಿರುವ ಬಗ್ಗೆ. ಮುಖ್ಯಾಧಿಕಾರಿ, ಪುರಸಭೆ, ಪಾಂಡವಪುರರವರು ಮಾತಾನಾಡುತ್ತಾ, ಪಾಂಡವಪುರ ಪುರಸಭೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ ರವರ ಪತ್ರ ಸಂಖ್ಯೆ:ಎಂಯುಎನ್(3)ಸಿ.ಆರ್.17. ಪಿ.ಕೆ/2018-19, ದಿನಾಂಕ:10-01-2019ರಂದು 09 ಮಂದಿ ಪೌರಕಾರ್ಮಿಕರನ್ನು ಖಾಯಂಗೊಳಸಲಾಗಿದೆ. 10 ಮಂದಿ ಪೌರಕಾರ್ಮಿಕರನ್ನು ನೇರಪಾವತಿಯಡಿ ನೇಮಕ ಮಾಡಿಕೊಳ್ಳಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್, ಕ್ಲೀನರ್ಸ್ ಹಾಗೂ ಯುಜಿಡಿ ಕಾರ್ಮಿಕರಿಗೆ 2016ರಿಂದ ಇಲ್ಲಿಯವರೆಗೆ ಕನಿಷ್ಠ ವೇತನ ಇ.ಎಸ್.ಐ, ಪಿಎಫ್ ಪಾವತಿಸುತ್ತಿರುವುದರ ದಾಖಲಾತಿಗಳ ಕುರಿತು ಪರಿಶೀಲನೆ. ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್, ಕ್ಲೀನರ್ಸ್ ಹಾಗೂ ಯುಜಿಡಿ ಕಾರ್ಮಿಕರು ಯಾರು ಇರುವುದಿಲ್ಲ ಎಂದು ಮುಖ್ಯಾಧಿಕಾರಿ, ಪುರಸಭೆ, ಪಾಂಡವಪುರ ರವರು ಸಭೆಗೆ ತಿಳಿಸಿದರು.

1. ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಕನಿಷ್ಟ ವೇತನ, ಇಎಸ್ಐ, ಪಿಎಫ್ ಪಾವತಿಯಾಗುತ್ತಿರುವ ಬಗ್ಗೆ.
2. ಸರ್ಕಾರದ ಆದೇಶದನ್ವಯ ಕಾರ್ಮಿಕರಿಗೂ ನುರಿತ ವೈದ್ಯರಿಂದ ಮಾಸ್ಟರ್ ಆರೋಗ್ಯ ತಪಾಸಣೆಯನ್ನು ಕೈಗೊಂಡಿರುವ ಕುರಿತು.
3. ಎಂ.ಎಸ್.ಕಾಯ್ದೆ-2013 ಸೆಕ್ಷನ್ 11, 12, 14 & 15 ಪ್ರಕಾರ 2013 ರಿಂದ ಇಲ್ಲಿಯವರೆವಿಗೂ ಸ್ವಯಂ ಪ್ರೇರಿತವಾಗಿ ಅಥವಾ ನಗರ ಸ್ಥಳೀಯ ಸಂಸ್ಥೆ ಮತ್ತು ಗ್ರಾಮಪಂಚಾಯಿತಿಗಳಿಂದ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಗುರುತಿಸುವಿಕೆಗೆ ಸ್ವೀಕೃತಗೊಂಡ ಅರ್ಜಿಗಳನ್ನು ವಿಲೇವಾರಿ ಮಾಡಿರುವ ಕುರಿತು.
4. ಎಂ.ಎಸ್.ಕಾಯ್ದೆ 2013 ಸೆಕ್ಷನ್-13 & 16ರ ಪ್ರಕಾರ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಾಯ್ದೆಯಲ್ಲಿ ತಿಳಿಸಿರುವ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಿರುವ ಬಗ್ಗೆ ದಾಖಲಾತಿಗಳು ಮತ್ತು ವಿವರ.

ಸದರಿ ಎಂ.ಎಸ್.ಕಾಯ್ದೆ-2013ರ ಪ್ರಕಾರ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಾಯ್ದೆಯಲ್ಲಿ ತಿಳಿಸಿರುವ ಪ್ರಕಾರ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಿರುವ ಕುರಿತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಾಹಿತಿ ಪಡೆಯಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

5. ಎಂ.ಎಸ್.ಕಾಯ್ದೆ-2013 ಸೆಕ್ಷನ್ 24&25ರ ಪ್ರಕಾರ ಜಿಲ್ಲಾಜಾಗೃತಿ ಸಮಿತಿ ಮತ್ತು ಉಪವಿಭಾಗ ಮಟ್ಟದ ಜಾಗೃತಿ ಸಭೆಗಳನ್ನು ಪ್ರತಿ 3 ತಿಂಗಳಿಗೊಮ್ಮೆ ನಡೆಸುತ್ತಿರುವ ಹಾಗೂ ಹಿಂದಿನ ಸಭಾ ನಡವಳಿ ಮೇಲೆ ಕೈಗೊಳ್ಳುತ್ತಿರುವ ಕ್ರಮದ ಬಗ್ಗೆ ದಾಖಲಾತಿಗಳು.
6. ಎಂ.ಎಸ್.ಕಾಯ್ದೆ-2013 ಸೆಕ್ಷನ್-33ರ ಪ್ರಕಾರ ಒಳಚರಂಡಿ/ತೆರೆದಗುಂಡಿ/ರೊಚ್ಚುತೊಟ್ಟಿಯನ್ನು ಸ್ವಚ್ಛಗೊಳಿಸಲು ಆಧುನಿಕ ತಂತ್ರಜ್ಞಾನ ಯಂತ್ರಗಳನ್ನು ಬಳಸುತ್ತಿರುವುದರ ಬಗ್ಗೆ.
7. ಎಂ.ಎಸ್.ಕಾಯ್ದೆ ಮತ್ತು ನಿಯಮಗಳು 2013ರ ಉಲ್ಲಂಘನೆ ಮಾಡಿರುವವರ ಮೇಲೆ ಕೈಗೊಂಡಿರುವ ಕ್ರಮಗಳ ಕುರಿತು.
8. ಎಂ.ಎಸ್.ಕಾಯ್ದೆ ಮತ್ತು ನಿಯಮಗಳು 2013ರ ಉಲ್ಲಂಘನೆ ಮಾಡಿರುವ ಪ್ರಕರಣಗಳು ಕಂಡು ಬಂದಿರುವುದಿಲ್ಲವೆಂದು ಮುಖ್ಯಾಧಿಕಾರಿ, ಪುರಸಭೆ, ಪಾಂಡವಪುರ ರವರು ಸಭೆಗೆ ತಿಳಿಸಿದರು.
9. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸುರಕ್ಷತಾ ಪರಿಕರಗಳಲ್ಲದೆ ಸ್ವಚ್ಛಗೊಳಿಸಲು ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳು ಗುತ್ತಿಗೆದಾರರ ಮೇಲೆ ಸರ್ಕಾರದ ಆದೇಶದ ಅನ್ವಯ ಕ್ರಮಕೈಗೊಂಡಿರುವ ಕ್ರಮಗಳ ಕುರಿತು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸುರಕ್ಷತಾ ಪರಿಕರಗಳಲ್ಲದೆ ಸ್ವಚ್ಛಗೊಳಿಸಲು ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳು ಗುತ್ತಿಗೆದಾರರ ಮೇಲೆ ಸರ್ಕಾರದ ಆದೇಶದ ಅನ್ವಯ ಕ್ರಮಕೈಗೊಂಡಿರುವ ಪ್ರಕರಣಗಳು ಕಂಡುಬಂದಿರುವುದಿಲ್ಲವೆಂದು ಮುಖ್ಯಾಧಿಕಾರಿ, ಪುರಸಭೆ, ಪಾಂಡವಪುರ ರವರು ಸಭೆಗೆ ತಿಳಿಸಿದರು.

**ದಿನಾಂಕ:06.02.2023ರಂದು ಬೆಳಗ್ಗೆ 11.30 ಗಂಟೆಗೆ, ಮಂಡ್ಯ ಜಿಲ್ಲೆಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ನಿ) ಇಲ್ಲಿ ಮಾನ್ಯ ಶ್ರೀ ಎಂ.ಶಿವಣ್ಣ (ಕೋಟೆ) ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರುರವರ ಅಧ್ಯಕ್ಷತೆಯಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದುಕೊರತೆ ಕುರಿತು ಸಭಾ ನಡವಳಿ.**

- ಹಾಲು ಒಕ್ಕೂಟವು 47 ಎಕರೆ 17 ಗುಂಟೆ ವಿಸ್ತೀರ್ಣವಿದ್ದು 600ಕ್ಕೂ ಹೆಚ್ಚು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಆದರೆ ಇಲ್ಲಿನ ಶೌಚಾಲಯ ನಿರ್ವಹಣೆಗೆ ಕೇವಲ 6 ಜನ ಸಿಬ್ಬಂದಿಯನ್ನು ಮಾತ್ರ ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿ ಮೂಲಕ ಪಡೆದಿದ್ದು, ಈ ಬಗ್ಗೆ ವಿಚಾರಣೆ ನಡೆಸಿದಾಗ ಯಂತ್ರಗಳ ಮೂಲಕ ಸ್ವಚ್ಛಗೊಳಸಲಾಗುತ್ತಿದೆ ಎಂದು ತಿಳಸಿರುತ್ತಾರೆ. ಆದರೂ ಸಹ ಇಲ್ಲಿನ ಸ್ವಚ್ಛತಾ ಸಿಬ್ಬಂದಿಯ ಕೊರತೆಯಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಇನ್ನೊಮ್ಮೆ ಎಸ್ಟಿಮೇಟ್ ಮಾಡಿಸಿ ಎಸ್ಟಿಮೇಟ್‌ಗೆ ತಕ್ಕಂತೆ ಸ್ವಚ್ಛತಾ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡು ಆಯೋಗಕ್ಕೆ ವರದಿ ನೀಡಲು ನಿರ್ದೇಶಿಸಿದೆ.
- ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 6 ಜನ ಸಫಾಯಿ ಕರ್ಮಚಾರಿಗಳು ಶೌಚಾಲಯದಲ್ಲಿ ಕಾರ್ಯನಿರ್ವಹಣೆ ಮಾಡುತ್ತಿರುತ್ತಾರೆ, ಆದರೆ ಇವರಿಗೆ ನೀಡುವ ವೇತನದಲ್ಲಿ ಹಾಲು ಒಕ್ಕೂಟದ ನಿಗಮವು ಮಾಲೀಕರ ವಂತಿಕೆ ಮತ್ತು ಕಾರ್ಮಿಕರ ವಂತಿಕೆಯನ್ನು ಕನಿಷ್ಟ ವೇತನದಲ್ಲಿಯೇ ಕಡಿತಗೊಳಸುತ್ತಿರುವುದು ಸಭೆಗೆ ನೀಡಿದ ದಾಖಲಾತಿಯಲ್ಲಿ ಕಂಡುಬಂದಿರುತ್ತದೆ. ಈ ಬಗ್ಗೆ ಸರಿಪಡಿಸಿಕೊಂಡು ಆಯೋಗಕ್ಕೆ ವರದಿ ನೀಡಲು ನಿರ್ದೇಶಿಸಿದೆ.
- ಒಕ್ಕೂಟಕ್ಕೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸಫಾಯಿ ಕರ್ಮಚಾರಿಗಳ ಹುದ್ದೆ ನೇಮಕಾತಿಗೆ ಮಂಜೂರಾಗಿರುವುದಿಲ್ಲ.
- ಗುತ್ತಿಗೆದಾರರಿಂದ ಕಾರ್ಮಿಕರಿಗೆ ಪ್ರತಿ ವರ್ಷ 2 ಜೊತೆ ಸಮವಸ್ತ್ರ, ಶೂಗಳು ವಿತರಿಸಲಾಗುತ್ತಿದೆ. ಇದರ ಜೊತೆಗೆ ಒಕ್ಕೂಟದಿಂದ ಸಫಾಯಿ ಕರ್ಮಚಾರಿಗಳಗೆ ಹ್ಯಾಂಡ್ ಗ್ಲೌಸ್, ಮಾಸ್ಕ್ ಹಾಗೂ ಗಮ್ ಬೂಟ್‌ಗಳನ್ನು ಮತ್ತು 2 ಕೋಟುಗಳನ್ನು ನೀಡಲಾಗಿದೆ.
- ಗುತ್ತಿಗೆದಾರರಿಂದ ಮಾನವ ಸಂಪನ್ಮೂಲ ಪಡೆದಿರುವುದರಿಂದ ವಸತಿ ಸೌಲಭ್ಯ ಕಲ್ಪಿಸಲು ಅವಕಾಶವಿರುವುದಿಲ್ಲ.
- ಒಕ್ಕೂಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಆರೋಗ್ಯದ ದೃಷ್ಟಿಯಿಂದ ಪ್ರತಿ ಶುಕ್ರವಾರ "ಸ್ಪಂದನ" ಆಸ್ಪತ್ರೆಯ 4 ಜನ ವೈದ್ಯರ ತಂಡವು ತಪಾಸಣಾ ಶಿಬಿರವನ್ನು ಏರ್ಪಡಿಸುತ್ತಿದೆ.

- ಒಕ್ಕೂಟದಲ್ಲಿ ಸ್ವಚ್ಛತಾ ಕೆಲಸಗಾರರಿಗೆ ಪ್ರತಿದಿನ ಉಪಹಾರ ಮತ್ತು ಊಟದ ವ್ಯವಸ್ಥೆ ಕಲ್ಪಿಸಿರುವುದಾಗಿ ತಿಳಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು ಹಾಗೂ ಇತರೆ ಅಧಿಕಾರಿಗಳು ಸಭೆಗೆ ಮಂಡಿಸಿದ ವಿಷಯಗಳನ್ನು ಗಮನಿಸಲಾಗಿ ಆಯೋಗದಿಂದ ನೀಡಿರುವ ನಿರ್ದೇಶನಗಳು.

- ಒಕ್ಕೂಟದ ವಿಸ್ತೀರ್ಣಕ್ಕೆ ತಕ್ಕಂತೆ ಸ್ವಚ್ಛತಾ ಸಿಬ್ಬಂಧಿಯನ್ನು ನೇಮಿಸಬೇಕು.
- ಒಕ್ಕೂಟಕ್ಕೆ ಸಫಾಯಿ ಕರ್ಮಚಾರಿಗಳ ಹುದ್ದೆಗಳನ್ನು ಮಂಜೂರು ಮಾಡಿಸಿಕೊಡಬೇಕು ಅದರಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಬೇಕು.
- ಪ್ರಸ್ತುತ ಕಾರ್ಮಿಕ ಕಾಯ್ದೆ ಪರಿಷ್ಕೃತ ಕನಿಷ್ಟ ವೇತನದ ಬಾಕಿ ಮೊತ್ತವನ್ನು ಕಾರ್ಮಿಕ ಇಲಾಖೆಯ ಸಲಹೆಯ ಮೇರೆಗೆ ಪಾವತಿಸುವುದು.
- ಸ್ವಚ್ಛತಾ ಕಾರ್ಮಿಕರ ವೇತನ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಪಿ.ಎಫ್. ಮೊತ್ತವನ್ನು ಕಾರ್ಮಿಕರ ವಂತಿಕೆ ಹಾಗೂ ಮಾಲೀಕರ ವಂತಿಕೆ ಎರಡನ್ನೂ ಕಾರ್ಮಿಕರ ವೇತನದಲ್ಲಿ ಕಡಿತಗೊಳಿಸಲಾಗಿದೆ. ಮಾಲೀಕರ ವಂತಿಕೆಯನ್ನು ಕಾರ್ಮಿಕರಿಂದ ಕಡಿತಗೊಳಿಸದೇ ಒಕ್ಕೂಟವೇ ಕಾರ್ಮಿಕ ಇಲಾಖಾ ನಿರ್ದೇಶನದಂತೆ ಕಟಾಯಿಸುವುದು.

**ಮಾನ್ಯ ಕೋಟೆ ಶಿವಣ್ಣ, ಅಧ್ಯಕ್ಷರು, ಸಫಾಯಿ ಕರ್ಮಚಾರಿಗಳ ಆಯೋಗ ರವರ ಅಧ್ಯಕ್ಷತೆಯಲ್ಲಿ ದಿನಾಂಕ:13.03.2023ರಂದು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆಯ ನಡವಳ.**

ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳನ್ನು ಆಲಿಸಿ ಅವುಗಳ ಸೂಕ್ತ ನಿರ್ದೇಶನಗಳನ್ನು ನೀಡಲು ಆಗಮಿಸಿರುವ ಮಾನ್ಯ ಆಯೋಗದ ಅಧ್ಯಕ್ಷರಿಗೆ ಮತ್ತು ಜಿಲ್ಲಾಧಿಕಾರಿಗಳು, ಜಿಲ್ಲಾಮಟ್ಟದ ಹಾಗೂ ತಾಲ್ಲೂಕುಮಟ್ಟದ ಎಲ್ಲಾ ಅಧಿಕಾರಿಗಳಿಗೆ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆರವರು ಸ್ವಾಗತವನ್ನು ಕೋರಿದರು. ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಮೈಸೂರು ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಆಲಿಸಿ ಸಂಬಂಧಪಟ್ಟಂತಹ ಪೌರಾಯುಕ್ತರು, ಮುಖ್ಯಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ. ಆದರೂ ಕೆಲವೊಂದು ಸಮಸ್ಯೆಗಳನ್ನು ಪರಿಹರಿಸಿರುವುದಿಲ್ಲ. ಈ ಬಗ್ಗೆ ನೇರಸಂವಾದ ಕಾರ್ಯಕ್ರಮದಲ್ಲಿ ಸ್ವತಃ ಕಾರ್ಮಿಕರೇ ತಿಳಿಸಿರುತ್ತಾರೆ.

**ವಿಷಯ 1: ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 176 ಜಿಇಎಲ್ 2022 ಭಾ-2 ಇ ದಿ:23.11.2022 ಮತ್ತು ಸಂಖ್ಯೆ:ನಅಇ 171 ಎಂಎನ್ಇ 2022 ಭಾ-2 ಇ ದಿ:23.11.2022, ರಾಜ್ಯದ ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಯಲ್ಲಿ ಹಾಗೂ ರಾಜ್ಯ ಮಹಾನಗರ ಪಾಲಿಕೆಗಳಲ್ಲಿ ಹಾಲಿ ನೇರಪಾವತಿ/ಕ್ಷೇಮಾಭಿವೃದ್ಧಿ /ದಿನಗೂಲಿ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರ ನೇಮಕಾತಿ ಮಾಡಿಕೊಂಡಿರುವ ಬಗ್ಗೆ.**

**ಚರ್ಚೆ**: ಹಲವು ಗ್ರಾಮಪಂಚಾಯಿತಿಗಳಲ್ಲಿ ಬಹಳಷ್ಟು ವೇತನ ಸಮಸ್ಯೆಯಿಂದಾಗಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿರುತ್ತವೆ. ಈ ರೀತಿಯ ಪ್ರಕರಣಗಳನ್ನು ಬಗೆಹರಿಸಲು ಹಲವು ಬಾರಿ ತಾಲ್ಲೂಕುಮಟ್ಟದಲ್ಲಿಯೇ ಸಭೆಗಳನ್ನು ನಡೆಸಿ ಸೂಕ್ತಕ್ರಮ ವಹಿಸಲು ನಿರ್ದೇಶಿಸಲಾಗಿರುತ್ತದೆ. ಆದರೂ ಸಹ ಕೆಲವೊಂದು ಸಮಸ್ಯೆಗಳು ಬಗೆಹರಿಯದೇ ಇರುವುದು ಕಾರ್ಮಿಕರು ಸ್ವತಃ ನೇರಸಂವಾದ ಕಾರ್ಯಕ್ರಮದಲ್ಲಿ ತಿಳಿಸಿರುತ್ತಾರೆ.

ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿಗಳ ಪೈಕಿ ಒಟ್ಟು 608 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ಖಾಯಂ ಪೌರಕಾರ್ಮಿಕರ ಸಂಖ್ಯೆ 179, ನೇರಪಾವತಿಯಲ್ಲಿ 298, ಲೋಡರ್, ಕ್ಲೀನರ್, ಡ್ರೈವರ್‌ಗಳಲ್ಲಿ 117 ಜನ ಕಾರ್ಯನಿರ್ವಹಿಸುತ್ತಿರುತ್ತಾರೆ. ಸರ್ಕಾರವು ಒಟ್ಟು 358 ಜನ ಖಾಯಂಗೊಳಿಸಲು ಆದೇಶ ಹೊರಡಿಸಿದಂತೆ 306 ಹುದ್ದೆಗಳು ತಾತ್ಕಾಲಿಕ ಪಟ್ಟಿಗೆ ಆಹ್ವಾನಿಸಲಾಗಿರುತ್ತದೆ. ಉಳಿದ ಕಾರ್ಮಿಕರನ್ನು ರೋಸ್ಟರ್ ವಿನಾಯಿತಿ ನೀಡಿದ್ದಲ್ಲಿ ಖಾಯಂಗೊಳಿಸಲು ಸಾಧ್ಯವಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಈ ಬಗ್ಗೆ ನೇರಪಾವತಿಯಲ್ಲಿರುವಂತಹ ಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಆಯೋಗದಿಂದ ಶಿಫಾರಸ್ಸು ಮಾಡಲಾಗಿರುತ್ತದೆ, ಸನ್ಮಾನ್ಯ ಮುಖ್ಯಮಂತ್ರಿಗಳು ಹಂತಹಂತವಾಗಿ ಎಲ್ಲಾ

ಕಾರ್ಮಿಕರನ್ನು ಖಾಯಂಗೊಳಸುವುದಾಗಿ ತಿಳಸಿರುತ್ತಾರೆ. ಮೊದಲನೇ ಹಂತದಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟು ೩೦೬ ಹುದ್ದೆಗಳನ್ನು ಖಾಯಂಗೊಳಸಲು ಸರ್ಕಾರದಿಂದ ನಿರ್ದೇಶನವಿರುತ್ತದೆ. ಉಳದಂತೆ ನೇರಪಾವತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರನ್ನು ೨ನೇ ಹಂತದಲ್ಲಿ ಖಾಯಂಗೊಳಸಲಾಗುವುದೆಂದು, ಈ ಬಗ್ಗೆ ಕಾರ್ಮಿಕರಲ್ಲಿ ಅರಿವು ಮೂಡಿಸಲು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಗೆ ತಿಳಸಿದರು.

ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 1,474 ಹುದ್ದೆಗಳು ಮಂಜೂರಾಗಿದ್ದು, 513 ಜನ ಖಾಯಂ ಪೌರಕಾರ್ಮಿಕರು 1507 ಜನ ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಇದರಲ್ಲಿ ಹೆಚ್ಚುವರಿ ಆದಂತಹ 536 ಜನ ಸರ್ಕಾರದ ಅನುಮೋದನೆಗಿಂತ ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಎಲ್ಲಾ ಕಾರ್ಮಿಕರಿಗೂ ಪಾಲಿಕೆಯ ಅನುದಾನದ ಅಡಿಯಲ್ಲಿ ಕನಿಷ್ಟ ವೇತನವನ್ನು ಪಾವತಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು. ಮೈಸೂರು ಮಹಾನಗರ ಪಾಲಿಕೆಯು ಪ್ರವಾಸಿ ತಾಣವಾಗಿದ್ದು ಪ್ರತಿನಿತ್ಯ ಬಹಳಷ್ಟು ಪ್ರವಾಸಿಗರು ಬಂದು ಹೋಗುತ್ತಿರುತ್ತಾರೆ. ಅಲ್ಲದೆ ದಸರಾ ಕಾರ್ಯಕ್ರಮದ ಸಂದರ್ಭದಲ್ಲಿ ಲಕ್ಷಾಂತರ ಜನರು ಸೇರುತ್ತಾರೆ, ಇದರಿಂದ ಸ್ವಚ್ಛತಾ ಕಾರ್ಮಿಕರು ಹೆಚ್ಚಾಗಿ ಅವಶ್ಯಕತೆಯಿರುವುದರಿಂದ ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರನ್ನು ಖಾಯಂಗೊಳಸಲು ಸರ್ಕಾರಕ್ಕೆ ಸೂಕ್ತ ಪ್ರಸ್ಥಾವನೆಯನ್ನು ಕಳುಹಿಸಲು ಆಯುಕ್ತರಿಗೆ ನಿರ್ದೇಶಿಸಿದರು.

**ತೀರ್ಮಾನ:**

- ❖ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಪೌರಕಾರ್ಮಿಕರನ್ನು ಭರ್ತಿಮಾಡಲು ಸೂಕ್ತ ಪ್ರಸ್ಥಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಪೌರಾಡಳತ ನಿರ್ದೇಶನಾಲಯಕ್ಕೆ ಕಳುಹಿಸುವುದು.
- ❖ ಮೈಸೂರು ಮಹಾನಗರ ಪಾಲಿಕೆಯಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಮತ್ತು ನೇರಪಾವತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರನ್ನು ಖಾಯಂಗೊಳಸಲು ವಿವರವಾಗಿ ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಪೌರಾಡಳತ ನಿರ್ದೇಶನಾಲಯಕ್ಕೆ ಕಳುಹಿಸುವುದು.

**ಕ್ರಮ: ಆಯುಕ್ತರು, ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು.**

**ವಿಷಯ–2: ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್, ಕ್ಲೀನರ್ಸ್ ಹಾಗೂ ಯುಜಿಡಿ ಕಾರ್ಮಿಕರಿಗೆ 2016ರಿಂದ ಇಲ್ಲಿಯವರೆಗೆ ಕನಿಷ್ಠ ವೇತನ, ಇಎಸ್ಐ, ಪಿಎಫ್ ಪಾವತಿಸುತ್ತಿರುವುದರ ಮತ್ತು ವೇತನ ದೃಢೀಕರಣ ಪತ್ರ, ಇನ್ಸ್ಯೂರೆನ್ಸ್ ಮಾಹಿತಿ ನೀಡಿರುವ ದಾಖಲಾತಿಗಳ ಕುರಿತು ಪರಿಶೀಲನೆ ಮತ್ತು ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಲೋಡರ್, ಕ್ಲೀನರ್, ಡ್ರೈವರ್‌ಗಳಿಗೆ ವೇತನ ಪ್ರಮಾಣ ಪತ್ರವನ್ನು ನೀಡುತ್ತಿರುವ ಕುರಿತು ದಾಖಲಾತಿಗಳು**.

**ಚರ್ಚೆ**: ಬಹಳಷ್ಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್, ಕ್ಲೀನರ್ಸ್ ಹಾಗೂ ಯುಜಿಡಿ ಕಾರ್ಮಿಕರಿಗೆ ಇಲ್ಲಿಯವರೆಗೆ ಕನಿಷ್ಠ ವೇತನ, ಇಎಸ್ಐ, ಪಿಎಫ್ ಪಾವತಿಯಾಗದಿರುವ ಬಗ್ಗೆ ಸಾಕಷ್ಟು ಬಾರಿ ನಗರ ಸಭೆ ಪೌರಾಯುಕ್ತರು ಮತ್ತು ಮುಖ್ಯಾಧಿಕಾರಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಟಿ. ನರಸೀಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕನಿಷ್ಟ ವೇತನ ನೀಡದೇ ಇರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿ ನಿರ್ದೇಶನ ನೀಡಿದ್ದರೂ ಸಹಾ, ಈವರೆಗೂ ಸರಿಪಡಿಸಿರುವ ಬಗ್ಗೆ ಆಯೋಗಕ್ಕೆ ವರದಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಸಹಾ ತಿಳಿಸಲಾಗಿರುತ್ತದೆ. ಕೂಡಲೇ ಈ ಕುರಿತು ತಾವು ಪ್ರತ್ಯೇಕವಾಗಿ ಪಿ.ಎಫ್. ಇ.ಎಸ್.ಐ ಹಾಗೂ ಕನಿಷ್ಟ ವೇತನಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಂದ 2016ರಿಂದ ಪರಿಶೀಲನೆ ನಡೆಸಿ ಪಾವತಿಯಾಗದೇ ಇರುವುದು ಕಂಡುಬಂದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಲು ನಿರ್ದೇಶಿಸಿದರು.

**ತೀರ್ಮಾನ**:

- ❖ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೋಡರ್, ಕ್ಲೀನರ್, ಡ್ರೈವರ್ ಹಾಗೂ ಯುಜಿಡಿ ವರ್ಕರ್‌ಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಇ.ಎಸ್.ಐ ಪಿ.ಎಫ್ ಹಾಗೂ ಕನಿಷ್ಟ ವೇತನ ಪಾವತಿ ಬಗ್ಗೆ ಪರಿಶೀಲನೆ ನಡೆಸಿ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು.
- ❖ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಲೋಡರ್, ಕ್ಲೀನರ್, ಡ್ರೈವರ್‌ಗಳಿಗೆ ಪ್ರತಿಮಾಹೆ ಕಡ್ಡಾಯವಾಗಿ ಕನಿಷ್ಟ ವೇತನ, ಪಿ.ಎಫ್, ಇ.ಎಸ್.ಐ ಹಾಗೂ ಇತರೆ ಸೌಲಭ್ಯಗಳನ್ನು ಒಳಗೊಂಡಂತೆ ವೇತನ ಪ್ರಮಾಣಪತ್ರವನ್ನು ನೀಡುವುದು.

**ಕ್ರಮ: ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಇ.ಎಸ್.ಐ ಮತ್ತು ಪಿ.ಎಫ್ ಅಧಿಕಾರಿಗಳು**.

**ವಿಷಯ–3: ಸರ್ಕಾರದ ಆದೇಶದನ್ವಯ ಎಲ್ಲಾ ಕಾರ್ಮಿಕರಿಗೂ ನುರಿತ ವೈದ್ಯರಿಂದ ಆರೋಗ್ಯ ಮತ್ತು ಖಡ್ಡಾಯವಾಗಿ 6 ತಿಂಗಳಗೊಮ್ಮೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಿರುವ ಬಗ್ಗೆ ದಾಖಲಾತಿ**.

**ಚರ್ಚೆ**:ಮೈಸೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಗೆ ಪ್ರತಿವರ್ಷ ನುರಿತ ವೈದ್ಯರಿಂದ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲಾಗಿರುತ್ತದೆ. ಪ್ರಸ್ತುತ, ಆರೋಗ್ಯ ತಪಾಸಣೆಯನ್ನು ನಡೆಸಲು ಸುಯೋಗ ಆಸ್ಪತ್ರೆ, ಜೆ.ಎಸ್.ಎಸ್ ಆಸ್ಪತ್ರೆ, ಕ್ಲಿಯರ್ ರೇಡಿಯಂಟ್ ಆಸ್ಪತ್ರೆಗಳಿಗೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಲು ಕಾರ್ಯಾದೇಶ ನೀಡಲಾಗಿದೆ ಎಂದು ಆಯುಕ್ತರು ಸಭೆಯಲ್ಲಿ ವಿವರಿಸಿದರು.

ಮೈಸೂರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೂ ಪ್ರತಿ 6 ತಿಂಗಳಗೊಮ್ಮೆ ನುರಿತ ವೈದ್ಯರಿಂದ ತಪಾಸಣೆಯನ್ನು (ಮಾಸ್ಟರ್ ಹೆಲ್ತ್ ಚೆಕಪ್)ನ್ನು ಮಾಡಿಸಲಾಗುತ್ತಿದೆ ಪೌರಕಾರ್ಮಿಕರಲ್ಲಿ ಆರೋಗ್ಯದ ಸಮಸ್ಯೆಗಳು ಕಂಡುಬಂದಲ್ಲಿ ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿಗಳಿಂದ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ, ಆರೋಗ್ಯ ತಪಾಸಣೆ ನಾಮಕಾವಸ್ತೆಗೆ ಮಾಡಿಸುತ್ತಿರುತ್ತಾರೆ ಹಾಗೂ ಅವುಗಳ ಫೋಟೋ ಪ್ರತಿಗಳನ್ನು ಪಡೆದು ಅಧಿಕಾರಿಗಳು ಅಥವಾ ಇತರೆ ವ್ಯಕ್ತಿಗಳು ಭೇಟಿ ನೀಡುವ ಸಂದರ್ಭದಲ್ಲಿ ಫೋಟೋ ಪ್ರತಿಗಳನ್ನು ತೋರಿಸಿ ತಪಾಸಣೆ ಮಾಡಿಸಿರುವುದಾಗಿ ಹೇಳಿಕೆಯನ್ನು ನೀಡಿರುತ್ತಾರೆ. ನಂಜನಗೂಡು, ಟಿ.ನರಸೀಪುರ ಮತ್ತು ಹೆಚ್.ಡಿ. ಕೋಟೆಗೆ ಭೇಟಿ ನೀಡಿದ ಸಂದರ್ಭದಲ್ಲಿ, ಈ ಬಗ್ಗೆ ನಿರ್ದೇಶನ ನೀಡಿದ್ದರೂ ಸಹಾ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಂಡಿರುವುದಿಲ್ಲ.

ಮಹಾನಗರ ಪಾಲಿಕೆಯಲ್ಲಿ ಈ ಹಿಂದೆ ಅಪೋಲೋ ಆಸ್ಪತ್ರೆಯೊಂದಿಗೆ ಒಂದಾಣಿಕೆ ಮಾಡಿಕೊಂಡು ಎಲ್ಲಾ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಿಸಿರುತ್ತಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ತಪಾಸಣೆ ಆಗಿಲ್ಲವೆಂದು ನೇರಸಂವಾದ ಕಾರ್ಯಕ್ರಮದಲ್ಲಿ ತಿಳಿಸಿರುತ್ತಾರೆ. ಸ್ಥಳೀಯ ಸಂಸ್ಥೆಗಳಲ್ಲಿ ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ತೆಗೆದುಕೊಳ್ಳಲು ಹಣವಿಲ್ಲದೆ ಮೃತಪಟ್ಟಿರುವ ಪ್ರಕರಣಗಳು ಹೆಚ್ಚಾಗಿವೆ. ಸ್ವತಃ ಕಾರ್ಮಿಕರೇ ಸಾಲವನ್ನು ಪಡೆದು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ಆದರೆ ಸದರಿ ಹಣವನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದಿರುಗಿಸಿರುವುದಿಲ್ಲ. ಈ ಬಗ್ಗೆ ತಮ್ಮ ಅಳಲಿನ ಮೂಲಕ ಕಾರ್ಮಿಕರು ವ್ಯಕ್ತಪಡಿಸಿರುತ್ತಾರೆ ಹಾಗೂ ಮನವಿಗಳನ್ನು ಸಹಾ ಸಲ್ಲಿಸಿರುತ್ತಾರೆ.

**ತೀರ್ಮಾನ:**

- ❖ ಮಾನ್ಯ ಅಧ್ಯಕ್ಷರು ಸರ್ಕಾರದ ಆದೇಶದನ್ವಯ 24.10 ಶೇಕಡ ೨೦ ಅನುದಾನದಲ್ಲಿ ಕಡ್ಡಾಯವಾಗಿ ಪೌರಕಾರ್ಮಿಕರ ಚಿಕಿತ್ಸೆಗೆ ಕಾಯ್ದಿರಿಸುವುದು.
- ❖ ಸರ್ಕಾರದ ಜ್ಯೋತಿ ಸಂಜೀವಿನಿ ಹಾಗೂ ಇತರೆ ಚಿಕಿತ್ಸೆಗೆ ಅನುಕೂಲವಾಗುವ ಹೆಲ್ತ್‌ಕಾರ್ಡ್‌ನ್ನು ನೀಡುವುದು.
- ❖ ಕಡ್ಡಾಯವಾಗಿ ಪ್ರಧಾನಮಂತ್ರಿ ಜೀವನ್ ಭೀಮ ಯೋಜನೆ, ಜೀವ ಸುರಕ್ಷತಾ ಯೋಜನೆ ಹಾಗೂ ಗ್ರೂಪ್ ಇನ್ಸ್ಯೂರೆನ್ಸ್ ಮಾಡಿಸಿ ಪ್ರತಿತಿಂಗಳ ಕಂತನ್ನು ಮೂಲ ಮಾಲೀಕರು ಆದಂತಹ ನಗರ ಸ್ಥಳೀಯ ಸಂಸ್ಥೆಗಳೇ ಪಾವತಿಸಬೇಕು.
- ❖ ಸಿಂಗಪೂರ್ ದೇಶದ ಮಾದರಿಯಲ್ಲಿ ಪೌರಕಾರ್ಮಿಕರಿಗೆ ಪ್ರತಿ 6 ತಿಂಗಳಿಗೊಮ್ಮೆ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಲು ಆರೋಗ್ಯಕ್ಕೆ ಸಂಬಂಧಪಟ್ಟ ಉತ್ತಮ ಗುಣಮಟ್ಟದ ತಪಾಸಣೆ ಮಿಷನ್‌ಗಳನ್ನು ಹೊಂದಿರುವ ಆಸ್ಪತ್ರೆಯೊಂದಿಗೆ ಒಪ್ಪಂದ ಮಾಡಿಕೊಂಡು ದಿನಾಂಕವನ್ನು ಕಾರ್ಮಿಕರ ತಪಾಸಣೆಗೆ ನಿಗದಿಗೊಳಿಸುವುದು. ಸದರಿ ದಿನಾಂಕದಂದು ವೇತನಸಹಿತ ರಜೆಯನ್ನು ನೀಡಿ ಖಡ್ಡಾಯವಾಗಿ ಚಿಕಿತ್ಸೆಯನ್ನು ಪಡೆಯಲು ಕಾರ್ಮಿಕರಲ್ಲಿ ಅರಿವು ಮೂಡಿಸುವುದು, ಒಂದುವೇಳೆ ನಿಗದಿಪಡಿಸಿದ ದಿನಾಂಕದಂದು ಕಾರ್ಮಿಕರು ಚಿಕಿತ್ಸೆ ಪಡೆದುಕೊಳ್ಳದೇ ಇದ್ದಲ್ಲಿ, ಅವರ ಆರೋಗ್ಯಕ್ಕೆ ಅವರೇ ನೇರ ಹೊಣೆಯಾಗಿರುತ್ತಾರೆ ಎಂಬ ಯೋಜನೆಯನ್ನು ಮೈಸೂರು ಜಿಲ್ಲೆಯಲ್ಲಿ ಮಾದರಿಯಾಗುವಂತೆ ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

**ಕ್ರಮ: ಜಿಲ್ಲಾಧಿಕಾರಿಗಳು, ಆಯುಕ್ತರು, ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು.**

**ವಿಷಯ–4: ಎಲ್ಲಾ ಮಹಾನಗರ ಪಾಲಿಕೆ ಒಳಗೊಂಡಂತೆ ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ಸರ್ಕಾರದ ಆದೇಶದನ್ವಯ ವಿಶ್ರಾಂತಿ ಗೃಹಗಳನ್ನು ನಿರ್ಮಾಣ ಮಾಡಿರುವ ಕುರಿತು ಭಾವಚಿತ್ರ ಹಾಗೂ ದಾಖಲಾತಿಗಳು**.

**ಚರ್ಚೆ**: ಅಧಿಕಾರವನ್ನು ಸ್ವೀಕರಿಸಿದ ನಂತರ ಅಧ್ಯಕ್ಷನಾಗಿ ನಾನು ಹಲವು ಜಿಲ್ಲೆಗಳಿಗೆ ಭೇಟಿ ನೀಡಿ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದಾಗ, ಅವರು ಪ್ರತಿನಿತ್ಯ ಕೆಲಸಕ್ಕೆ ಬೆಳಗ್ಗೆ 5.00 ಗಂಟೆಗೆ ಹಾಜರಾಗುತ್ತೇವೆ, ಬೆಳಗ್ಗೆ ಇಂದ ಸಂಜೆಯವರೆಗೆ ಮಹಿಳಾ ಸ್ವಚ್ಛತಾ ಕಾರ್ಮಿಕರಿಗೆ ಶೌಚಾಲಯದ ಸಮಸ್ಯೆಗಳ ಕೊರತೆಯಿಂದ ಬಹಳಷ್ಟು ತೊಂದರೆಯಾಗಿದ್ದು, ಈ ಬಗ್ಗೆ ಸೂಕ್ತಕ್ರಮವನ್ನು ಕೈಗೊಳ್ಳುವಂತೆ ಸ್ಯಾನಿಟರಿ ಸೂಪರ್‌ವೈಸರ್ ಮತ್ತು ಹೆಲ್ತ್ ಆಫೀಸ್‌ಗಳಿಗೆ ತಿಳಿಸಿದರೂ, ಯಾವುದೇ ಪ್ರಯೋಜನವಾಗಿರುವುದಿಲ್ಲ, ಈ ಬಗ್ಗೆ ನಮ್ಮ ಪೌರಾಯುಕ್ತರಿಗೂ ಹಲವು ಬಾರಿ ಲಿಖಿತರೂಪದಲ್ಲಿ ದೂರನ್ನು ನೀಡಿರುತ್ತೇವೆ.  ಆದರೂ ಸಹ ಕ್ರಮಕೈಗೊಂಡಿರುವುದಿಲ್ಲ. ದಯಮಾಡಿ ನಮಗೆ ಉತ್ತಮ ಗುಣಮಟ್ಟದ ಶೌಚಾಲಯಗಳನ್ನು ನಿರ್ಮಿಸಿಕೊಡಬೇಕೆಂದು ಪ್ರಾರ್ಥಿಸಿರುತ್ತಾರೆ.  ಈ ಹಿನ್ನೆಲೆಯಲ್ಲಿ ಹಲವು ಬಾರಿ ನಗರಾಭಿವೃದ್ಧಿ ಪ್ರಧಾನ ಕಾರ್ಯದರ್ಶಿಗಳಿಗೆ ಶಿಫಾರಸ್ಸುಗೊಳಿಸಿರುತ್ತೇನೆ, ನಗರಾಭಿವೃದ್ಧಿ ಇಲಾಖೆಯಿಂದ ನಗರೋತ್ಥಾನ ಯೋಜನೆಯಡಿಯಲ್ಲಿ ಉತ್ತಮ ರೀತಿಯ ಶೌಚಾಲಯಗಳನ್ನು ನಿರ್ಮಾಣ ಮಾಡಲು ನಿರ್ದೇಶಿಸಿರುತ್ತಾರೆ.

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಪುರಸಭೆ, ನಗರಸಭೆ, ಪಟ್ಟಣಪಂಚಾಯಿತಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಡ್ಡಾಯವಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡುವಂತೆ ಪೌರಾಯುಕ್ತರು ಮತ್ತು ಮುಖ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತಾರೆ. ಆದರೆ ಈವರೆವಿಗೂ ಈ ಸೌಲಭ್ಯ ಕಲ್ಪಿಸದೇ ಇರುವುದು ವಿಷಾದನೀಯ, ಮಾನ್ಯ ಜಿಲ್ಲಾಧಿಕಾರಿಗಳು ಸದರಿ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಆಯೋಗದ ನಿರ್ದೇಶನಗಳನ್ನು, ಶಿಫಾರಸ್ಸುಗಳನ್ನು ಪಾಲನೆ ಮಾಡದೇ ಇರುವಂತಹ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮಜರುಗಿಸಬೇಕು ಮತ್ತು ಈ ಕೂಡಲೇ ಪೌರಕಾರ್ಮಿಕರ ಸಮಸ್ಯೆಗಳನ್ನು ಅದರಲ್ಲೂ ಮಹಿಳಾ ಪೌರಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿರುವ ಮಾದರಿ ಜಿಲ್ಲೆಯಾಗಿಸಬೇಕು ಎಂಬ ಉದ್ದೇಶವಿರುವುದರಿಂದ ಈ ಸೌಲಭ್ಯವನ್ನು ಅನುಷ್ಠಾನಗೊಳಿಸಲು ಸಭೆಯನ್ನು ನಡೆಸಬೇಕೆಂದು ಸೂಚಿಸಿದರು.

**ತೀರ್ಮಾನ:**

- ❖ ಮಾನ್ಯ ಜಿಲ್ಲಾಧಿಕಾರಿಗಳು ಸದರಿ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಆಯೋಗದ ನಿರ್ದೇಶನಗಳನ್ನು, ಶಿಫಾರಸ್ಸುಗಳನ್ನು ಪಾಲನೆ ಮಾಡದೇ ಇರುವಂತಹ ಅಧಿಕಾರಿಗಳ ಮೇಲೆ ಕಟ್ಟು ನಿಟ್ಟಿನ ಕ್ರಮಕೈಗೊಳ್ಳುವುದು. ಈವರೆಗೂ ಆಯೋಗವು ನಿರ್ದೇಶಿಸಿದ್ದರೂ ಸಹಾ, ಪಾಲನೆ ಮಾಡದೇ ಇರುವ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವುದು.

**ಕ್ರಮ: ಜಿಲ್ಲಾಧಿಕಾರಿಗಳು, ಆಯುಕ್ತರು, ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು**.

**ವಿಷಯ–5: ಪೌರಕಾರ್ಮಿಕರಿಗಾಗಿ ನಿರ್ಮಾಣ ಮಾಡಿರುವ ಸಮುದಾಯ ಭವನಗಳ ಸಂಖ್ಯೆ ಮತ್ತು ಅವುಗಳ ವಿವರ**.

**ಚರ್ಚೆ**: ಪೌರಕಾರ್ಮಿಕರು ನೇರಸಂವಾದ ಕಾರ್ಯಕ್ರಮದಲ್ಲಿ ತಮ್ಮ ಮಕ್ಕಳ ಹಾಗೂ ಇತರೆ ಕಾರ್ಯಕ್ರಮಗಳನ್ನು ನಡೆಸಲು ಹಲವು ಜಿಲ್ಲೆಗಳಲ್ಲಿ ಸೂಕ್ತ ಸಮುದಾಯ ಭವನಗಳನ್ನು ನಿರ್ಮಿಸಿರುವುದಿಲ್ಲ ಕೆಲವು ನಿರ್ಮಾಣಗೊಂಡ ಸಮುದಾಯ ಭವನಗಳು ಸರಿಯಾದ ರೀತಿಯ ನಿರ್ವಹಣೆ ಇಲ್ಲದೆ ಬಹಳಷ್ಟು ದುರಸ್ಥಿಯಲ್ಲಿರುತ್ತವೆ ಮತ್ತು ಮೈಸೂರು ಮಹಾನಗರ ಪಾಲಿಕೆಯಲ್ಲಿ 1900 ಪೌರಕಾರ್ಮಿಕ ಕುಟುಂಬಗಳಿದ್ದು ಹಲವಾರು ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಆದರೆ, ಬಹಳಷ್ಟು ಕಾರ್ಮಿಕರು ಸಾಲವನ್ನು ಪಡೆದು ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತಾರೆ, ತಾವು ಮೈಸೂರು ಜಿಲ್ಲೆಯವರಾಗಿರುವುದರಿಂದ ಮೈಸೂರಿನಲ್ಲಿ ಪೌರಕಾರ್ಮಿಕರಿಗಾಗಿ ಒಂದು ಸಮುದಾಯ ಭವನವನ್ನು ನಿರ್ಮಿಸಿಕೊಡಬೇಕೆಂದು ಪ್ರಾರ್ಥಿಸಿದರು.

**ತೀರ್ಮಾನ**: ಪೌರಕಾರ್ಮಿಕರು ಅತ್ಯಂತ ಕಡುಬಡವರಾಗಿರುವುದರಿಂದ ಅವರ ಸಾಮಾಜಿಕ ಕಾರ್ಯಕ್ರಮಗಳಿಗಾಗಿ ಮಹಾನಗರ ಪಾಲಿಕೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಸಮುದಾಯ ಭವನವನ್ನು ನಿರ್ಮಾಣ ಮಾಡಲು ಕ್ರಮ ವಹಿಸುವುದು.

**ಕ್ರಮ: ಜಿಲ್ಲಾಧಿಕಾರಿಗಳು, ಆಯುಕ್ತರು, ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ**.

**ವಿಷಯ-6: 24.10ರಡಿಯಲ್ಲಿ 20% ಪೌರಕಾರ್ಮಿಕರ ಕಲ್ಯಾಣಕ್ಕಾಗಿ ನಿಗದಿಪಡಿಸಿರುವ ಅನುದಾನ, ಬಳಕೆ ಮಾಡಿದ ಮೊತ್ತ ಮತ್ತು ಯೋಜನೆಗಳ ವಿವರ**

**ಚರ್ಚೆ**: ಮೈಸೂರು ಜಿಲ್ಲೆಯ ಹಲವು ಪುರಸಭೆ, ನಗರಸಭೆ ಮತ್ತು ಪಟ್ಟಣಪಂಚಾಯಿತಿಗಳಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ 24.10ರಡಿಯಲ್ಲಿ 20% ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಅಂದರೆ ಶಿಕ್ಷಣ, ವಸತಿ ಮತ್ತು ಕೌಶಲ್ಯಾಭಿವೃದ್ಧಿಯ ಯೋಜನೆಗಳಗಾಗಿ ವೆಚ್ಚಮಾಡುವುದಾಗಿ ನಿರ್ದೇಶನ ನೀಡಿರುತ್ತೇವೆ. ಆದರೂ ಸಹ ಎಲ್ಲಾ ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಉಪಹಾರಕ್ಕೆ ಮತ್ತು ಸುರಕ್ಷತಾ ಪರಿಕರಗಳಿಗೆ ಬಳಕೆ ಮಾಡಿರುತ್ತಾರೆ. ಇದರಿಂದ ಬಹಳಷ್ಟು ಕಾರ್ಮಿಕರಿಗೆ ಅನ್ಯಾಯವಾಗಿರುತ್ತದೆ. ಈ ಕುರಿತು ನಗರ ಸಭೆಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ನಿರ್ದೇಶಿಸಿರುತ್ತೇನೆ. ಆದರೂ ಸಹಾ ಉಪಹಾರಕ್ಕೆ ಬಳಕೆ ಮಾಡಿರುವುದರಿಂದ ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಬಳಕೆ ಮಾಡಲು ಅಸಾಧ್ಯವಾಗಿರುತ್ತದೆ, ಕಾರಣ ಬಹಳಷ್ಟು ಹಣವು ಇವರ ಸುರಕ್ಷತಾ ಪರಿಕರಗಳಿಗೆ ಉಪಯೋಗಿಸುತ್ತಿರುತ್ತಾರೆ. ಬಹಳಷ್ಟು ಜಿಲ್ಲೆಗಳಲ್ಲಿ 24.10 ರಡಿಯಲ್ಲಿ 20%ರಷ್ಟು ಅನುದಾನದ ಖರ್ಚು ಸಹಾ ಮಾಡಿರುವುದಿಲ್ಲ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ಕಾಯ್ದೆಯ ಉಲ್ಲಂಘನೆಯಾಗಿರುತ್ತದೆ.

**ತೀರ್ಮಾನ**:

- ❖ ಮಾನ್ಯ ಜಿಲ್ಲಾಧಿಕಾರಿಗಳು ಪ್ರತಿ 3 ತಿಂಗಳಗೊಮ್ಮೆ ನಡೆಯುವ ಸಭೆಗಳಲ್ಲಿ, ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿಗದಿಯಾಗಿರುವ 24.10ರ ಪ್ರಗತಿಯ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ ಹಾಗೂ ಪರಿಶೀಲನೆಯಲ್ಲಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಕಡ್ಡಾಯವಾಗಿ ಬಳಸದೇ ಇರುವಂತಹ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನುರೀತಿಯ ಕ್ರಮ ಜರುಗಿಸಬೇಕಾಗಿ ಆಯೋಗದಿಂದ ನಿರ್ದೇಶಿಸಿದರು.

- ❖ ಮೈಸೂರು ಮಹಾನಗರ ಪಾಲಿಕೆಯವರು ದಿನಾಂಕ:13.03.2023ರಂದು ನೀಡಿರುವ ಬುಕ್ ಲೆಟ್ ಮಾಹಿತಿಯ ಅನುಸಾರ 2019-20ನೇ ಸಾಲಿನಲ್ಲಿ ನಿಗಧಿಯಾಗಿರುವ ಒಟ್ಟು ಅನುದಾನ 109.75 ಲಕ್ಷ ನಿಗಧಿಯಾಗಿರುತ್ತದೆ. ಆದರೆ ಖರ್ಚಾಗಿರುವುದು ಕೇವಲ 20.ಲಕ್ಷ ರೂಗಳು ಮಾತ್ರ, 2020-21 ನೇ ಸಾಲಿನಲ್ಲಿ 187.9 ಲಕ್ಷ ಗಳಲ್ಲಿ ಕೇವಲ 4.25 ಲಕ್ಷಗಳು ಮಾತ್ರ ಖರ್ಚಾಗಿರುತ್ತದೆ, 2021-22 ಸಾಲಿನಲ್ಲಿ 78 ಲಕ್ಷ ಪೈಕಿ 2 ಲಕ್ಷ ರೂ ಮಾತ್ರ ಖರ್ಚಾಗಿರುತ್ತದೆ, ಉಳಿದಂತೆ 2022-23ನೇ ಸಾಲಿಗೆ ರೂ.95 ಲಕ್ಷದಲ್ಲಿ ಖರ್ಚಾಗಿರುವ ವಿವರಣೆಯನ್ನು ನೀಡಿರುವುದಿಲ್ಲ. ಬುಕ್‌ಲೆಟ್‌ನಲ್ಲಿ ನೀಡಿರುವ ಮಾಹಿತಿಯ ಅನುಸಾರ ಬಹಳಷ್ಟು ಲೋಪದೋಷವಿರುವುದು, ಆಯೋಗದ ಗಮನಕ್ಕೆ ಕಂಡುಬಂದಿರುತ್ತದೆ. ಜಿಲ್ಲಾಧಿಕಾರಿಗಳು ಸೂಕ್ತ ಪರಿಶೀಲನೆಯನ್ನು ನಡೆಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ನಿಗಧಿಯಾಗಿರುವಂಹ ಅದರಲ್ಲೂ ಪೌರಕಾರ್ಮಿಕರ ಕಲ್ಯಾಣಕ್ಕೆ ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗದೇ ಇರುವುದು ಮೇಲ್ನೋಟಕ್ಕೆ

ಕಂಡುಬಂದಿರುವುದರಿಂದ, ಈ ಬಗ್ಗೆ ಸೂಕ್ತ ಕ್ರಮವಹಿಸಿ ಪರಿಶೀಲನೆ ನಡೆಸಿ ಆಯೋಗಕ್ಕೆ ಕೂಡಲೇ ವರದಿ ಸಲ್ಲಿಸಬೇಕು.

**ಕ್ರಮ: ಜಿಲ್ಲಾಧಿಕಾರಿಗಳು, ಆಯುಕ್ತರು, ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.**

**ವಿಷಯ–7: ಎಂ.ಎಸ್ ಕಾಯ್ದೆ 2013ರ ಪ್ರಕಾರ ಸುರಕ್ಷತಾ ಪರಿಕರಗಳಿಲ್ಲದೆ ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು/ಸಫಾಯಿ ಕರ್ಮಚಾರಿಗಳು/ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸುರಕ್ಷತಾ ಪರಿಕರಗಳು ಇತ್ಯಾದಿಗಳನ್ನು ಒದಗಿಸಿರುವ ಕುರಿತು.**

**ಚರ್ಚೆ:**ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಸುರಕ್ಷತ ಪರಿಕರಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಆಯೋಗವು ಛಾಯಾಚಿತ್ರಗಳ ಮೂಲಕ ಪ್ರದರ್ಶಿಸಿ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಲಾಗಿರುತ್ತದೆ, ಆದರೆ ಈ ಬಗ್ಗೆ ಈವರೆಗೂ ವರದಿ ಸ್ವೀಕೃತವಾಗಿರುವುದಿಲ್ಲ, ಜಿಲ್ಲೆಯ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಚತಾ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರುಗಳಿಗೆ ಅಗತ್ಯ ಸುರಕ್ಷಾ ಧರಿಸುಗಳನ್ನು ಹಾಗೂ ಸ್ವಚ್ಚತಾ ಪರಿಕರಗಳನ್ನು ನೀಡಿ, ಸುರಕ್ಷಾ ಧರಿಸುಗಳನ್ನು ಧರಿಸಿ ಸ್ವಚ್ಚತಾ ಕೆಲಸ ನಿರ್ವಹಿಸಲು ಕ್ರಮವಹಿಸುವುದು.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಸುರಕ್ಷತಾ ಪರಿಕರಗಳಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಕಾರಣರಾಗಿರುವ ಆರೋಗ್ಯ ನಿರೀಕ್ಷಕರು ಮತ್ತು ಪರಿಸರ ಅಭಿಯಂತರರ ಮೇಲೆ ದಂಡವನ್ನು ವಿಧಿಸಲು ಸರ್ಕಾರವು ಆದೇಶಿಸಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಅಧಿಕಾರಿಗಳು ವಾರದಲ್ಲಿ 2 ಭಾರಿ ತಮ್ಮ ವ್ಯಾಪ್ತಿಯ ನಗರಸಭೆ, ಪುರಸಭೆಗಳಿಗೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿ ಪರಿಶೀಲನಾ ವರದಿಯನ್ನು ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸುವುದು.

**ತೀರ್ಮಾನ:**

ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಅಧಿಕಾರಿಗಳು ವಾರದಲ್ಲಿ 2 ಭಾರಿ ತಮ್ಮ ವ್ಯಾಪ್ತಿಯ ನಗರಸಭೆ, ಪುರಸಭೆಗಳಿಗೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿ ಪರಿಶೀಲನಾ ವರದಿಯನ್ನು ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸುವುದು.

**ಕ್ರಮ: ಆಯುಕ್ತರು, ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು.**

**ವಿಷಯ–8: ಪೌರಕಾರ್ಮಿಕರಿಗೆ ಪೌರಾಡಳಿತ ನಿರ್ದೇಶನಾಲಯದ ಆದೇಶದ ಅನ್ವಯ ಗೃಹಭಾಗ್ಯ ಯೋಜನೆಯಡಿಯಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸುವುದರ ಬಗ್ಗೆ ವಿವರ.**

**ಚರ್ಚೆ**: ಖಾಯಂ ಪೌರಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯ ಅಡಿಯಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಆದರೆ ನೇರಪಾವತಿ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ವಸತಿ ಸೌಲಭ್ಯಗಳು ಇಲ್ಲದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರ ವೇತನ ಪೌರಕಾರ್ಮಿಕರಿಗೆ ನಿವೇಶನ ಮತ್ತು ವಸತಿಯನ್ನು ಕಲ್ಪಿಸುವ ಸಂಬಂಧ ಜಿಲ್ಲಾಧಿಕಾರಿಗಳು ಈ ಬಗ್ಗೆ ಜಿಲ್ಲೆಯ ಉಸ್ತುವಾರಿ ಸಚಿವರೊಂದಿಗೆ, ಸಂಸದರೊಂದಿಗೆ ಚರ್ಚಿಸಿ ನಿವೇಶನ ಮತ್ತು ವಸತಿಗಳನ್ನು ನೀಡುವ ಸಂಬಂಧ ಸೂಕ್ತ ಕ್ರಮಕೈಗೊಳ್ಳುವುದು.

**ತೀರ್ಮಾನ:**

ಖಾಯಂ ಪೌರಕಾರ್ಮಿಕರಿಗೆ ನೀಡಿರುವ ರೀತಿಯಲ್ಲಿ ನೇರಪಾವತಿ ಮತ್ತು ಹೊರಗುತ್ತಿಗೆ ಕಾರ್ಮಿಕರಿಗೂ ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಸೌಲಭ್ಯ ಕಲ್ಪಿಸುವುದು. ಪೌರಕಾರ್ಮಿಕರಿಗೆ ನಿವೇಶನಕ್ಕಾಗಿ ಸರ್ಕಾರದ ಇತರೆ ಜಾಗಗಳನ್ನು ಗುರುತಿಸಿ ಅನುಮೋದನೆಗೆ ಕಳುಹಿಸಿದ ಕೂಡಲೇ ಅನುಮೋದಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿರುವುದರಿಂದ ಎಲ್ಲಾ ಪೌರಕಾರ್ಮಿಕರಿಗೆ ಗೃಹ ಭಾಗ್ಯವನ್ನು ಕಲ್ಪಿಸುವುದು. ನಗರ ಸ್ಥಳೀಯ ಸಂಸ್ಥೆಗಳ ಕರ್ತವ್ಯವಾಗಿರುವುದರಿಂದ, ಈ ಬಗ್ಗೆ ಕ್ರಮವಹಿಸಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಲು ನಿರ್ದೇಶಿಸಿದರು.

**ಕ್ರಮ: ಜಿಲ್ಲಾಧಿಕಾರಿಗಳು, ಆಯುಕ್ತರು, ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.**

**ವಿಷಯ–9: ಎಂ.ಎಸ್‌ಕಾಯ್ದೆ 2013 ಸೆಕ್ಷನ್–13 & 16ರ ಪ್ರಕಾರ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಿರುವಂತೆ ಫಲಾನುಭವಿವಾರು ಕಾಯ್ದೆಯಲ್ಲಿ ತಿಳಿಸಿರುವ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಿರುವ ಬಗ್ಗೆ ದಾಖಲಾತಿಗಳು ಮತ್ತು ವಿವರ.**

**ಚರ್ಚೆ**: ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ನಿರ್ಮೂಲನೆ ಮಾಡಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿರುವವರನ್ನು ಗುರುತಿಸಿ ಪುನರ್ವಸತಿ ಕಲ್ಪಿಸುವುದು. ಸರ್ಕಾರದ ಮುಖ್ಯ ಉದ್ದೇಶವಾಗಿರುವುದರಿಂದ ಕರ್ನಾಟಕ ಸರ್ಕಾರವು 2013, 2016 ಮತ್ತು 2018ರಲ್ಲಿ ವಿಶೇಷ ಸಮೀಕ್ಷೆಗಳನ್ನು ಕೈಗೊಂಡು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿರುತ್ತದೆ,

ಮೈಸೂರು ಜಿಲ್ಲೆಯಲ್ಲಿ 2017ರಲ್ಲಿ 1016 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕೇಂದ್ರ ಸರ್ಕಾರದಿಂದ ಒಂದುಬಾರಿ ಧನಸಹಾಯ ಮಂಜೂರಾಗಿರುತ್ತದೆ. ರಾಜ್ಯ ಸರ್ಕಾರದಿಂದ ಸೆಕ್ಷನ್ 13 ಮತ್ತು 16ರ ಪ್ರಕಾರ ವಾಸಿಸಲು ಯೋಗ್ಯವಾದ ಮನೆ ಒಳಗೊಂಡಂತೆ ಒಂದು ಗುರುತಿನ ಚೀಟಿ, ವಾಸಿಸಲು ಯೋಗ್ಯವಾದ ಮನೆ, ಪರ್ಯಾಯ ಉದ್ಯೋಗ ಮತ್ತು ಅವರ ಮಕ್ಕಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಉಚಿತ ಶಿಕ್ಷಣವನ್ನು ನೀಡಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ತಡೆಯುವಲ್ಲಿ ಕ್ರಮವಹಿಸಬೇಕಾಗಿರುತ್ತದೆ. ಆದರೆ, ನಗರ ಪ್ರದೇಶದಲ್ಲಿ 2018 ರ ಸರ್ವೆ ಪೈಕಿ 5080 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿರುತ್ತದೆ. ಗ್ರಾಮೀಣ ಭಾಗದಲ್ಲಿ ಗುರುತಿಸಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಪಟ್ಟಣ ಪಂಚಾಯಿತಿಗೆ ಅಥವಾ ನಗರ ಸಭೆಗೆ ವರ್ಗಾವಣೆಯಾಗಿರುತ್ತದೆ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಯಾವ ಪ್ರದೇಶದಲ್ಲಿ ವಾಸವಾಗಿರುತ್ತಾರೋ, ಆ ಸ್ಥಳೀಯ ಸಂಸ್ಥೆಯು ಅವರಿಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು, ಈ ಕೂಡಲೇ ಎಂ.ಎಸ್. ಕಾಯ್ದೆಯ ಪ್ರಕಾರ ಪುನರ್ವಸತಿ ಕಲ್ಪಿಸಲು ಹಾಗೂ 3 ತಿಂಗಳಿಗೊಮ್ಮೆ ನಡೆಯುವ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಕಡ್ಡಾಯವಾಗಿ ಸದರಿ ವಿಚಾರಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳಿದ್ದಲ್ಲಿ ಕೂಡಲೇ ಪರಿಹರಿಸಿಕೊಳ್ಳುವುದು ಹಾಗೂ 9 ತಿಂಗಳೊಳಗಾಗಿ ಕಡ್ಡಾಯವಾಗಿ ಪುನರ್ವಸತಿ ಕಲ್ಪಿಸಲು ಕ್ರಮ ವಹಿಸುವುದು.

**ತೀರ್ಮಾನ**: ಕಡ್ಡಾಯವಾಗಿ ಎಂ.ಎಸ್. ಕಾಯ್ದೆಯ ಪ್ರಕಾರ 9 ತಿಂಗಳೊಳಗಾಗಿ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಧೃಡೀಕರಿಸಿ ಆಯೋಗಕ್ಕೆ ವರದಿಯನ್ನು ಸಲ್ಲಿಸುವುದು.

**ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.**

**ವಿಷಯ–10: ಎಂ.ಎಸ್ ಕಾಯ್ದೆ 2013 ಸೆಕ್ಷನ್–24 & 25ರ ಪ್ರಕಾರ ಜಿಲ್ಲಾ ಜಾಗೃತಿ ಸಮಿತಿ ಮತ್ತು ಉಪವಿಭಾಗ ಮಟ್ಟದ ಜಾಗೃತಿ ಸಭೆಗಳನ್ನು ಪ್ರತಿ 3 ತಿಂಗಳಿಗೊಮ್ಮೆ ನಡೆಸುತ್ತಿರುವ ಹಾಗೂ ಹಿಂದಿನ ಸಭಾ ನಡವಳಿ ಮೇಲೆ ಕೈಗೊಳ್ಳುತ್ತಿರುವ ಕ್ರಮದ ಬಗ್ಗೆ ದಾಖಲಾತಿಗಳು ಮತ್ತು ಆಯೋಗಕ್ಕೆ ಮತ್ತು ಸರ್ಕಾರಕ್ಕೆ ಸಲ್ಲಿಸಿರುವ ಶಿಫಾರಸ್ಸುಗಳು.**

**ಚರ್ಚೆ**: ಎಂ.ಎಸ್ ಕಾಯ್ದೆ 2013 ಸೆಕ್ಷನ್ 4 ಮತ್ತು 5ರ ಪ್ರಕಾರ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸಾನಿಟರಿ ಲೆಟ್ರಿನ್ ಆಗಿ ಪರಿವರ್ತಿಸುವುದು ಮಲಮೂತ್ರಗಳನ್ನು ನೇರವಾಗಿ ತೆರೆದ ಚರಂಡಿಗಳಿಗೆ ಬಿಡುವುದನ್ನು ಸಂಪೂಣವಾಗಿ ನಿಷೇದಿಸಿದ್ದರೂ ಸಹ ಮೈಸೂರು ಮಹಾನಗರ ಪಾಲಿಕೆಯಲ್ಲಿ ಜೀವಂತವಾಗಿರುತ್ತದೆ. ಆಯೋಗದಲ್ಲಿ ಈ ಬಗ್ಗೆ ಪ್ರಕರಣವನ್ನು ಸಹಾ ದಾಖಲಿಸಲಾಗಿದೆ. ಹಲವು ನಿರ್ದೇಶನಗಳನ್ನು ನೀಡಿದ್ದರೂ, ಇಲ್ಲಿಯವರೆಗೂ ಸಂಬಧಪಟ್ಟ ಅಧಿಕಾರಿಗಳು ಸೂಕ್ತಕ್ರಮ ಕೈಗೊಂಡಿರುವುದಿಲ್ಲ, ಸೆಕ್ಷನ್ 19 ರಪ್ರಕಾರ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ನಮ್ಮಲ್ಲಿ ಯಾವುದೇ ರೀತಿಯ ಇನ್‌ಸ್ಯಾನಿಟರಿ ಲ್ಯಾಟರಿನ್‌ಗಳು ಜೀವಂತವಾಗಿರುವುದಿಲ್ಲ, ಸಂಪೂರ್ಣವಾಗಿ ಸ್ಯಾನಿಟರಿ ಲ್ಯಾಟರಿನ್‌ಗಳಾಗಿ ಪರಿವರ್ತಿಸಿರುತ್ತೇವೆ ಎಂದು ಅಫಿಡವಿಟ್ ಮೂಲಕ ಸಲ್ಲಿಸಲಾಗಿರುತ್ತದೆ. ಆದರೂ ಮೈಸೂರು ಮಹಾನಗರ ಪಾಲಿಕೆಯಲ್ಲಿ ಜೀವಂತವಾಗಿರುವುದು ವಿಷಾದನೀಯ ಸಂಗತಿಯಾಗಿರುತ್ತದೆ.

ಮಾನ್ಯ ಜಿಲ್ಲಾಧಿಕಾರಿಗಳು ಕಾಯ್ದೆಯ ಪ್ರಕಾರ ಪ್ರತಿ 3 ತಿಂಗಳಿಗೊಮ್ಮೆ ನಡೆಯುವ ಜಿಲ್ಲಾ ಜಾಗೃತಿ ಸಮಿತಿಯ ಸಭೆಗಳಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಸೂಕ್ತ ರೀತಿಯ ನಿರ್ದೇಶನ ನೀಡಬೇಕಾಗಿರುತ್ತದೆ. ಈ ಕೂಡಲೇ ಎಂ.ಎಸ್ ಕಾಯ್ದೆ 13 ರಪ್ರಕಾರ ಇನ್‌ಸ್ಯಾನಿಟರಿ ಲ್ಯಾಟರಿನ್‌ಗಳು ಕಂಡುಬಂದಲ್ಲಿ ಆ ವ್ಯಾಪ್ತಿಗೆ ಒಳಪಡುವ ಅಧಿಕಾರಿಗಳ ಮೇಲೆ ಸೆಕ್ಷನ್–8ರ ಪ್ರಕಾರ ಕ್ರಮವನ್ನು ಜರುಗಿಸುವುದು ಹಾಗೂ ಈ ಕೂಡಲೇ ಸ್ಯಾನಿಟರಿ ಲ್ಯಾಟರಿನ್‌ಗಳಾಗಿ ಪರಿವರ್ತಿಸುವುದು. ಈ ಕೂಡಲೇ 1 ತಿಂಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸುವುದು. ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲೂ ಈ ಬಗ್ಗೆ ಸೆಕ್ಷನ್–20 ರಪ್ರಕಾರ ರಚಿಸಲಾಗಿರುವ ಸಮಿತಿಯು ಪರಿಶೀಲನೆಯನ್ನು ನಡೆಸಿ ಇನ್‌ಸ್ಯಾನಿಟರಿ ಲೆಟ್ರಿನ್ ಇಲ್ಲದಿರುವ ಬಗ್ಗೆ ವರದಿ ಸಲ್ಲಿಸುವುದು.

**ತೀರ್ಮಾನ**: ಎಂ.ಎಸ್ ಕಾಯ್ದೆ 2013 ಸೆಕ್ಷನ್ 4 ಮತ್ತು 5ರ ಪ್ರಕಾರ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಜೀವಂತವಾಗಿಟ್ಟಿರುವ ಮಹಾನಗರ ಪಾಲಿಕೆ ಅಧಿಕಾರಿಗಳ ಮೇಲೆ ಕಾನೂನು ರೀತಿಯ ಕ್ರಮವನ್ನು ಜರುಗಿಸುವುದು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇರುವಂತಹ ಇನ್ ಸ್ಯಾನಿಟರಿ ಲ್ಯಾಟರಿನ್‌ಗಳನ್ನು ಸೆಕ್ಷನ್ ಪ್ರಕಾರ ಮತ್ತೊಮ್ಮೆ ಸರ್ವೆ ಮಾಡಿ ಸ್ಯಾನಿಟಿ ಲ್ಯಾಟರಿನ್ ಆಗಿ ಪರಿವರ್ತಿಸುವುದು.

**ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಪಂಚಾಯತ್ ಅಭಿವೃದ್ದಿ ಅಧಿಕಾರಿಗಳು.**

**ರೊಚ್ಚುತೊಟ್ಟಿಯನ್ನು ಸ್ವಚ್ಛಗೊಳಸಲು ಆಧುನಿಕ ತಂತ್ರಜ್ಞಾನ ಯಂತ್ರಗಳನ್ನು ಬಳಸುತ್ತಿರುವುದರ ಬಗ್ಗೆ ವಿವರ.**

| ತಾಲ್ಲೂಕು ಗ್ರಾಮ/ ನಗರ ಸ್ಥಳೀಯ ಸಂಸ್ಥೆ | ತಾಲ್ಲೂಕು ಮಟ್ಟದಲ್ಲಿ ಇರುವ ಯಂತ್ರಗಳ ವಿವರ | | | | ಈ ಪೈಕಿ ಕಾರ್ಯ ನಿರ್ವಹಿಸುತ್ತಿರುವ ಯಂತ್ರಗಳ ಸಂಖ್ಯೆ | | | | ದುರಸ್ಥಿಯಲ್ಲಿರುವ ಯಂತ್ರಗಳ ಸಂಖ್ಯೆ | | | | ಕಾರ್ಯನಿರ್ವಹಿಸುತ್ತಿರುವ ಯಂತ್ರಗಳು ಸಾಕಾಗುವುದೇ? ಸಾಕಾಗದೇ ಇದ್ದಲ್ಲಿ ಬೇಕಾಗಿರುವ ಯಂತ್ರಗಳ ಸಂಖ್ಯೆ | ಸಾಲದಿದ್ದಲ್ಲಿ ಖರೀದಿಸಲು ಕೈಗೊಂಡಿರುವ ಕ್ರಮ | ಖರೀದಿಸಲು ಅನುದಾನ ಲಭ್ಯವಿದೆಯೆ? |
|---|---|---|---|---|---|---|---|---|---|---|---|---|---|---|---|
| | ಜೆಟ್ಟಿಂಗ್ | ಸಕ್ಕಿಂಗ್ | ರಾಡಿಂಗ್ | ರಿಸಾಲ್ಟಿಂಗ್ | ಜೆಟ್ಟಿಂಗ್ | ಸಕ್ಕಿಂಗ್ | ರಾಡಿಂಗ್ | ರಿಸಾಲ್ಟಿಂಗ್ | ಜೆಟ್ಟಿಂಗ್ | ಸಕ್ಕಿಂಗ್ | ರಾಡಿಂಗ್ | ರಿಸಾಲ್ಟಿಂಗ್ | 1 ಸಕ್ಕಿಂಗ್ ಮಿಷನ್ 1 ರಿಸಾಲ್ಟಿಂಗ್ ಮಿಷನ್ ಅವಶ್ಯಕತೆಯಿರುತ್ತದೆ. | | ಇಲ್ಲ |
| | ೫ | ೧ | ೨ | ೬ | 4 | ೧ | ೨ | ೬ | ೧ | ೦ | ೦ | ೦ | | | |

**ವಿಷಯ–11: ಎಂ.ಎಸ್ ಕಾಯ್ದೆ 2013 ಸೆಕ್ಷನ್–33ರ ಪ್ರಕಾರ ಒಳಚರಂಡಿ/ ತೆರೆದಗುಂಡಿ/**

**ಚರ್ಚೆ**: ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬಹಳಷ್ಟು ಯಂತ್ರಗಳ ಕೊರತೆಯಿದ್ದು, ಈಗಲೂ ಸಹ ಹಲವು ಪ್ರದೇಶಗಳಲ್ಲಿ ಸ್ಕ್ಯಾವೆಂಜಿಂಗ್ ಕೆಲಸ ನಡೆಸುತ್ತಿದ್ದು, ರಾತ್ರಿಯ ಸಮಯದಲ್ಲಿ ಪಿಟ್‌ಗುಂಡಿಗಳನ್ನು ಸ್ವಚ್ಛಗೊಳಸುತ್ತಿರುತ್ತಾರೆ ಎಂದು ಹಲವಾರು ಸಂಘ ಸಂಸ್ಥೆಯ ಮುಖಂಡರುಗಳು ಹಾಗೂ ಇತರೆ ವ್ಯಕ್ತಿಗಳು ದೂರು ನೀಡಿರುತ್ತಾರೆ. ರಾಜ್ಯ ಸರ್ಕಾರವು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್‌ನ್ನು ನಿರ್ಮೂಲನೆ ಮಾಡಲು ಎಲಿಮಿನೇಶನ್ ಆಫ್ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಸಿಸ್ಟಂನ್ನು ಜಾರಿಗೊಳಸಿರುತ್ತದೆ.

ನಗರ ಸ್ಥಳೀಯ ಸಂಸ್ಥೆ ಮತ್ತು ಗ್ರಾಮಪಂಚಾಯಿತಿಗಳಲ್ಲಿ ಯಂತ್ರಗಳ ಅವಶ್ಯಕತೆಯಿರುವುದರಿಂದ ಪ್ರತಿ 3 ತಿಂಗಳಗೊಮ್ಮೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸದರಿ ವಿಷಯಗಳ ಬಗ್ಗೆ ಮಂಡಿಸಿ ಆಯೋಗಕ್ಕೆ ಮತ್ತು ಸರ್ಕಾರಕ್ಕೆ ಯಂತ್ರಗಳ ಖರೀದಿಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿರುತ್ತದೆ. ಸದರಿ ಪ್ರಸ್ತಾವನೆಗಳ ಅನ್ವಯ ಆಯೋಗವು ಪ್ರತಿ 6 ತಿಂಗಳಗೊಮ್ಮೆ ನಡೆಯುವ ರಾಜ್ಯ ಮೇಲ್ವಿಚಾರಣಾ ಸಮಿತಿಯ ಸಭೆಗಳಲ್ಲಿ ಸದರಿ ವಿಷಯಗಳನ್ನು ಮಂಡಿಸಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಂದ ಅನುಮೋದನೆಯನ್ನು ನೀಡಬಹುದಾಗಿರುತ್ತದೆ. ಆದರೆ ಈವರೆಗೂ ಯಾವುದೇ ಪ್ರಸ್ಥಾವನೆಗಳನ್ನು ಆಯೋಗಕ್ಕೆ ಕಳುಹಿಸಿರುವುದಿಲ್ಲವೆಂದು ತಿಳಸಿದರು.

**ತೀರ್ಮಾನ**:

❖ ಕೇಂದ್ರ ಸರ್ಕಾರದ ಆದೇಶದನ್ವಯ ರಾಜ್ಯ ಸರ್ಕಾರವು ಎಲಿಮಿನೇಷನ್ ಆಫ್ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಸಿಸ್ಟಮ್‌ಅನ್ನು ಜಾರಿಗೆ ತರಲು 2020ರಲ್ಲಿ ಆದೇಶವನ್ನು ಹೊರಡಿಸಿ ಪ್ರತಿ ಜಿಲ್ಲೆಯಲ್ಲೂ ಅಗ್ನಿಶಾಮಕದಳದ ಮಾದರಿಯಂತೆ ಮ್ಯಾನ್‌ಹೋಲ್ ಟಾಸ್‌ಫೋರ್ಸ್ ಸಿಸ್ಟಮ್‌ನ್ನು ಪ್ರಾರಂಭಿಸಲು ನಿರ್ದೇಶನವಿರುತ್ತದೆ. ಜಿಲ್ಲೆಗೆ ಆಯೋಗವು ಭೇಟಿ ನೀಡಿದ ಸಂದರ್ಭದಲ್ಲಿ ಅವೈಜ್ಞಾನಿಕವಾಗಿ

ಮ್ಯಾನ್‌ಹೋಲ್‌ನ್ನು ಯಂತ್ರದಿಂದ ಸ್ವಚ್ಛಗೊಳಿಸುತ್ತಿರುವುದು ಕಂಡುಬಂದಿರುತ್ತದೆ, ಆದ್ದರಿಂದ ಅತೀ ತುರ್ತಾಗಿ ನುರಿತ ತಜ್ಞರಿಂದ ಸರ್ಕಾರಿ ಹಾಗೂ ಖಾಸಗಿ ವಲಯಗಳ ಸಕ್ಕಿಂಗ್, ಜೆಟ್ಟಿಂಗ್ ಮತ್ತು ರ್‍ಯಾಡರಿಂಗ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಉತ್ತಮಗುಣಮಟ್ಟದ ತರಬೇತಿಯನ್ನು ನೀಡಿ ಮ್ಯಾನ್‌ಹೋಲ್ ಟಾಸ್ಕ್‌ಫೋರ್ಸ್ ಸಿಸ್ಟಂನ್ನು ಜಾರಿಗೆ ತಂದು ಈ ಕೂಡಲೇ ಅನುಷ್ಠಾನಗೊಳಿಸಲು ಸೂಚಿಸಿದರು

❖ ಮಾನ್ಯ ಜಿಲ್ಲಾಧಿಕಾರಿಗಳು, ರೆಸ್ಪಾನ್ಸಿಬಲ್ ಸ್ಯಾನಿಟೇಷನ್ ಅಥಾರಿಟಿ (ಆರ್‌ಎಸ್‌ಎ) ಮತ್ತು ರೆಸ್ಪಾನ್ಸಿಬಲ್ ಸ್ಯಾನಿಟೇಷನ್ ಯುನಿಟ್(ಆರ್‌ಎಸ್‌ಯು)ಮೂಲಕ ಖಾಸಗಿ ಸಕ್ಕಿಂಗ್ ಮತ್ತು ಜಟ್ಟಿಂಗ್ ನೋಂದಣಿ ಮಾಡಿಕೊಂಡು 24/7 ಕಾಲ್‌ಸೆಂಟರ್‌ಗಳನ್ನು ತೆರೆಯುವಂತೆ ಸೂಕ್ತಕ್ರಮ ವಹಿಸುವುದು.

**ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.**

ವಿಷಯ-10: **ಮೈಸೂರು ಜಿಲ್ಲೆ ಕಲ್ಯಾಣ ಕರ್ನಾಟಕ ಸಾರಿಗೆ ವ್ಯಾಪ್ತಿಯ ಬಸ್‌ಸ್ಟ್ಯಾಂಡ್, ಡಿಪೋಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಇಲ್ಲಿಯವರೆಗೆ ಕನಿಷ್ಠ ವೇತನ ಪಾವತಿಯಾಗುತ್ತಿರುವ ಕುರಿತು.**

**ತೀರ್ಮಾನ:** ಮೈಸೂರು ಜಿಲ್ಲೆ ವ್ಯಾಪ್ತಿಗೆ ಸೇರಿದ ಕಲ್ಯಾಣ ಕರ್ನಾಟಕ ಸಾರಿಗೆಗೆ ಹಲವು ಬಾರಿ ಭೇಟಿ ನೀಡಿ ನಿರ್ದೇಶನವನ್ನು ನೀಡಿದ್ದರೂ ಸಹಾ, ಬಸ್‌ಸ್ಟಾಂಡ್ ಮತ್ತು ಡಿಪೋಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಪಾವತಿಸುತ್ತಿರುವುದಿಲ್ಲ. ಸಹಾಯಕ ಕಾರ್ಮಿಕ ಅಧಿಕಾರಿಗಳು ಈ ಬಗ್ಗೆ ವ್ಯಯಕ್ತಿಕವಾಗಿ ಸೂಕ್ತ ಕ್ರಮಕೈಗೊಂಡು ಆಯೋಗಕ್ಕೆ ವರದಿ ಸಲ್ಲಿಸುವುದು.

**ಕ್ರಮ: ವಿಭಾಗ ನಿಯಂತ್ರಣಾಧಿಕಾರಿಗಳು, ಸಹಾಯಕ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ.**

**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದಿನಾಂಕ:01.12.2020ರಿಂದ ಸರ್ಕಾರದ ವಿವಿಧ ಇಲಾಖೆಗಳಿಂದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಸಫಾಯಿ ಕರ್ಮಚಾರಿಗಳ ಶ್ರೇಯೋಭಿವೃದ್ಧಿಗಾಗಿ ಹೊರಡಿಸಿರುವ ಸರ್ಕಾರದ ಆದೇಶಗಳು/ಸುತ್ತೋಲೆಗಳು ಮತ್ತು ಅಧಿಸೂಚನೆಗಳ ವಿವರ**

| ಕ್ರ.ಸಂ | ಆದೇಶ ಸಂಖ್ಯೆ & ದಿನಾಂಕ | ವಿಷಯ |
|---|---|---|
| 1. | ಸಕಇ/568/ಎಸ್.ಡಿ.ಸಿ/2020,<br>ದಿನಾಂಕ:28.12.2020 | 2020-21ನೇ ಸಾಲಿಗೆ ಆಯೋಗದ ವತಿಯಿಂದ ಎಂ.ಎಸ್.ಕಾಯ್ದೆ 2013ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿ ನಿರ್ಮೂಲನೆ ಮಾಡಲು ಬಸ್ಸುಗಳ ಮೇಲೆ ಭಿತ್ತಿಚಿತ್ರಗಳನ್ನು ಅಳವಡಿಸಿ ಅರಿವು ಮೂಡಿಸುವ ಕುರಿತು |
| 2. | ಸಕಇ/139/ಎಸ್.ಡಿ.ಸಿ/2021,<br>ದಿನಾಂಕ:24.03.2021 | ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಸೆಕ್ಷನ್- 13 ಮತ್ತು 16ರ ಪ್ರಕಾರ ಪುನರ್ವಸತಿ ಕಲ್ಪಿಸಲು ಸಮಗ್ರ ಯೋಜನೆಯ ರೂಪಿಸುವ ಬಗ್ಗೆ. |
| 3. | ಸಕನಿ/ಮ್ಯಾ.ಸ್ಕ್ಯಾ.ಸಮೀಕ್ಷೆ/2021-22,<br>ದಿನಾಂಕ:30.08.2021 | ರಾಜ್ಯದ 18 ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಕಾರ್ಯಕ್ಕೆ ಜಿಲ್ಲಾ ಸಂಯೋಜಕರನ್ನು ನಿಯೋಜಿಸುವ ಕುರಿತು. |
| 4. | ಪೌನಿ:ಫವನಿ:ಸಿಸಿ/1/2020<br>(356409) ದಿನಾಂಕ:08.02.2021 | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರಸ್ತೆ ಬದಿಗಳಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಬ್ಯಾರಿಕೇಡ್‌ಗಳನ್ನು ಬಳಸುವ ಬಗ್ಗೆ. |
| 5. | ನಅಇ 79 ಜಿಇಎಲ್ 2021(ಇ)<br>ದಿನಾಂಕ:07.04.2021 | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಳಚರಂಡಿ ಸೆಪ್ಟಿಕ್‌ಟ್ಯಾಂಕ್‌ಗಳನ್ನು ಸುರಕ್ಷಿತವಾಗಿ ಸ್ವಚ್ಛಗೊಳಿಸುವ ಕುರಿತು. |
| 6. | ಕೆಪಿಆರ್‌ಸಿ/ಎಡಿಎಮ್20/ಆರ್‌ಎಮ್ ಎಸ್/05/2021, ದಿ:22.02.2021 | ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಅಗತ್ಯ ರಕ್ಷಣಾತ್ಮಕ ಸಾಮಾಗ್ರಿ ಮತ್ತು ಸುರಕ್ಷತಾ ಸಲಕರಣೆಗಳಿಲ್ಲದೇ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದಲ್ಲಿ ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತಿಗಳು ಸಂಬಂಧಪಟ್ಟ ಅಧಿಕಾರಿಗಳು/ ಗುತ್ತಿಗೆದಾರರು/ಏಜೆನ್ಸಿಗಳ ಮೇಲೆ ದಂಡ ವಿಧಿಸುವ ಕುರಿತು. |

| | | |
|---|---|---|
| 7. | ಸಕಇ 87 ಎಸ್‌ಡಿಸಿ 2021, ದಿನಾಂಕ:22.02.2021 | ರಾಜ್ಯದಲ್ಲಿರುವ ಅನೈರ್ಮಲ್ಯ ಶೌಚಾಲಯಗಳನ್ನು ನೆಲಸಮಗೊಳಿಸಿ ನೈರ್ಮಲ್ಯ ಶೌಚಾಲಯಗಳಾಗಿ ಪರಿವರ್ತಿಸುವ ಬಗ್ಗೆ ಅಧಿಸೂಚನೆ ಹೊರಡಿಸುವ ಕುರಿತು. |
| 8. | ಸಕಇ 86 ಎಸ್‌ಡಿಸಿ 2021, ದಿನಾಂಕ:25.02.2021 | ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ ಮತ್ತು ನಿಯಮಗಳು 2013ನ್ನು ಕಡ್ಡಾಯವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ. |
| 9. | ಸಕಇ 172 ಎಸ್‌ಡಿಸಿ 2021, ದಿನಾಂಕ:29.03.2021 | ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ನಿಯಮಗಳ ಪ್ರಕಾರ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ. |
| 10. | ಸಕಇ 147 ಎಸ್‌ಡಿಸಿ 2021, ದಿನಾಂಕ:15.03.2021 | ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಸೆಕ್ಷನ್ 18ರ ಪ್ರಕಾರ ಅಧಿಕಾರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವ ಬಗ್ಗೆ. |
| 11. | ಸಕಇ 123 ಎಸ್‌ಡಿಸಿ 2021, ದಿನಾಂಕ:24.06.2021 | Elimination of manual cleaning of sewers & septic tanks ಸಂಬಂಧ ರಾಜ್ಯ ಕ್ರಿಯಾ ಯೋಜನೆ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಸಲಹಾ ಸಮಿತಿ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಹಾಗೂ ಮೇಲ್ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ |
| 12. | ಸಕಇ 250 ಎಡಿಸಿ 2021, ದಿನಾಂಕ:23.11.2021 | ರಾಜ್ಯದಲ್ಲಿNSKFDC ಯೋಜನೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮವನ್ನು ಸ್ಟೇಟ್ ಚಾನಲೈಸಿಂಗ್ ಏಜೆನ್ಸಿ ಎಂದು ನೇಮಿಸುವ ಬಗ್ಗೆ. |
| 13. | ನಅಇ 144 ಜಿಇಎಲ್ 2017, ದಿನಾಂಕ:10.02.2017 | ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳನ್ನು ಜವಾಬ್ದಾರಿಯುತ ನೈರ್ಮಲ್ಯ ಪ್ರಾಧಿಕಾರ ಎಂದು ಆದೇಶ ಹೊರಡಿಸಿರುವ ಬಗ್ಗೆ. |
| 14. | 88/ಡಿಎಂಎ/15/ಎಸ್‌ಡಬ್ಲ್ಯೂಎಂ01201 3-14, ದಿನಾಂಕ:08.01.2021 | ಸ್ವಚ್ಛತಾ ಕೆಲಸಗಾರರು, ಪೌರಕಾರ್ಮಿಕರು, ಸಫಾಯಿ ಕರ್ಮಚಾರಿಗಳು, ಸುರಕ್ಷತಾ ಪರಿಕರಗಳಿಲ್ಲದೆ ಕೆಲಸ ನಿರ್ವಹಿಸುತ್ತಿದ್ದಲ್ಲಿ ಸಂಬಂಧಪಟ್ಟ ಹೊರಗುತ್ತಿಗೆ ಏಜೆನ್ಸಿಗಳಿಗೆ ದಂಡ ವಿಧಿಸುವ ಕುರಿತು |
| 15. | ಸಕಇ 19 ಎಸ್‌ಡೊಸೊ 2021, ದಿನಾಂಕ:05.02.2021 | ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಕೈಗೊಳ್ಳಲು ರಾಜ್ಯ ಮತ್ತು ಜಿಲ್ಲಾಮಟ್ಟದ ಸಮೀಕ್ಷಾ ಸಮಿತಿಯನ್ನು ರಚಿಸಲು ಸರ್ಕಾರಿ ಆದೇಶ ಹೊರಡಿಸುವ |

| | | |
|---|---|---|
| | | ಬಗ್ಗೆ |
| 16. | ಸಕಇ 144 ಎಸ್‌ಡಿಸಿ 2017, ದಿನಾಂಕ:22.04.2017 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳು/ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸ್ಥಿತಿ-ಗತಿ, ಜೀವನಶೈಲಿ, ಶಿಕ್ಷಣ ಇವುಗಳ ಬಗ್ಗೆ ಸಾಕ್ಷ್ಯ ಚಿತ್ರ ತಯಾರಿಸುವ ಬಗ್ಗೆ |
| 17. | ಸಕಇ 158 ಎಸ್‌ಡಿಸಿ 2018, ದಿನಾಂಕ:20.03.2018 | ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನಿಯೋಜನೆ ನಿಷೇಧ ಮತ್ತು ಅದರ ಪುನರ್ವಸತಿ ಕಾಯ್ದೆ 2013 ಮತ್ತು ಸಫಾಯಿ ಕರ್ಮಚಾರಿಗಳಿಗೆ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳಿಗೆ ಅರಿವು ಮೂಡಿಸುವ ಬಗ್ಗೆ ವ್ಯಾಪಕ ಪ್ರಚಾರ ಮತ್ತು ಜಾಗೃತಿ ಮೂಡಿಸುವ ಬಗ್ಗೆ |
| 18. | ಸಕಇ 228 ಎಸ್‌ಡಿಸಿ 2020, ದಿನಾಂಕ:18.08.2020 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮವು 2020-21ನೇ ಸಾಲಿಗೆ ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ |
| 19. | KPRC/AD/20RMS/09/2021-KPRC-DD2-KPRC | ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಅನೈರ್ಮಲ್ಯ ಶೌಚಾಲಯಗಳ ಸಮೀಕ್ಷೆ ನಡೆಸುವ ಕುರಿತು |
| 20. | RDP/SWSM/NBA/94/2014-15/316 | ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ವಚ್ಛತಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಹಾಗೂ ಇತರೆ ಗ್ರಾಮಪಂಚಾಯಿತಿ ಸಿಬ್ಬಂದಿಗೆ ರಕ್ಷಣೆಗೆ ಅಗತ್ಯವಿರುವ ಸೌಲಭ್ಯವನ್ನು ಒದಗಿಸುವ ಕುರಿತು |
| 21. | ಸಕಇ/232/2020-21, ದಿನಾಂಕ:10.06.2021 | ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್ ಹಾಗೂ ತೆರೆದ ಚರಂಡಿಗಳನ್ನು ಸ್ವಚ್ಛಗೊಳಸಲು ಹೋಗಿ ಮೃತಪಡುತ್ತಿರುವುದರ ಬಗ್ಗೆ |
| 22. | ಕರಾಸಕಆ/ಮ್ಯಾ.ಸ್ಕ್ಯಾ.ಪ್ರ.ಪ.ಪು.ಜಾ.ಸ/ 2021-22, ದಿನಾಂಕ:16.09.2021 | ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013 ಕಾಯ್ದೆ ಹಾಗೂ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸುವ ಕುರಿತು |

| | | |
|---|---|---|
| 23. | RDWSD/39/SBMG-P-11/OEC2020/33, ದಿನಾಂಕ:17.11.2021 | ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನಿಷೇಧ ಅವಳ ಗುಂಡಿ ಶೌಚಾಲಯ ಕುರಿತಂತೆ ಬಹುವರ್ಣದ ಪೋಸ್ಟರ್‌ನ್ನು ಮುದ್ರಿಸಿ ಎಲ್ಲಾ ಗ್ರಾಮ ಪಂಚಾಯಿತಿ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಅಳವಡಿಸುವ ಕುರಿತು |
| 24. | ಗ್ರಾಅಪಂರಾ 378 ಜಿಪಸ 2021, ದಿನಾಂಕ:07.09.201 | ರಾಜ್ಯದ ಎಲ್ಲಾ ಗ್ರಾಮಪಂಚಾಯಿತಿಗಳ ಗ್ರಾಮಗಳಲ್ಲಿ ಸೆಪ್ಟಿಕ್ ಟ್ಯಾಂಕ್/ಶೌಚಾಲಯ/ಗುಂಡಿ/ತೆರೆದ ಚರಂಡಿ/ಒಳಚರಂಡಿಗಳನ್ನು ಯಾಂತ್ರೀಕೃತ ವಿಧಾನ ಮೂಲಕ ಕಡ್ಡಾಯವಾಗಿ ಸ್ವಚ್ಛಗೊಳಸುವ ಬಗ್ಗೆ |
| 25. | KPRC-AD/20RMS/2/2020, ದಿನಾಂಕ:22.02.2021 | ಗ್ರಾಮೀಣ ಪ್ರದೇಶಗಳಲ್ಲಿ **Emergency Response Sanitation Unit (ERSU)** ಕಾರ್ಯಾಚರಣೆ ಬಗ್ಗೆ |
| 26. | ಕೆಪಿಆರ್‌ಸಿ/ಎಡಿಎಎಂ20/ಆರ್‌ಎಮ್ ಎಸ್/05/2021, ದಿನಾಂಕ:22.02.2021 | ಜಿಲ್ಲಾ/ತಾಲೂಕು/ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಅಗತ್ಯ ರಕ್ಷಣಾತ್ಮಕ ಸಾಮಾಗ್ರಿ ಮತ್ತು ಸುರಕ್ಷತಾ ಸಲಕರಣೆಗಳಲ್ಲದೇ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದಲ್ಲಿ ಜಿಲ್ಲಾ/ತಾಲೂಕು/ಗ್ರಾಮ ಪಂಚಾಯಿತಿಗಳು ಸಂಬಂಧಪಟ್ಟ ಅಧಿಕಾರಿಗಳು/ಗುತ್ತಿಗೆದಾರರು/ಏಜೆನ್ಸಿಗಳ ಮೇಲೆ ದಂಡ ವಿಧಿಸುವ ಕುರಿತು |
| 27. | 452441/ಘವನಿ/ಎಸ್‌ಡಬ್ಲ್ಯೂಎಂಆರ್/03/2021, ದಿನಾಂಕ:12.11.2021 | ರಾಜ್ಯದ 18 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ **"The Prohibition of Employment as Manual Scavenging and Their Rehabilitation"** ರೀತ್ಯಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆಯನ್ನು ಕೈಗೊಳ್ಳುವ ಬಗ್ಗೆ |
| 28. | KPRC AD/2DRMS/27/2021-22, ದಿನಾಂಕ:02.11.2021 | ರಾಜ್ಯದ 18 ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ನಡೆಸುವ ಕುರಿತು |
| 29. | KPRC ADM20DRMS/07/(PART-1),ದಿನಾಂಕ:02.11.2021 | ರಾಜ್ಯದ 18 ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಕಾರ್ಯಕ್ಕೆ ಜಿಲ್ಲಾ ನೋಡಲ್ ಅಧಿಕಾರಿ, ಮೇಲ್ವಿಚಾರಕರು ಮತ್ತು ಗಣತಿದಾರರು ಇವರುಗಳನ್ನು ನೇಮಿಸುವ ಕುರಿತು |
| 30. | ನಅಇ 148 ಎಂಎನ್‌ಜಿ 2018 (ಭಾಗ-1), ದಿನಾಂಕ:01.04.2021 | ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013 ಕಾಯ್ದೆ ಹಾಗೂ ನಿಯಮಗಳಡಿ ನೇಮಕಗೊಂಡಿರುವ ''ಇನ್ಸ್‌ಪೆಕ್ಟರ್'ಗಳ ಜವಾಬ್ದಾರಿ ಕುರಿತಾಗಿ |

| | | |
|---|---|---|
| 31. | ಸಕಇ 173 ಎಸ್‌ಡಿಸಿ 2021<br>ದಿನಾಂಕ:25.03.2021 | ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನೇಮಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013 ಕಾಯ್ದೆ ಹಾಗೂ ನಿಯಮಗಳ 2013ರ ಸೆಕ್ಷನ್ 12 ಮತ್ತು 15ರ ಪ್ರಕಾರ ಸ್ಥಳೀಯ ಪ್ರಾಧಿಕಾರಿಗಳ ವ್ಯಾಪ್ತಿಯಲ್ಲಿ 2013ಕ್ಕಿಂತ ಮೊದಲು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಮಾಡುತ್ತಿರುವುದಾಗಿ ಸಲ್ಲಿಸಿರುವ ಅರ್ಜಿಗಳನ್ನು ವಿಲೇವಾರಿ ಮಾಡಿಲ್ಲದಿರುವುದು. |
| 32. | ಸಕಇ 171 ಎಸ್‌ಡಿಸಿ 2021<br>ದಿನಾಂಕ:01.04.2021 | ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013 ಕಾಯ್ದೆ 2013ರ ಸೆಕ್ಷನ್ 33(1)ರ ಪ್ರಕಾರ ರಾಜ್ಯಾದ್ಯಂತ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್‌ನ್ನು ನಿಷೇಧಿಸಿ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ತೆರೆದ ಚರಂಡಿ/ಒಳಚರಂಡಿ/ಗಟಾರ/ಪಿಟ್‌ಗುಂಡಿ/ ಎಸ್‌ಟಿಪಿಗಳನ್ನು ಸ್ವಚ್ಛಗೊಳಸಲು ಆಧುನಿಕ ಯಂತ್ರಗಳ ಬಳಕೆ |

## ರಾಜ್ಯದ ಪೌರಕಾರ್ಮಿಕರ ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅಭಿವೃದ್ಧಿಗಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಆಯೋಗದ ಶಿಫಾರಸ್ಸುಗಳು

1. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾಗಿ ಖಾಲಿಯಿರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಹಾಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ನೇಮಕಾತಿಗೊಳಿಸುವ ಕುರಿತು.

2. ರೋಸ್ಟರ್ ಪದ್ಧತಿ ಅನುಸರಿಸದೇ ಕಸವನ್ನು ಸಾಗಿಸಲು ನೇಮಕಗೊಂಡಿರುವ ಹಾಲಿ ಆಟೋಡ್ರೈವರ್, ಲೋಡರ್ಸ್, ಕ್ಲೀನರ್ ಮತ್ತು ಒಳಚರಂಡಿ ಸ್ವಚ್ಛಗೊಳಿಸುತ್ತಿರುವ ಯುಜಿಡಿ ಕಾರ್ಮಿಕರನ್ನು ಖಾಯಂಗೊಳಿಸುವ ಕುರಿತು.

3. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಮತ್ತು ಗ್ರಾಮೀಣ ಭಾಗದಲ್ಲಿ ಶೇ.90ರಷ್ಟು ಮಹಿಳಾ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ಇವರಿಗೆ ವಿಶ್ರಾಂತಿಗೃಹ (ರೆಸ್ಟ್‌ರೂಂ)ಗಳನ್ನು 3 ತಿಂಗಳ ಕಾಲಾವಧಿಯೊಳಗಾಗಿ ನಿರ್ಮಿಸುವ ಕುರಿತು

4. ಐಪಿಡಿ ಸಾಲಪ್ಪ ನವರ ವರದಿ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಬೆಂಗಳೂರು ರವರ ಅಧ್ಯಯನ ಶಿಫಾರಸ್ಸಿನನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ನಗರ ಪ್ರದೇಶದಲ್ಲಿ 500 ಜನರಿಗೆ ಒಬ್ಬ

ಪೌರಕಾರ್ಮಿಕರಂತೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ 1000 ಜನರಿಗೆ ಒಬ್ಬ ಪೌರಕಾರ್ಮಿಕರಂತೆ ನೇಮಿಸಿಕೊಳ್ಳುವ ಕುರಿತು.

5. ಹಾಲಿ ಕಾರ್ಯನಿರ್ವಹಿಸುತ್ತಿರುವ ನೇರಪಾವತಿ ಮತ್ತು ಗುತ್ತಿಗೆ ಪೌರಕಾರ್ಮಿಕರು ಮೃತಪಟ್ಟಲ್ಲಿ ಅವರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸುವ ಕುರಿತು.

6. ಪೌರಕಾರ್ಮಿಕರ ಮಕ್ಕಳಿಗೆ 1ನೇ ತರಗತಿಯಿಂದ ಉನ್ನತ ಶಿಕ್ಷಣದವರೆಗೂ ಪ್ರತಿಷ್ಠಿತ ಶಾಲೆಗಳಲ್ಲಿ ಉಚಿತ ಶಿಕ್ಷಣವನ್ನು ಕಲ್ಪಿಸುವ ಕುರಿತು.

7. ರಾಜ್ಯದನಗರ ಸ್ಥಳೀಯ ಸಂಸ್ಥೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಹಾಗೂ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ಜಾರಿ ಮಾಡಿರುವ ಗೃಹಭಾಗ್ಯ ಯೋಜನೆಯನ್ನು ನೇರಪಾವತಿ ಮತ್ತು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ವಿಸ್ತರಿಸುವ ಕುರಿತು.

8. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಗುಣಮಟ್ಟದ ಪೌಷ್ಠಿಕ ಆಹಾರ, ಕುಡಿಯುವ ನೀರು ಒದಗಿಸಲು ರೂ.20/- ರಿಂದ ರೂ.70/-ಗಳವರೆಗೂ ಉಪಾಹಾರ ಭತ್ಯೆಯನ್ನು ಪರಿಷ್ಕರಿಸುವ ಕುರಿತು.

9. ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರು ಹಾಗೂ ಲೋಡರ್ಸ್, ಕ್ಲೀನರ್ಸ್, ಏಕರೀತಿಯ ಸಮವಸ್ತ್ರ ಹಾಗೂ ವೈಜ್ಞಾನಿಕವಾದ ಸುರಕ್ಷತಾ ಪರಿಕರಗಳನ್ನು ಒಳಗೊಂಡಂತೆ ಉತ್ತಮ ಗುಣಮಟ್ಟದ ಕಿಟ್‌ಗಳನ್ನು ವಿತರಣೆ ಮಾಡುವ ಕುರಿತು.

10. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಈಗಾಗಲೇ ಆಯವ್ಯಯದಲ್ಲಿ ಮಂಡಿಸಿ ನಿರ್ಣಯಿಸಿರುವಂತೆ ಪೌರ ಕಾರ್ಮಿಕರಲ್ಲಿ ಒಬ್ಬ ಪೌರಕಾರ್ಮಿಕರನ್ನು ನಾಮನಿರ್ದೇಶನ ಸದಸ್ಯರನ್ನಾಗಿ ನೇಮಿಸುವ ಕುರಿತು.

11. ಗುರುತಿಸಲ್ಪಟ್ಟ 5,080 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್ ಕಾಯ್ದೆ 2013ರ ಸೆಕ್ಷನ್-13 ಮತ್ತು 16ರ ಪ್ರಕಾರ ಎಲ್ಲಾ ಕುಟುಂಬಗಳಿಗೆ ವಸತಿ, ಪರ್ಯಾಯ ಉದ್ಯೋಗ ಹಾಗೂ ಅವರ ಮಕ್ಕಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಉಚಿತ ಶಿಕ್ಷಣವನ್ನು ಕಲ್ಪಿಸುವುದು.

ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ
PRINCIPAL SECRETARY TO CHIEF MINISTER

ಮುಖ್ಯ ಮಂತ್ರಿಯವರ ಸಚಿವಾಲಯ
ವಿಧಾನ ಸೌಧ, ಬೆಂಗಳೂರು - ೫೬೦ ೦೦೧
CHIEF MINISTER'S SECRETARIAT
VIDHANA SOUDHA, BANGALORE - 560 001

Ecm/4355677/2022

ಕ್ರಮಾಂಕ : No.: PSCM/T/3116/2022

ದಿನಾಂಕ / DATED: 4/7/2022

ಕರ್ನಾಟಕ ರಾಜ್ಯ ನಗರಪಾಲಿಕೆ, ಪುರಸಭೆ ಪೌರಕಾರ್ಮಿಕರ ಮಹಾಸಂಘ ಹಾಗೂ ರಾಜ್ಯದ ವಿವಿಧ ಸಫಾಯಿ ಕರ್ಮಚಾರಿ ಸಂಘಟನೆಗಳ ವಿವಿಧ ಬೇಡಿಕೆಗಳ ಬಗ್ಗೆ ಚರ್ಚಿಸಲು ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 01-07-2022ರಂದು ಸಂಜೆ 6.30ಕ್ಕೆ ಗೃಹ ಕಚೇರಿ ಪ್ರಕರಣದಲ್ಲಿ ನಡೆದ ಸಭೆಯ ನಡಾವಳಿಗಳು:

(ಪರಿಷ್ಕೃತ)

ಸಭೆಯಲ್ಲಿ ಹಾಜರಿದ್ದವರು:-

ಶ್ರೀ/ಶ್ರೀಮತಿ

1. ಎಂ.ಟಿ.ಬಿ. ನಾಗರಾಜು, ಮಾನ್ಯ ಪೌರಾಡಳಿತ ಸಚಿವರು, ಬೆಂಗಳೂರು
2. ಬಿ.ಎ.ಬಸವರಾಜ, ನಗರಾಭಿವೃದ್ಧಿ ಸಚಿವರು, ಬೆಂಗಳೂರು
3. ಎಂ.ಶಿವಣ್ಣ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು
4. ಹೆಚ್.ಹನುಮಂತಪ್ಪ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಬೆಂಗಳೂರು
5. ನಾರಾಯಣ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ನಗರಪಾಲಿಕೆ, ಪುರಸಭೆ, ನಗರಸಭೆ, ಪೌರಕಾರ್ಮಿಕರ ಮಹಾಸಂಘ (ರಿ), ಬೆಂಗಳೂರು
6. ಸರ್ಕಾರದ ಕಾರ್ಯದರ್ಶಿ, (ವೆಚ್ಚ), ಆರ್ಥಿಕ ಇಲಾಖೆ
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹಾಗೂ ಆಡಳಿತಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ
8. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು
9. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
10. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ
11. ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ
12. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
13. ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ
14. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು

ಕ್ರಮಾಂಕ : No.: PSCM/T/3116/2022

ದಿನಾಂಕ / DATED: 4/7/2022

5.ಇದರೊಂದಿಗೆ ಪೌರಕಾರ್ಮಿಕರಿಗೆ ಪ್ರತ್ಯೇಕವಾಗಿ ಗೃಹ ಭಾಗ್ಯ ಯೋಜನೆ ಜಾರಿಗೊಳಿಸಲು ಹೊಸದಾಗಿ ಮಂಜೂರಾತಿ ನೀಡಲಾಗುವುದು.

6.ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ರೈತ ವಿದ್ಯಾನಿಧಿ ಮಾದರಿಯಲ್ಲಿ ವಿದ್ಯಾರ್ಥಿ ವೇತನ ನೀಡಲಾಗುವುದು.

7.ಪೌರಕಾರ್ಮಿಕ ಮಹಿಳೆಯರಿಗೆ ಸರ್ಕಾರಿ ನೌಕರರಿಗೆ ನೀಡುವಂತೆ ಹೆರಿಗೆ ಸೌಲಭ್ಯಗಳನ್ನು ವಿಸ್ತರಿಸಲಾಗುವುದು.

8.ಎಲ್ಲ ನಗರ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ, ಶೌಚಾಲಯ ಸೌಲಭ್ಯ ಒದಗಿಸಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ವಾರ್ಡ್‌ನಲ್ಲಿ ಒಂದು ಅಥವಾ ಎರಡು ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಲು ಸೂಚಿಸಿದರು.

9. ಬಿ.ಬಿ.ಎಂ.ಪಿ. ಹೊರತಾಗಿ ರಾಜ್ಯದ ಇತರ ಕಡೆ ಚಾಲ್ತಿಯಲ್ಲಿರುವ ಗುತ್ತಿಗೆ ಪದ್ಧತಿಯನ್ನು ಹಂತ ಹಂತವಾಗಿ ಕಸದ ನಿರ್ವಹಣೆಗೆ ತೊಂದರೆಯಾಗದಂತೆ ನೇರ ಪಾವತಿಯಡಿಯಲ್ಲಿ ತರಲಾಗುವುದು.

10.ಮಾನ್ಯ ಮುಖ್ಯಮಂತ್ರಿಯವರು, ಇಂದಿನ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನಗಳ ಕುರಿತು ಪೌರಕಾರ್ಮಿಕರ ಪ್ರತಿನಿಧಿಗಳಿಗೆ ಮಾಹಿತಿ ನೀಡುವಂತೆ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚಿಸಿದರು.

(ಎನ್. ಮಂಜುನಾಥ ಪ್ರಸಾದ್) 4/7/2022
ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: 04.07.2022

ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ
PRINCIPAL SECRETARY TO CHIEF MINISTER

ಮುಖ್ಯ ಮಂತ್ರಿಯವರ ಸಚಿವಾಲಯ
ವಿಧಾನ ಸೌಧ, ಬೆಂಗಳೂರು – ೫೬೦ ೦೦೧
CHIEF MINISTER'S SECRETARIAT
VIDHANA SOUDHA, BANGALORE - 560 001

ಕ್ರಮಾಂಕ : No.: PSCM|T|311.6|2022

ದಿನಾಂಕ / DATED: 4|7|2022

ಸದರಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ವಿವರ:

1. ರಾಜ್ಯದಲ್ಲಿ ಬಿ.ಬಿ.ಎಂ.ಪಿ. ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ ವ್ಯವಸ್ಥೆಯಡಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಕಾಯಂಗೊಳಿಸಲು ಸರ್ಕಾರದ ತಾತ್ವಿಕ ಒಪ್ಪಿಗೆ ಇದೆ. ಇದನ್ನು ಕಾನೂನು ಬದ್ಧವಾಗಿ ಜಾರಿಗೊಳಿಸಲು ಸರ್ಕಾರದ ಹಿರಿಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಕಾನೂನು ಇಲಾಖೆ ಹಾಗೂ ಪೌರ ಕಾರ್ಮಿಕರ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು. ಈ ಸಮಿತಿಯು ಮೂರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಿದರು ಹಾಗೂ ವರದಿಯ ಅನುಸಾರ ನೇರ ನೇಮಕಾತಿ ಪೌರಕಾರ್ಮಿಕರನ್ನು ಖಾಯಂ ಮಾಡುವ ಪ್ರಕ್ರಿಯೆಯನ್ನು 3 ತಿಂಗಳೊಳಗೆ ಪ್ರಾರಂಭಿಸಲು ಸೂಚಿಸಿದರು•ನೇಮಕಾತಿ ನಿಯಮಗಳಲ್ಲಿ ಮಾರ್ಪಾಡು ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ಹಾಗೂ ಉಭಯ ಸದನಗಳ ಅನುಮೋದನೆಯನ್ನು ಮೂರು ತಿಂಗಳಲ್ಲಿ ಪಡೆಯುವುದು.

2. ನೇರ ನೇಮಕಾತಿ ಪೌರ ಕಾರ್ಮಿಕರ ಸೇವೆಯನ್ನು ಕಾಯಂ ಮಾಡುವವರೆಗೂ ನೇರ ಪಾವತಿ ಪೌರ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತೆ ಕಾರ್ಮಿಕ ಮುಖಂಡರು ಬೇಡಿಕೆಯಿಟ್ಟರು. ಈ ಕುರಿತೂ ಸಹ ಸದರಿ ಸಮಿತಿಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಸಲಹೆ ನೀಡುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

3. ಪೌರಕಾರ್ಮಿಕರಿಗೆ ಸಾಮಾಜಿಕವಾಗಿ ಗೌರವ, ಸೌಲಭ್ಯ ಹಾಗೂ ಸುರಕ್ಷತೆ ಅಗತ್ಯ ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಸರ್ಕಾರವು ಪೌರಕಾರ್ಮಿಕರ ಸಮಸ್ಯೆಗಳಿಗೆ ಮಾನವೀಯತೆಯಿಂದ ಸ್ಪಂದಿಸಲಿದೆ. ಈ ಉದ್ದೇಶದಿಂದಲೇ ಆಯವ್ಯಯದಲ್ಲಿ ಪೌರಕಾರ್ಮಿಕರಿಗೆ ಮಾಸಿಕ 2,000 ರೂ.ಗಳ ಸಂಕಷ್ಟ ಭತ್ಯೆ ಘೋಷಿಸಿದ್ದು, ಇಂದಿನ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

4.ಇದರೊಂದಿಗೆ ಪೌರಕಾರ್ಮಿಕರ ನೇಮಕಾತಿ ಸರಳೀಕರಣಗೊಳಿಸಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಲಾಗುವುದು ಹಾಗೂ ನೇಮಕಾತಿ ನೀತಿಯನ್ನೂ ಜಾರಿಗೆ ತರಲಾಗುವುದು. ಈ ಸಂದರ್ಭದಲ್ಲಿ ಐ.ಪಿ.ಡಿ. ಸಾಲಪ್ಪ ವರದಿ, ಚಂದ್ರಶೇಖರ್ ಸಮಿತಿ ವರದಿ ಹಾಗೂ ರಾಷ್ಟ್ರೀಯ ಕಾನೂನು ಶಾಲೆಯ ವರದಿಗಳನ್ನು ಪರಿಗಣಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಜೊತೆಗೆ ಬೇರೆ ರಾಜ್ಯಗಳಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳ ಮಾಹಿತಿಯನ್ನೂ ಪಡೆಯಲು ಸೂಚಿಸಿದರು. ಕಾನೂನಾತ್ಮಕ ರಕ್ಷಣೆ ನೀಡಲು ಮುಂದಿನ ಅಧಿವೇಶನದಲ್ಲಿ ವಿಶೇಷ ಕಾಯ್ದೆಯನ್ನು ಮಂಡಿಸಲಾಗುವುದು.

2

**ಕರ್ನಾಟಕ ರಾಜ್ಯಾದ್ಯಂತ ಪೌರಕಾರ್ಮಿಕರ /ಸ್ವಚ್ಛತಾ ಕೆಲಸಗಾರರು ಏಕರೂಪ ಸುರಕ್ಷತಾ, ಪರಿಕರಗಳನ್ನು ಉಪಯೋಗಿಸುವ ಸಂಬಂಧ ಸಂಬಂಧ ಒಡಿಸ್ಸಾ ರಾಜ್ಯಕ್ಕೆ ದಿನಾಂಕ:06.04.2022 ರಿಂದ 08.04.2022ರವರೆಗೆ ಭೇಟಿ ನೀಡಿ ನಡೆಸಿದ ಅಧ್ಯಯನದ ವರದಿ.**

**ಶಿಫಾರಸ್ಸುಗಳು:**

1. ಒಡಿಸ್ಸಾ ಜಿಲ್ಲೆಯಲ್ಲಿ ''ಗರೀಮಾ'' ಯೋಜನೆಗೆ ಪ್ರತ್ಯೇಕವಾದ ಲೆಕ್ಕಶೀರ್ಷಿಕೆಯನ್ನು ಅಳವಡಿಸಿಕೊಂಡಿರುವ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಸಹ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮತ್ತು ಅವರ ಕುಟುಂಬಗಳನ್ನು ಅಭಿವೃದ್ಧಿಪಡಿಸಬಹುದಾಗಿರುತ್ತದೆ. ಪ್ರತ್ಯೇಕವಾದ **ಲೆಕ್ಕಶೀರ್ಷಿಕೆ**ಯನ್ನು ಸೃಜನೆ ಮಾಡಿ **ಅನುದಾನ**ವನ್ನು ಮೀಸಲಿಡುವುದು. **ಆರ್ಥಿಕ ವರ್ಷದ ಅಂತ್ಯಕ್ಕೆ ವೆಚ್ಚವಾಗದೇ ಉಳಿದಲ್ಲಿ ವ್ಯಪಗತವಾಗದೇ ಮುಂದಿನ ಆರ್ಥಿಕ ವರ್ಷಕ್ಕೆ ಖರ್ಚು ಮಾಡಲು ಅವಕಾಶ ಕಲ್ಪಿಸುವುದು** ಅವಶ್ಯವಿರುತ್ತದೆ.

2. ಒಡಿಸ್ಸಾ ರಾಜ್ಯದಲ್ಲಿ ಸ್ಯಾನಿಟರಿ ಮತ್ತು ಪೌರಕಾರ್ಮಿಕರಿಗೆ ವಸ್ತ್ರಗಳನ್ನು ಸ್ವಚ್ಛಗೊಳಿಸಲು ಶೌಚಾಲಯದ ವ್ಯವಸ್ಥೆ, ಊಟ ಮಾಡಲು ಕುಳಿತುಕೊಳ್ಳಲು ಸ್ಥಳ, ಕುಡಿಯುವ ನೀರಿನ ವ್ಯವಸ್ಥೆಯನ್ನು ಒಳಗೊಂಡಂತೆ ಪ್ರತ್ಯೇಕವಾಗಿ ಗರೀಮಾ ಗೃಹ ಎಂಬ ಹವಾನಿಯಂತ್ರಿತ ವಿಶ್ರಾಂತಿಗೃಹಗಳನ್ನು ಪ್ರಾರಂಭಿಸಿರುತ್ತಾರೆ. ಅದೇ ಮಾದರಿಯಲ್ಲಿ **ನಮ್ಮ ರಾಜ್ಯದಲ್ಲೂ ಸಹ ಕಾರ್ಯನಿರ್ವಹಿಸುತ್ತಿರುವಂತಹ ಸ್ಯಾನಿಟರಿ ವರ್ಕರ್ಸ್/ಸಫಾಯಿ ಕರ್ಮಚಾರಿಗಳಿಗೆ ವಾರ್ಡ್‌ಗೆ ಒಂದರಂತೆ ಸುಸಜ್ಜಿತ ವಿಶ್ರಾಂತಿಗೃಹಗಳನ್ನು ನಿರ್ಮಿಸುವುದು''** ಅತ್ಯವಶ್ಯಕವಾಗಿರುತ್ತದೆ.

3. ಒಡಿಸ್ಸಾ ಮಾದರಿಯಲ್ಲಿ **ಸ್ವಚ್ಛತಾ ಕಾರ್ಮಿಕರ ಹಾಗೂ ಯಂತ್ರಗಳ ಡಾಟಾಬೇಸ್‌ನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುವುದು** ಅವಶ್ಯಕವಾಗಿರುತ್ತದೆ.

4. ಸ್ಯಾನಿಟರಿ ಕೆಲಸ ಮತ್ತು ಯಂತ್ರೋಪಕರಣಗಳ ನಿರ್ವಹಣೆಯನ್ನು ಒಡಿಸ್ಸಾ ವಾಟರ್ ಅಕಾಡಮಿಯಿಂದ ತರಬೇತಿ ನೀಡುತ್ತಿರುವ ಮಾದರಿಯಲ್ಲಿಯೇ ರಾಜ್ಯದಲ್ಲಿ **ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಯಾನಿಟರಿ ವರ್ಕರ್‌ಗಳಿಗೆ ಕಡ್ಡಾಯವಾಗಿ ತರಬೇತಿ ನೀಡಲು ಪ್ರತಿ ವಿಭಾಗೀಯ ಮಟ್ಟದಲ್ಲಿ ತರಬೇತಿ ಕೇಂದ್ರವನ್ನು ಪ್ರಾರಂಭಿಸುವುದು**.

5. ಒಡಿಸ್ಸಾ ರಾಜ್ಯದಲ್ಲಿ ತೃತೀಯ ಲಿಂಗಿಗಳಿಗೆ ಎಸ್‌ಟಿಪಿ ಟ್ಯಾಂಕ್‌ಗಳ ನಿರ್ವಹಣೆಗಾಗಿ ಪ್ರತ್ಯೇಕವಾದ ಸಂಘಗಳನ್ನು ರಚಿಸಿ ಎಸ್‌ಟಿಪಿ ಟ್ಯಾಂಕ್‌ಗಳ ನಿರ್ವಹಣೆಯಿಂದ ಬರುವ ಆದಾಯದಿಂದ 10 ಕುಟುಂಬಗಳ ನಿರ್ವಹಣೆಗೆ ಸಹಾಯಕಾರಿಯಾಗಿರುತ್ತದೆ. ನಮ್ಮ ರಾಜ್ಯದ **ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ**

ಪ್ರತ್ಯೇಕವಾದ ಸಂಘಗಳನ್ನು ರಚಿಸಿ ಎಸ್.ಟಿ.ಪಿ ಟ್ಯಾಂಕ್‌ಗಳ ನಿರ್ವಹಣೆಯನ್ನು ನೀಡಿದ್ದಲ್ಲಿ ಪುನರ್ವಸತಿ ಕಲ್ಪಿಸಲು ಸಾಧ್ಯವಾಗುತ್ತದೆ.

೬. Survey of sanitation workers ಇವರನ್ನು **Skilled labours** ಎಂದು ಪರಿಗಣಿಸಿ ಕನಿಷ್ಠ ವೇತನ ಕಾಯ್ದೆಗೆ ಒಳಪಡಿಸುವುದು. Risk allowance/hardship allowance ನೀಡುವುದು ಮತ್ತು ಆರೋಗ್ಯ ವಿಮೆಯ ಸೌಲಭ್ಯವನ್ನು ಒದಗಿಸುವುದು.



ದಿನಾಂಕ: 07.04.2022ರಂದು ಒಡಿಸ್ಸಾ ರಾಜ್ಯದ ಭುವನೇಶ್ವರ ಸಚಿವಾಲಯ ಕಛೇರಿಯಲ್ಲಿ ಗರೀಮಾ ಯೋಜನೆಯ ಬಗ್ಗೆ ನಡೆದ ಸಭೆ.





**ಒಡಿಸ್ಸಾ ವಾಟರ್ ಅಕಾಡೆಮಿಯಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಸುರಕ್ಷತಾ ಪರಿಕರಗಳು**



**ಒಡಿಸ್ಸಾ ವಾಟರ್ ಅಕಾಡೆಮಿಯಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಉಪಯೋಗಿಸುವ ಸುರಕ್ಷತಾ ಪರಿಕರಗಳು**



**WATCO ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಮವಸ್ತ್ರ ಮತ್ತು ಯಂತ್ರೋಪಕರಣ**



ಒಡಿಸ್ಸಾ ನಗರದಲ್ಲಿ ಸ್ಯಾನಿಟರಿ ವರ್ಕರ್ಸ್‌ಗಾಗಿ ನಿರ್ಮಾಣ ಮಾಡಿರುವ ಹವಾನಿಯಂತ್ರಿತ ವಿಶ್ರಾಂತಿಗೃಹದಲ್ಲಿ ಒದಗಿಸಿರುವ ಸ್ನಾನಗೃಹ ಮತ್ತು ಲಾಕರ್‌ಗಳ ವೀಕ್ಷಣೆ.



**ಕಟಕ್ ನಗರದಲ್ಲಿ ಮಂಗಳಮುಖಿಯ ಸಂಘದಿಂದ ನಿರ್ವಹಿಸಲ್ಪಡುತ್ತಿರುವ ಎಸ್‌ಟಿಪಿ ಪ್ಲಾಂಟ್**



ದಿನಾಂಕ:07.04.2022ರಂದು ಒಡಿಸ್ಸಾ ರಾಜ್ಯದ ಭುವನೇಶ್ವರದ ಸಚಿವಾಲಯದ ಜಲಭವನ'ಕ್ಕೆ ಭೇಟಿ ನೀಡಿದ ಸಮಿತಿಯ ಸದಸ್ಯರು.

## ಗುಜರಾತ್ ರಾಜ್ಯದ ಅಧ್ಯಯನ ಪ್ರವಾಸದ ಶಿಫಾರಸ್ಸುಗಳು:

1. ಅಹಮದಾಬಾದ್ ನಗರದಲ್ಲಿ ಸಫಾಯಿ ಕರ್ಮಚಾರಿಗಳು ಅನಾರೋಗ್ಯಕ್ಕೆ ತುತ್ತಾದಾಗ ಅಥವಾ ಕೆಲಸ ಮಾಡಲು ಇಚ್ಚಿಸದಿದ್ದಲ್ಲಿ, ಅವರ ಕುಟುಂಬದ ಸದಸ್ಯರಿಗೆ ಅದೇ ಕೆಲಸವನ್ನು ಮುಂದುವರೆಸಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಈ ಪದ್ಧತಿಯನ್ನು ಪರಿಗಣಿಸಬೇಕಾಗಿರುತ್ತದೆ.
2. ಅಹಮದಾಬಾದ್‌ನ ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಫಾಯಿ ಕರ್ಮಚಾರಿಗಳು/ ಸ್ವಚ್ಛತಾ ಕಾರ್ಮಿಕರನ್ನು ಖಾಯಂಗೊಳಿಸಿರುತ್ತಾರೆ. ಹಾಗೂ ಖಾಯಂ ನೌಕರರಿಗೆ ಆರೋಗ್ಯ, ವಸತಿ ಮತ್ತು ಇನ್ನಿತರ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸಲು ಶಿಫಾರಸ್ಸು ಮಾಡಲಾಗಿದೆ.

**"ಪಿರಾನಾ ಡಂಪಿಂಗ್ ಯಾರ್ಡ್"**

- ಪಾರಂಪರಿಕ ತ್ಯಾಜ್ಯವನ್ನು ಚಾಲಿತ ಸ್ಕ್ರೀನಿಂಗ್ ಯಂತ್ರಗಳ (14 ಮತ್ತು 36 ಎಂಎಂ)ಮೂಲಕ ಬಯೋಮೈನಿಂಗ್ ಮಾಡಿ ಮರುಬಳಕೆ ನಿಷ್ಕ್ರಿಯ ಬಯೋಸಾಯಿಲ್ ಹಾಗೂ ಆರ್‌ಡಿಎಫ್ ರೀತಿ ಬೇರ್ಪಡಿಸಲಾಗುವುದು.
- ಪಾರಂಪರಿಕ ತ್ಯಾಜ್ಯವನ್ನು ನಿರ್ವಹಣೆ ಮಾಡಲು ಪ್ರತಿ ಟನ್‌ಗೆ ರೂ.150/-ಗಳನ್ನು ವೆಚ್ಚ ಮಾಡಲಾಗುತ್ತಿದೆ.
- ನಿಷ್ಕ್ರೀಯ ತ್ಯಾಜ್ಯವನ್ನು ಸ್ಯಾನಿಟರಿ ಲ್ಯಾಂಡ್‌ಫೀಲ್‌ಗೆ ವರ್ಗಾಹಿಸಲಾಗುವುದು ಹಾಗೂ ನಿಷ್ಕ್ರಿಯ ಬಯೋ ಸಾಯಿಲ್‌ನ್ನು ಹಳ್ಳ ಹಾಗೂ ತಗ್ಗು ರಸ್ತೆಗಳಲ್ಲಿ ಬಳಸಲಾಗುತ್ತದೆ.
- ಆರ್‌ಡಿಎಫ್‌ನ್ನು ವಿದ್ಯುತ್ ಉತ್ಪಾದನೆಗಾಗಿ ವೇಸ್ಟ್ ಟು ಎನರ್ಜಿ ಘಟಕಕ್ಕೆ ರವಾನಿಸಲಾಗುತ್ತಿರುತ್ತದೆ.
- ಅದರಂತೆ ವಿಂಗಡಿಸಿದ ವಿವಿಧ ವಸ್ತುವನ್ನು ಎಲ್ಲಾ ನಗರಗಳಲ್ಲಿ ಮರುಬಳಸಲು ಅಗತ್ಯ ಕ್ರಮವಹಿಸಲು ಶಿಫಾರಸ್ಸು ಮಾಡಲಾಗುತ್ತದೆ.

3. **ನೆಪ್ರ ಕಂಪನಿ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್** :

- ಮೆಟಿರಿಯಲ್ ರಿಕವರಿ ಫೆಸಿಲಿಟಿ(ಎಂಆರ್‌ಎಫ್)
- ಅಹಮದಾಬಾದ್ ಮಹಾನಗರ ಪಾಲಿಕೆಯು ಪಿಪಿಪಿ ಮಾದರಿಯಲ್ಲಿ ನೆಫ್ರಾ ಸಂಸ್ಥೆಯೊಂದಿಗೆ ಒಣತ್ಯಾಜ್ಯವನ್ನು ವಿಂಗಡಣೆ ಮಾಡಲು ಭಾರತ ದೇಶದಲ್ಲಿಯೇ ಮೊಟ್ಟ
- ಮೊದಲ ಸ್ವಯಂಚಾಲಿತ ಯಂತ್ರೋಪಕರಣಗಳ ಮೆಟೀರಿಯಲ್ ರಿಕವರಿ ಫೆಸಿಲಿಟಿ ಘಟಕವಾಗಿರುತ್ತದೆ, ಘಟಕ ನಿರ್ವಹಣೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗಿರುತ್ತದೆ.
- ಅಹಮದಾಬಾದ್ ನಗರದಲ್ಲಿ ಈ ಸಂಸ್ಥೆಯಲ್ಲಿ ರ್‍ಯಾಕ್‌ಪಿಕ್ಕರ್ಸ್ (ಚಿಂದಿ ಆಯುವವರು) ರವರಿಗೆ ಒಣತ್ಯಾಜ್ಯಕ್ಕೆ ಖರೀದಿಗೆ ರೂ.30/-ಪ್ರತಿ ಕೆ.ಜಿಯಂತೆ ಪಾವತಿಸಲಾಗುತ್ತದೆ. ಇದರಿಂದ ರ್‍ಯಾಕ್ ಪಿಕ್ಕರ್ಸ್ (ಚಿಂದಿ ಆಯುವವರು) ಆರ್ಥಿಕ ಸಾಮರ್ಥ್ಯ ಹೆಚ್ಚಿಸುವ ಉದ್ದೇಶ ಹೊಂದಿರುತ್ತದೆ.
- ಅಹಮದಾಬಾದ್ ನಗರದಲ್ಲಿ ಅಳವಡಿಸಿಕೊಂಡಿರುವ ಈ ಮಾದರಿ (ಎಂಆರ್‌ಎಫ್ ಯೂನಿಟ್) ರಾಜ್ಯದಲ್ಲೂ ಎಲ್ಲಾ ನಗರಗಳಲ್ಲೂ ಅಳವಡಿಸಲು ಸೂಕ್ತವಿರುತ್ತದೆ.

4. ಅಹಮದಾಬಾದ್ ನಗರದಲ್ಲಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ನಾಮದ ಸಂದರ್ಭದಲ್ಲಿ ಲಭ್ಯವಾಗುವ ಕಚ್ಚಾವಸ್ತುಗಳನ್ನು ಕ್ರಷ್ ಮಾಡಿ ಪ್ರತ್ಯೇಕಿಸಲಾಗುತ್ತದೆ.

ಈ ರೀತಿ ಪ್ರತ್ಯೇಕಿಸಿದ ಕಚ್ಚಾವಸ್ತುಗಳಲ್ಲಿ ಬೆಂಚ್ ಕಲ್ಲುಗಳು, ಕಾಂಪೌಂಡ್ ವಾಲ್‌ನಂತಹ ಸಿಮೆಂಟ್ ಉಪಕರಣಗಳನ್ನು ಮೆಟ್ರೋ ಹಾಗೂ ರಸ್ತೆಗಳಲ್ಲಿ ಅಳವಡಿಸಿಕೊಳ್ಳಲು ಮಾರಾಟ ಮಾಡಿ ಬಳಸುತ್ತಿರುವುದು ಉತ್ತಮವಾದ ಕಾರ್ಯವಾಗಿದ್ದು, ಈ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದಾಗಿದ್ದು. ಇದು ರಾಜ್ಯದ ಬೆಳವಣಿಗೆಯನ್ನು ಕಂಡಿರುತ್ತದೆ.



**ಗುಜರಾತ್ ರಾಜ್ಯದ ಸಫಾಯಿ ಕರ್ಮಚಾರಿ ಮುಖಂಡರುಗಳ ಜೊತೆ ಸಭೆ.**



## ಗುಜರಾತ್ ರಾಜ್ಯದ ಡಂಪಿಂಗ್‌ಯಾರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಒದಗಿಸಲಾಗಿರುವ ಪರಿಕರಗಳು ಮತ್ತು ಸುರಕ್ಷತೆಯ ಕುರಿತು ಸಮಾಲೋಚನೆ.

## ಸಿಂಗಪೂರ್ ಅಧ್ಯಯನ ವರದಿ ಮತ್ತು ಶಿಫಾರಸ್ಸುಗಳು

**ಅಧ್ಯಯನ ತಂಡವು 4 ದಿನಗಳ ಪ್ರವಾಸದ ಸಂದರ್ಭದಲ್ಲಿ ಮೇಲ್ಕಂಡ ಅಂಶಗಳನ್ನು ಅಧ್ಯಯನ ನಡೆಸಿ ಸಿಂಗಪುರ ದೇಶದಲ್ಲಿ ಅನುಷ್ಠಾನಗೊಳಸುತ್ತಿರುವ (Best Practices) ರಾಜ್ಯದಲ್ಲೂ ಸಹ ಅಳವಡಿಸಿಕೊಳ್ಳಲು ಈ ಕೆಳಕಂಡಂತೆ ಶಿಫಾರಸ್ಸು ಮಾಡಿದೆ.**

1. ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಹಾಕುವಂತಹ ವ್ಯಕ್ತಿಗಳಿಗೆ ಸಿಂಗಪೂರ ಮಾದರಿಯಲ್ಲಿಯೇ ಒಂದು ದಿನ ಸ್ವಚ್ಛತಾ ಕಾರ್ಯಕ್ಕೆ ನೇಮಿಸುವುದು ಮತ್ತು ದಂಡವನ್ನು ವಿಧಿಸಿ, ಸರ್ಕಾರದಿಂದ ಆದೇಶ ಹೊರಡಿಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು.
2. ಕಾರ್ಮಿಕರು ಪ್ರತಿದಿನ ಬಯೋಮೆಟ್ರಿಕ್ ಹಾಜರಾತಿ ಪಡೆಯುವ ಮಸ್ಟ್ರಿಂಗ್ ಪಾಯಿಂಟ್‌ಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸುರಕ್ಷತಾ ಪರಿಕರಗಳು ಖಾಲಿ ಆದ ತಕ್ಷಣವೇ ಸುರಕ್ಷತಾ ಪರಿಕರಗಳನ್ನು ಒದಗಿಸಬೇಕು ಹಾಗೂ ಪರಿಕರಗಳು ಹಾಳಾದ ತಕ್ಷಣವೇ ಅವನ್ನು ಹಿಂಪಡೆದು ಹೊಸ ಸುರಕ್ಷತಾ ಪರಿಕರಗಳನ್ನು ತಕ್ಷಣವೇ ನೀಡುವುದು ಮತ್ತುಸ್ವಚ್ಛತಾ ಕಾರ್ಮಿಕರಿಗೆ ಅಗತ್ಯ ನವೀನ ಪರಿಕರಗಳನ್ನು ಹೊರದೇಶಗಳಿಂದ ಆಮದು ಮಾಡಿಕೊಂಡು ವಿತರಿಸುವುದು.
3. ಜಿಪಿಎಸ್ ಪದ್ಧತಿಯನ್ನು ಅಳವಡಿಸಿ, ಸಿಸಿ ಕ್ಯಾಮರಾಗಳ ಮೂಲಕ ಸುರಕ್ಷತಾ ಪರಿಕರಗಳನ್ನು ತೊಡದೇ ಕಾರ್ಯನಿರ್ವಹಿಸುವ ಕಾರ್ಮಿಕರ ಮಾಹಿತಿಯನ್ನು ಸೆಲ್ (ಕೇಂದ್ರ)ಗಳಲ್ಲಿ ಪಡೆದು ಸಿಂಗಪೂರ ಮಾದರಿಯಲ್ಲಿಯೇ ದಂಡ ವಿಧಿಸುವುದರ ಜೊತೆಗೆ, ಕಟ್ಟುನಿಟ್ಟಿನ ಕ್ರಮವನ್ನು ಜರುಗಿಸಬೇಕು ಹಾಗೂ ಇದಕ್ಕೆ ಕಾರಣರಾಗುವ ಸಂಬಂಧಪಟ್ಟ ಅಧಿಕಾರಿಗಳು/ಗುತ್ತಿಗೆದಾರರಿಗೆ ಕಾರ್ಮಿಕರಿಗೆ ವಿಧಿಸುವ ದಂಡಕ್ಕಿಂತ 3ಪಟ್ಟು ಹೆಚ್ಚು ದಂಡ ವಿಧಿಸುವುದು ಹಾಗೂ 10 ಬಾರಿ ಕಾಲಾವಕಾಶ ನೀಡಿ, ಮರುಕಳಿಸಿದರೆ ಗುತ್ತಿಗೆದಾರರ ಪರವಾನಗಿಯನ್ನು ರದ್ದುಗೊಳಸುವುದು.
4. ಮಾರುಕಟ್ಟೆ, ಇತರೆ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ಅತ್ಯಾಧುನಿಕ ಕ್ರಷರ್‌ಗಳ ಮೂಲಕ ಕರಗಿಸಿ (ಮೆಲ್ಟ್) ಮಾನವ ಶಕ್ತಿಯನ್ನು ಬಳಸದೇ, ಯಂತ್ರಗಳ ಮುಖಾಂತರವೇ ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಕಳುಹಿಸಬೇಕು.
5. ಮಹಾನಗರ ಪಾಲಿಕೆ ಹಾಗೂ ದೊಡ್ಡ ನಗರಸಭೆಗಳ ಮುಖ್ಯರಸ್ತೆಗಳನ್ನು ಆಧುನಿಕ ಸ್ವಚ್ಛತಾ ಕಸ ಗುಡಿಸುವ ವಾಹನದ ಮೂಲಕ ರಾತ್ರಿ ವೇಳೆಯಲ್ಲಿ ಸ್ವಚ್ಛಗೊಳಸಲು ಹೆಚ್ಚು ವಾಹನಗಳನ್ನು ಖರೀದಿಸುವುದು.
6. ಸ್ವಚ್ಛತಾ ಕಾರ್ಮಿಕರಿಗೆ ಕಸದ ಪೊರಕೆ ಹಾಗೂ ಇನ್ನಿತರ ಸುರಕ್ಷತಾ ಪರಿಕರಗಳನ್ನು ಇಡುವ ಮಾದರಿಯಲ್ಲಿ ಎಲೆಕ್ಟ್ರಿಕ್ ಹಾಗೂ ಚಲಿಸುವ ಸೈಕಲ್‌ಗಳ ವಾಹನಗಳನ್ನು ಒದಗಿಸುವುದು.

7. ಸರ್ಕಾರದಿಂದ ಸಕ್ಕಿಂಗ್, ಜಟ್ಟಿಂಗ್, ಡೀಸಾಲ್ಟಿಂಗ್, ರಾಡರಿಂಗ್ ವಾಹನಗಳನ್ನು ಖರೀದಿಸಿ, ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ವಿತರಿಸಿ ಅವರಿಗೆ ಪರ್ಯಾಯ ಉದ್ಯೋಗವನ್ನು ಕಲ್ಪಿಸಿ, ಸಂಪೂರ್ಣ ನಿಯಂತ್ರಣವನ್ನು ಸರ್ಕಾರವೇ ನಿರ್ವಹಿಸಬೇಕು.
8. ಸ್ವಚ್ಛತಾ ಕಾರ್ಮಿಕರ ಆರೋಗ್ಯಕ್ಕೆ ಹೆಲ್ತ್‌ಕಾರ್ಡ್‌ನ್ನು ನೀಡಿ, ಕಡ್ಡಾಯವಾಗಿ 3 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆಯನ್ನು ಖುದ್ದಾಗಿ ಆಸ್ಪತ್ರೆಗೆ ಹೋಗಿ ತಪಾಸಣೆ ಮಾಡಿಸಿಕೊಳ್ಳುವಂತೆ, ಆರೋಗ್ಯದಲ್ಲಿ ಏರುಪೇರು ಕಂಡಬಂದಲ್ಲಿ ನೇರವಾಗಿ ಆಸ್ಪತ್ರೆಯಲ್ಲಿ ದಾಖಲಾಗಲು ವ್ಯವಸ್ಥೆ ಕಲ್ಪಿಸಿ, ವೇತನಸಹಿತ ಆರೋಗ್ಯ ರಜೆಯನ್ನು ಮಂಜೂರು ಮಾಡುವಂತೆ ಹಾಗೂ ಅವರು 3 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ/ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯದೇ ನಿರ್ಲಕ್ಷ್ಯವಹಿಸಿದಲ್ಲಿ ನೇರವಾಗಿ ಕಾರ್ಮಿಕರೇ ಹೊಣೆಗಾರರನ್ನಾಗಿ ಮಾಡಿ ಆದೇಶ ಹೊರಡಿಸಬೇಕಾಗಿರುತ್ತದೆ.
9. ತ್ಯಾಜ್ಯ ನಿರ್ವಹಣೆಯನ್ನು ಮೂರನೇ ವ್ಯಕ್ತಿಗೆ ಹೊರಗುತ್ತಿಗೆ ನೀಡಿ ಜಿಲ್ಲಾ ಮುಖ್ಯಸ್ಥರು ಅದನ್ನು ಉತ್ತಮವಾಗಿ ಮೇಲ್ವಿಚಾರಣೆ ಮಾಡುವುದು.
10. ಘನತ್ಯಾಜ್ಯ ವಿಲೇವಾರಿಗಾಗಿ ವೈಜ್ಞಾನಿಕ ವಿಧಾನಗಳನ್ನು ಅಭಿವೃದ್ಧಿಪಡಿಸಲು/ ಆಧುನೀಕರಣಗೊಳಿಸಲು ಸಂಶೋಧನೆ ನಡೆಸುವುದು, ತ್ಯಾಜ್ಯ ನಿರ್ವಹಣೆಗಾಗಿ ನೀತಿ, ನಿಯಮ, ಕಾನೂನುಗಳನ್ನು ರೂಪಿಸುವುದು ಮತ್ತು ತ್ಯಾಜ್ಯದ ಸಂಸ್ಕರಣೆಯನ್ನು ಶಕ್ತಿ–ವ್ಯವಸ್ಥೆಯನ್ನಾಗಿ ಪರಿವರ್ತಿಸುವಂತಹ ವೈಜ್ಞಾನಿಕ ವ್ಯವಸ್ಥೆಗಳಿಗೆ ಪ್ರೋತ್ಸಾಹಿಸಬೇಕು.
11. ಸಿಂಗಪೂರದಲ್ಲಿರುವಂತೆಯೇ ಡಿಬಿಓಓ ಮಾದರಿಯನ್ನು ವಿದ್ಯುತ್ ಉತ್ಪಾದಿಸಲು ಯೋಜಿಸಬಹುದು ಮತ್ತು ಸುಟ್ಟಬೂದಿಯನ್ನು ಗೊಬ್ಬರವಾಗಿ ಕೂಡಾ ಬಳಸಬಹುದು. ಈ ಯೋಜನೆಯನ್ನು ಪ್ರಾಯೋಗಿಕವಾಗಿ ಒಂದು ಸಣ್ಣ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಬಹುದು ಮತ್ತು ಅದರ ಆಧಾರದ ಮೇಲೆ ಅದನ್ನು ಉಳಿದ ಜಿಲ್ಲೆಗಳಿಗೆ ವಿಸ್ತರಿಸಬಹುದು.
12. ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಲು ಅಗತ್ಯವಾದ ಹಣಕಾಸು ಪ್ರತ್ಯೇಕವಾಗಿ ಒದಗಿಸಬೇಕು, ತರಬೇತಿ ಘಟಕಗಳನ್ನು ಸ್ಥಾಪಿಸಬೇಕು. ಕಾರ್ಮಿಕರಿಗೆ ಕಾಲಕಾಲಕ್ಕೆ ತರಬೇತಿಯನ್ನು ನೀಡಬೇಕು.
13. ಸ್ಯಾನಿಟೇಶನ್‌ಗಾಗಿ ಮೂಲಸೌಕರ್ಯ (ಯುಜಿಡಿ) ಅಭಿವೃದ್ಧಿ ಮಾಡುವುದು. ಇದಕ್ಕಾಗಿ ನಿರ್ಧಿಷ್ಟವಾಗಿ ಕಾಲಮಿತಿ ಜಾರಿ ಮಾಡಿ ಅದರೊಳಗೆ ಅಭಿವೃದ್ಧಿ ಮಾಡಬೇಕು.



ಸಿಂಗಪೂರದಲ್ಲಿ ಅತೀ ಪ್ರಸಿದ್ಧವಾದ ಪಾರ್ಕ್‌ನ್ನು ಸ್ವಚ್ಛಗೊಳಿಸುವಂತಹ
ಕಾರ್ಮಿಕರೊಂದಿಗೆ ಸಂವಾದ ನಡೆಸಿದ ಕ್ಷಣ



A Night Soil Collection Worker 1980s
Photo Credit: Forging a Greener Tomorrow: Singapore's Environmental Journey From Slum to Eco-city

ಸಿಂಗಪೂರ ದೇಶದಲ್ಲಿ 1980ರಲ್ಲಿಯೂ ಸಹ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯೂ ಜೀವಂತವಾಗಿದ್ದು, ಈಗ ಸಂಪೂರ್ಣವಾಗಿ ಯು.ಜಿ.ಡಿ ಸಿಸ್ಟಮ್ ಆಗಿ ಬದಲಾವಣೆಗೊಳಿಸಿರುತ್ತಾರೆ.




**ಪಾರ್ಲಿಮೆಂಟ್ ಹೌಸ್ ಸಿಂಗಪೂರದಲ್ಲಿ ಅಧ್ಯಯನ ಪ್ರವಾಸ**

ರಾಜ್ಯದ ಸಫಾಯಿ ಕರ್ಮಚಾರಿ ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಪ್ರತಿಭಾವಂತ ಮಕ್ಕಳನ್ನು  ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಎಲ್ಲಾ ಅಧಿಕಾರಿಗಳು ಒಳಗೊಂಡಂತೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.



ಮೈಸೂರು ಜಿಲ್ಲೆಯಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ





**ಮೈಸೂರು ಜಿಲ್ಲೆಯಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ**




**ಕಲಬುರ್ಗಿ ಜಿಲ್ಲೆಯಲ್ಲಿ ನಡೆದ ಸಫಾಯಿ ಕರ್ಮಚಾರಿಗಳ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ.**




**ಮೈಸೂರಿನ ಕುದುರೆಮೂಳದ ಸಫಾಯಿ ಕರ್ಮಚಾರಿಗಳ ಕಾಲೋನಿಯಲ್ಲಿ ಇರುವ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಅಲ್ಲಿನ ಸಫಾಯಿ ಕರ್ಮಚಾರಿಗಳ ಮಕ್ಕಳ ಶಿಕ್ಷಣದ ಬಗ್ಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಲಾಯಿತು.**



**ದಾವಣಗೆರೆ ಜಿಲ್ಲೆಯಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ**



**ಹಾಸನ ಜಿಲ್ಲೆಯಲ್ಲಿ ನಡೆದ ಸಫಾಯಿ ಕರ್ಮಚಾರಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ.**



**ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದ ಪೌರಕಾರ್ಮಿಕರ ಕುಂದುಕೊರತೆಗಳ ಸಭೆ**



ಕರ್ನಾಟಕದಲ್ಲಿ ಪ್ರಥಮ ಬಾರಿಗೆ ದೇವನಹಳ್ಳಿಯಲ್ಲಿ ನಿರ್ಮಿಸಲಾಗಿರುವ ಮಲ ಸಂಸ್ಕರಣಾ ಘಟಕ ವೀಕ್ಷಣೆ



ಬಾಗಲಕೋಟೆಯಲ್ಲಿ ಪೌರಕಾರ್ಮಿಕರಿಂದ ಏರ್ಪಡಿಸಿದ ವಸ್ತುಪ್ರದರ್ಶನದ ವೀಕ್ಷಣೆ



ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಸಫಾಯಿ ಕರ್ಮಚಾರಿಗಳ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ.



ಗದಗ್‌ನಲ್ಲಿ ನಿರ್ಮಿಸಲಾಗಿರುವ ಪೌರಕಾರ್ಮಿಕರ ವಿಶ್ರಾಂತಿಗೃಹವನ್ನು ವೀಕ್ಷಿಸಿದ ಕ್ಷಣ.



ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
ಮತ್ತು ಅಭಿವೃದ್ಧಿ ನಿಗಮ, ಬೆಂಗಳೂರು
ರಾಜ್ಯ ಮಟ್ಟದ ಒಂದು ದಿನದ ಕಾರ್ಯಾಗಾರ
ದಿನಾಂಕ : 14-03-2023
ಸಮಯ : 10-00 ಗಂಟೆ
ಮುಕ್ತ ವಿಶ್ವವಿದ್ಯಾನಿಲಯ ಆವರಣ, ಮೈಸೂರು
RECEPTION
PLASTIC-
FREE ZONE




ನಿಯಮ ಮತ್ತು ನಿಯಮ 2013ರ ಪರಿಣಾಮಕಾರಿ ಅನುಷ್ಠಾನ





# ನಾನು ಕಂಡ ಸಫಾಯಿ ಕರ್ಮಚಾರಿಗಳ ಬದುಕು

ಸಫಾಯಿ ಕರ್ಮಚಾರಿಗಳು ಪ್ರತಿನಿತ್ಯ ಬೆಳಗಿನ ಜಾವ 5 ಗಂಟೆಗೆ ತಮ್ಮ ವೃತ್ತಿಯನ್ನು ಪ್ರಾರಂಭಿಸುತ್ತಾರೆ. ಈ ಸಂದರ್ಭದಲ್ಲಿ ತಮ್ಮ ಕುಟುಂಬದ ಮಕ್ಕಳ ಪೋಷಣೆಯನ್ನು ಮಾಡಲು ಅಸಾಧ್ಯವಾಗಿರುತ್ತದೆ. ಪುರುಷ ಮತ್ತು ಮಹಿಳೆ ಇಬ್ಬರೂ ಕೆಲಸವನ್ನು ಮಾಡುತ್ತಿರುತ್ತಾರೆ. ಇವರ ಮಕ್ಕಳ ಲಾಲನೆ ಮತ್ತು ಪೋಷಣೆಯು ಬಹಳ ಕಷ್ಟಕರವಾಗಿದ್ದು, ಇವರಿಗೆ ಶಿಕ್ಷಣವನ್ನು ನೀಡಲು ಸಹಾ ಬಹಳಷ್ಟು ಜನ ವಿಫಲರಾಗಿರುತ್ತಾರೆ. ಸಾರ್ವಜನಿಕರು ತಮ್ಮ ದಿನನಿತ್ಯದ ಕೆಲಸಕ್ಕೆ ಹಾಜರಾಗುವಷ್ಟರಲ್ಲಿ ಕೊಳಕನ್ನು ಸ್ವಚ್ಛಗೊಳಿಸಿರುತ್ತಾರೆ. ಇತರರು ಉತ್ತಮ ಗುಣಮಟ್ಟದ ಆರೋಗ್ಯಕ್ಕಾಗಿ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಕಾಯಕ ಸೇವೆಯ ರೂಪದಲ್ಲಿ ತಮ್ಮ ಕೆಲಸವನ್ನು ತಾವು ಮಾಡುತ್ತಿರುತ್ತಾರೆ. ಇನ್ನೂ ಪ್ರತಿನಿತ್ಯ ಧೂಳು, ಕಸ ಇತರೆ ಕಲುಷಿತ ವಸ್ತುಗಳೊಂದಿಗೆ ನೇರವಾಗಿ ಸಂಪರ್ಕವಿರುವ ಹಿನ್ನೆಲೆಯಲ್ಲಿ ಇವರ ಆರೋಗ್ಯ ಸ್ಥಿತಿಯು ಬಹಳಷ್ಟು ಕಷ್ಟಕರದಿಂದ ಕೂಡಿದ್ದು, ಸರಿಯಾದ ರೀತಿಯಲ್ಲಿ ಪೌಷ್ಠಿಕ ಆಹಾರವು ದೊರೆಯದೆ ಅಕಾಲಿಕ ಮರಣಹೊಂದುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಕುಟುಂಬದ ಮಕ್ಕಳ ವಿದ್ಯಾಭ್ಯಾಸದ ಕೊರತೆಯಿಂದಾಗಿ ಇದೇ ವೃತ್ತಿಯನ್ನೇ ಪ್ರಾರಂಭಿಸುತ್ತಾರೆ. ಸರಿಯಾದ ರೀತಿಯ ಸೂರುಗಳಿಲ್ಲದೆ ರಸ್ತೆ ಬದಿಗಳಲ್ಲಿ ದೊಡ್ಡದೊಡ್ಡ ಕಾಲುವೆಗಳ ಬಳಿಯಲ್ಲಿ ಇವರ ಜೀವನವನ್ನು ನಡೆಸುತ್ತಿರುತ್ತಾರೆ. ಪ್ರತಿನಿತ್ಯ ಸ್ವಚ್ಛಗೊಳಿಸುವ ಹಿನ್ನಲೆಯಲ್ಲಿ ರಜಾ ಸೌಲಭ್ಯವೂ ದೊರೆಯದೆ ವರ್ಷದ 365 ದಿನಗಳು ತಮ್ಮ ಸೇವೆಯಲ್ಲಿ ಮಗ್ನರಾಗಿರುತ್ತಾರೆ. ಇದನ್ನೆಲ್ಲವನ್ನೂ ಮನಗಂಡು ಇವರ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ಬದಲಾವಣೆ ಮಾಡುವ ನಿಟ್ಟಿನಲ್ಲಿ ದಿನಾಂಕ:01.12.2020ರಂದು ಆಯೋಗದ ಅಧಿಕಾರವನ್ನು ಘನ ಸರ್ಕಾರ ವಹಿಸಿದ ನಂತರ ರಾಜ್ಯದ ಪೌರಕಾರ್ಮಿಕರ ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಶ್ರೇಯೋಭಿವೃದ್ಧಿಗಾಗಿ ಎಲ್ಲಾ ಜಿಲ್ಲೆಗಳಿಗೂ ಖುದ್ದಾಗಿ ಭೇಟಿ ನೀಡಿ ನಗರ ಸ್ಥಳೀಯ ಸಂಸ್ಥೆ, ಗ್ರಾಮಪಂಚಾಯಿತಿ ಹಾಗೂ ಇತರೆ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು/ಸ್ವಚ್ಛತಾ ಕಾರ್ಮಿಕರೊಂದಿಗೆ ನೇರಸಂವಾದ ಕಾರ್ಯಕ್ರಮವನ್ನು ನಡೆಸಿ ಅವರ ದೂರುಗಳನ್ನು ಆಲಿಸಲಾಗಿರುತ್ತದೆ. ಇತರೆ ಸಾರ್ವಜನಿಕರು ತದನಂತರ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿಯ ಎಲ್ಲಾ ಅಧಿಕಾರಿಗಳನ್ನು ಒಳಗೊಂಡಂತೆ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸಲಾಗಿರುತ್ತದೆ. ಕೆಲವೊಂದು ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಅಪರ/ಪ್ರಧಾನ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಂಡಿರುತ್ತೇನೆ. ಕೆಲವೊಂದು ಸಮಸ್ಯೆಗಳ ಕುರಿತು ಮಾನ್ಯ ಮುಖ್ಯಮಂತ್ರಿಗಳಿಗೆ ಶಿಫಾರಸ್ಸುಗಳನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ರಾಜ್ಯದ ಇತಿಹಾಸದಲ್ಲಿಯೇ

ಪ್ರಪ್ರಥಮ ಬಾರಿಗೆ ಪೌರಕಾರ್ಮಿಕರನ್ನು ಖಾಯಂಗೊಳಸಲು ಹಾಗೂ ಅವರಿಗೆ ವಸತಿ, ವೈದ್ಯಕೀಯ ಇನ್ನಿತರ ಸೌಲಭ್ಯಗಳನ್ನು ನೀಡುವಲ್ಲಿ ಯಶಸ್ವಿಯಾಗಿರುತ್ತೇವೆ.

ರಾಜ್ಯದಲ್ಲಿನ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ನಿರ್ಮೂಲನೆ ಮಾಡಲು ಎಂ.ಎಸ್ ಕಾಯ್ದೆ 2013ನ್ನು ಸಂಪೂರ್ಣವಾಗಿ ಅನುಷ್ಠಾನಗೊಳಸಲು ಆಯೋಗದಿಂದ ಎಲ್ಲಾ ಅಧಿಕಾರಿಗಳಗೆ ತರಬೇತಿಗಳನ್ನು ನೀಡಲಾಗಿರುತ್ತದೆ ಹಾಗೂ ಎಂ.ಎಸ್ ಕಾಯ್ದೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಹಾ ಕ್ರಮಕೈಗೊಂಡಿರುತ್ತೇವೆ. ಆದರೂ ಸಹ ಕಾರ್ಮಿಕರು ಸೆಪ್ಟಿಕ್‌ಟ್ಯಾಂಕ್ ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ಮೃತಪಡುತ್ತಿರುತ್ತಾರೆ, ಆಯೋಗವು ತನ್ನ ವ್ಯಾಪ್ತಿಯ ಒಳಗೆ ಎಲ್ಲಾ ಅಧಿಕಾರವನ್ನು ಚಲಾಯಿಸಿ ಕಾಯ್ದೆಯನ್ನು ಅನುಷ್ಠಾನಗೊಳಸುವಲ್ಲಿ ಬಹಳಷ್ಟು ಶ್ರಮಿಸುತ್ತಿರುತ್ತದೆ. ಗುರುತಿಸಿದಂತಹ ಹಲವು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಗೆ ಸಫಾಯಿ ಕರ್ಮಚಾರಿ ಅಬಿವೃದ್ಧಿ ನಿಗಮದಿಂದ ಸಾಲ ಸೌಲಭ್ಯಗಳನ್ನು ನಮ್ಮ ಅವಧಿಯಲ್ಲಿ ನೀಡಲು ಶ್ರಮವಹಿಸಿರುತ್ತೇನೆ ಹಾಗೂ ಶಾಶ್ವತ ಪುನರ್ವಸತಿಯನ್ನು ಕಲ್ಪಿಸಲು, ರಾಷ್ಟ್ರೀಯ ಕಾನೂನು ಶಾಲೆರವರೊಂದಿಗೆ ಚರ್ಚಿಸಿ ಎಂ.ಎಸ್ ಕಾಯ್ದೆ 2013ರ ನಿಯಮಗಳನ್ನು ರಾಜ್ಯ ಸರ್ಕಾರದಿಂದ ರೂಪಿಸಲು ಸಹಾ ಶ್ರಮಿಸಿರುತ್ತೇನೆ. ಐ.ಪಿ.ಡಿ. ಸಾಲಪ್ಪ ವರದಿ, ಚಂದ್ರಶೇಖರ್ ವರದಿ, ರಾಷ್ಟ್ರೀಯ ಕಾನೂನು ಶಾಲಾ ವರದಿಗಳ ಅನ್ವಯ ಸಫಾಯಿ ಕರ್ಮಚಾರಿ ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಗೆ ಸೌಲಭ್ಯಗಳನ್ನು ನೀಡಿದಲ್ಲಿ ಸಫಾಯಿ ಕರ್ಮಚಾರಿಗಳ ಬದುಕು ಹಸನಾಗುವುದು. ಇದನ್ನು ಸಂಬಂಧಪಟ್ಟ ಪ್ರಾಧಿಕಾರಗಳ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಲಿ ಎಂದು ಕೋರುತ್ತೇನೆ.

**"ಮೇಣ ತಾನು ಉರಿದು, ಬೆಳಕು ನೀಡುವುದು, ಮೇಣಕ್ಕೂ ಗೊತ್ತು ತಾನು ಸುಡುತ್ತೇನೆ ಎಂದು. ಆದರೂ ಬೆಳಕು ನೀಡುವುದು, ಪೌರಕಾರ್ಮಿಕರ ಕೆಲಸವೂ ಹಾಗೆ ತಾನು ಸ್ವಚ್ಛಗೊಳಸುವ ಸಂದರ್ಭದಲ್ಲಿ ಕಸ, ಧೂಳು, ತ್ಯಾಜ್ಯದಿಂದ ಉತ್ಪತ್ತಿಯಾಗುವ ವಿಷ ಅನಿಲ, ಇತರೆ ಕಲುಷಿತ ವಸ್ತುಗಳಂದ ಆರೋಗ್ಯ ಹಾಳಾಗುತ್ತದೆಂದು ತಿಳದರೂ, ಸಾರ್ವಜನಿಕರ ಆರೋಗ್ಯವನ್ನು ಕಾಪಾಡಲು ತನ್ನ ಆಯಸ್ಸನ್ನೇ ತ್ಯಾಗಮಾಡುವರು. ಇಂತಹ ಪೌರಕಾರ್ಮಿಕ ಸೇವೆಯನ್ನು ಮಾಡಲು ನನಗೆ ಅವಕಾಶ ಕಲ್ಪಿಸಿದ್ದಕ್ಕೆ ಸರ್ಕಾರಕ್ಕೆ ಕೋಟಿಕೋಟಿ ಧನ್ಯವಾದಗಳನ್ನು ತಿಳಸಿ, ಪೌರಕಾರ್ಮಿಕರು ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಬದುಕು ಹಸನಾಗಲೆಂದು ಆಶೈಸುತ್ತೇನೆ"**

**ಇಂತಿ,**

ಸಹಿ/–

**ಎಂ.ಶಿವಣ್ಣ (ಕೋಟೆ)**
**ಅಧ್ಯಕ್ಷರು,**
**(ಸಂಪುಟ ದರ್ಜೆ ಸಚಿವರ ಸ್ಥಾನಮಾನ)**
**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ**
**ಆಯೋಗ, ಬೆಂಗಳೂರು**